ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 31 ಗುರುವಾರ 2024

ಸಂಪುಟ: 45 | ಸಂಚಿಕೆ: 195 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಅಯೋಧ್ಯೆಯ ಬಾಲರಾಮನ ಶಿಲ್ಪಿ ಅರುಣ್ ಯೋಗಿರಾಜ್, ಮಾಜಿ ಸಿಎಂ ಎಂ.ವೀರಪ್ಪ ಮೊಯ್ಲಿ, ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ಡಾ.ಮೈಸೂರು ಸತ್ಯನಾರಾಯಣ, ಜನ್ನಿ, ಡಿ.ರಾಮು, ಡಾ.ಪದ್ಮಾಶೇಖರ್, ಪಿ.ರಾಜಗೋಪಾಲ, ಶ್ರೀಮತಿ ಪುಟ್ಟೀರಮ್ಮ ಸೇರಿದಂತೆ

69 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ




ಅರುಣ್ ಯೋಗಿರಾಜ್



ಪಿ.ರಾಜಗೋಪಾಲ


ಡಾ.ಪದ್ಮಾಶೇಖರ್


ಶ್ರೀಮತಿ ಪುಟ್ಟೀರಮ್ಮ


ಡಿ.ರಾಮು


ಹೆಚ್.ಜನಾರ್ಧನ


ಹೇಮಾಚೌಧರಿ


ಎಂ.ವೀರಪ್ಪ ಮೊಯ್ಲಿ

ಬೆಂಗಳೂರು, ಅ.30(ಕೆಎಂಶಿ)–ಅಯೋಧ್ಯೆ ಬಾಲರಾಮನ ಶಿಲ್ಪಿ ಅರುಣ್ ಯೋಗಿರಾಜ್, ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ಮಾಜಿ ಸಚಿವೆಯೂ ಆದ ಸಾಹಿತಿ ಬಿ.ಟಿ.ಲಲಿತಾ ನಾಯಕ್, ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಎಸ್.ವಿ.ರಂಗನಾಥ್, ಡಾ.ಮೈಸೂರು ಸತ್ಯನಾರಾಯಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ 69 ಗಣ್ಯರು ಮತ್ತು ಸಂಸ್ಥೆಗಳು ಪ್ರಸಕ್ತ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಶಿಲ್ಪಕಲೆಯಲ್ಲಿ, ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಹೆಚ್. ಜನಾರ್ಧನ (ಜೆನ್ನಿ), ಡಿ.ರಾಮು ಅವರಿಗೆ ರಂಗಭೂಮಿ ಕ್ಷೇತ್ರದಲ್ಲಿ ವಿದುಷಿ ಶ್ರೀಮತಿ ಲಲಿತಾರಾವ್ ಅವರಿಗೆ ನೃತ್ಯ ಕ್ಷೇತ್ರದಲ್ಲಿ, ವೈದ್ಯಕೀಯ ಕ್ಷೇತ್ರದಲ್ಲಿ ಡಾ.ಮೈಸೂರು ಸತ್ಯನಾರಾಯಣ, ಮಂಡ್ಯದ ಪಿ.ರಾಜಗೋಪಾಲ ಅವರಿಗೆ ಸಂಗೀತ ಕ್ಷೇತ್ರದಲ್ಲಿ ಚಾಮರಾಜನಗರದ ಶ್ರೀಮತಿ ಪುಟ್ಟೀರಮ್ಮ ಅವರಿಗೆ ಕೃಷಿ ಕ್ಷೇತ್ರದಲ್ಲಿ ಕೊಡಗಿನವರಾದ ಮೈಸೂರಿನ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್ ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಲಾಗಿದೆ.

ನವೆಂಬರ್ 1ರಂದು ಸಂಜೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರಿಗೆ ಚಿನ್ನದ ಪದಕ ಹಾಗೂ ಐದು ಲಕ್ಷ ರೂ. ಗೌರವದೊಂದಿಗೆ ಸನ್ಮಾನಿಸಲಿದ್ದಾರೆ.

ಜಾನಪದ, ಚಲನಚಿತ್ರ ಸಂಗೀತ, ನೃತ್ಯ, ಆಡಳಿತ, ವೈದ್ಯಕೀಯ, ಸಮಾಜ ಸೇವೆ, ಹೊರದೇಶ, ಹೊರನಾಡು, ಕೃಷಿ, ಪರಿಸರ, ತಂತ್ರಜ್ಞಾನ, ಮಾಧ್ಯಮ, ಸಹಕಾರ, ಯಕ್ಷಗಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರರಾದವರ ಪಟ್ಟಿ ಇಂತಿದೆ:

ಜಾನಪದ ಕ್ಷೇತ್ರ: ಇಮಾಮಸಾಬ ಎಂ. ವಲ್ಲೆಪನವರ, ಅಶ್ವರಾಮಣ್ಣ, ಕುಮಾರಯ್ಯ, ವೀರಭದ್ರಯ್ಯ, ನರಸಿಂಹಲು (ಅಂಧ ಕಲಾವಿದ), ಬಸವರಾಜ ಸಂಗಪ್ಪ ಹಾರಿವಾಳ, ಎಸ್.ಜಿ. ಲಕ್ಷ್ಮೀದೇವಮ್ಮ, ಪಿಚ್ಚಳ್ಳಿ ಶ್ರೀನಿವಾಸ, ಲೋಕಯ್ಯ ಶೇರ (ಭೂತಾರಾಧನೆ).

ಚಲನಚಿತ್ರ-ಕಿರುತೆರೆ: ಹೇಮಾಚೌಧರಿ, ನರಸಿಂಹಮೂರ್ತಿ.

ಸಂಗೀತ ಕ್ಷೇತ್ರ: ಪಿ.ರಾಜಗೋಪಾಲ, ಎ.ಎನ್.ಸದಾಶಿವಪ್ಪ.

ನೃತ್ಯ: ವಿದುಷಿ ಲಲಿತಾರಾವ್.

ಆಡಳಿತ ಕ್ಷೇತ್ರ: ಎಸ್.ವಿ.ರಂಗನಾಥ್

ವೈದ್ಯಕೀಯ ಕ್ಷೇತ್ರ: ಡಾ.ಜೆ.ಬಿ.ಬಿಡನಹಾಳ, ಡಾ. ಮೈಸೂರು ಸತ್ಯನಾರಾಯಣ, ಡಾ.ಲಕ್ಷ್ಮಣ ಹನುಮಂತಪ್ಪ ಬಿದರಿ.

ಸಮಾಜ ಸೇವೆ: ವೀರಸಂಗಯ್ಯ, ಹೀರಾಚಂದ್ ವಾಗ್ಮರೆ, ಮಲ್ಲಮ್ಮ ಸೂಲಗಿತ್ತಿ, ದಿಲೀಪ್ ಕುಮಾರ್.

ಸಂಕೀರ್ಣ ಕ್ಷೇತ್ರ: ಹುಲಿಕಲ್ ನಟರಾಜ್, ಹೆಚ್.ಆರ್. ಸ್ವಾಮಿ, ಪ್ರಹ್ಲಾದರಾವ್, ಕೆ.ಅಜಿತ್‌ಕುಮಾರ್ ರೈ, ಇರ್ಫಾನ್ ರಜಾಕ್, ವಿರೂಪಾಕ್ಷಪ್ಪ ರಾಮಚಂದ್ರಪ್ಪ ಹಾವನೂರು.

ಹೊರದೇಶ–ಹೊರನಾಡು: ಕನ್ನಯ್ಯ ನಾಯ್ಡು, ಡಾ.ತುಂಬೆ ಮೊಹಿಯುದ್ದೀನ್, ■9ನೇ ಪುಟಕ್ಕೆ

ಕೆಬಿಜಿಯವರ



ಭೂಮಂತ್ರ...

ಕರ್ನಾಟಕ ಭ್ರಷ್ಟಾಚಾರದ ಕೂಪವಾ...?

■ಪುಟ–4

ಸರ್ಕಾರಿ ಅಧಿಕಾರಿಗಳ ಐಡಿ ಕಾರ್ಡ್‌ಗೆ ಕೆಂಪು–ಹಳದಿ ಬಣ್ಣದ ಟ್ಯಾಗ್ ಕಡ್ಡಾಯ



ಬೆಂಗಳೂರು, ಅ.30– ಪ್ರತಿ ವರ್ಷ ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವ ಆಚರಿಸಲಾಗುತ್ತದೆ. ಕರ್ನಾಟಕ ರಾಜ್ಯ ಉದಯವಾಗಿ 50 ವರ್ಷವಾದ ಹಿನ್ನೆಲೆಯಲ್ಲಿ ಈ ಬಾರಿಯ ಕನ್ನಡ ರಾಜ್ಯೋತ್ಸವವನ್ನು ಬಹಳಷ್ಟು ವಿಜೃಂಭಣೆಯಿಂದ ಆಚರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ನಾಡಿನಾದ್ಯಂತ ಕನ್ನಡ ಕಲರವ ಮನೆ-ಮನವನ್ನು ಮುಟ್ಟಿಸಲು ಮುಂದಾಗಿದೆ. ಇದರ ಭಾಗವೆಂಬಂತೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ನಿಯಮವನ್ನು ಸರ್ಕಾರ ಜಾರಿಗೆ ತಂದಿದೆ. ಸರ್ಕಾರಿ ಅಧಿಕಾರಿಗಳು ಧರಿಸುವ ಗುರುತಿನ ಚೀಟಿ ಟ್ಯಾಗ್ ನಾಡಧ್ವಜ ಬಣ್ಣದಲ್ಲೇ ಇರಬೇಕು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಸರ್ಕಾರಿ ಅಧಿಕಾರಿಗಳು ಕನ್ನಡ ರಾಜ್ಯೋತ್ಸವದೊಳಗೆ ಕಡ್ಡಾಯವಾಗಿ ಗುರುತಿನ ಚೀಟಿಗೆ ಕೆಂಪು–ಹಳದಿ ಬಣ್ಣದ ಟ್ಯಾಗ್ ಅನ್ನೇ ಧರಿಸಬೇಕು ಎಂದು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಡಿಪಿಎಆರ್ ಸೂಚನೆ ನೀಡಿದೆ.

ಐಟಿ ಕಂಪನಿಗಳ ಮೇಲೆ ಕನ್ನಡ ಬಾವುಟ ಕಡ್ಡಾಯ: ನ. 1ರಂದು ಎಲ್ಲ ಶಾಲೆ–ಕಾಲೇಜುಗಳು, ಕಾರ್ಖಾನೆಗಳು ಮತ್ತು ಐಟಿಬಿಟಿ ಕಚೇರಿಗಳ ಕಟ್ಟಡ ಮೇಲೆ ಕಡ್ಡಾಯವಾಗಿ ಕನ್ನಡ ಬಾವುಟ ಹಾರಿಸಲೇ ಬೇಕು ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸೂಚನೆ ನೀಡಿದ್ದರು. ■9ನೇ ಪುಟಕ್ಕೆ

ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣ: ನಟ ದರ್ಶನ್‌ಗೆ ಮಧ್ಯಂತರ ಜಾಮೀನು

ಜೈಲಿಂದ ಬಿಡುಗಡೆ


ಬಳ್ಳಾರಿ ಜೈಲಿನಿಂದ ಬುಧವಾರ ಸಂಜೆ ಹೊರಬರುತ್ತಿರುವ ನಟ ದರ್ಶನ್

ಬೆಂಗಳೂರು, ಅ.30–ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್‌ಗೆ ಹೈಕೋರ್ಟ್ ಆರು ವಾರಗಳ ಕಾಲ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ್ದು, 131 ದಿನ ಜೈಲಿನಲ್ಲಿದ್ದ ದರ್ಶನ್ ಇಂದು ಸಂಜೆ ಜೈಲಿನಿಂದ ಬಿಡುಗಡೆ ಹೊಂದಿದ್ದಾರೆ.

ಈ ಹಿಂದೆ ದರ್ಶನ್ ಸಲ್ಲಿಸಿದ್ದ ಜಾಮೀನು ಅರ್ಜಿ ಸೆಷನ್ಸ್ ಕೋರ್ಟ್‌ನಲ್ಲಿ ವಜಾಗೊಂಡಿತ್ತು. ಆದರೆ ಈ ಬಾರಿ ಬೆನ್ನುಹುರಿ ನೋವಿಗೆ ಶಸ್ತ್ರ ಚಿಕಿತ್ಸೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿ ದರ್ಶನ್ ಸಲ್ಲಿಸಿದ್ದ ಮನವಿಯನ್ನು ಪುರಸ್ಕರಿಸಿದ ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರಿದ್ದ ಏಕ ಸದಸ್ಯ ಪೀಠ ಜಾಮೀನು ಮಂಜೂರು ಮಾಡಿದೆ. ಪಾಸ್‌ಪೋರ್ಟ್ ಅನ್ನು ನ್ಯಾಯಾಲಯಕ್ಕೆ ಒಪ್ಪಿಸಬೇಕು. ವಿಚಾರಣಾ ನ್ಯಾಯಾಲಯದ ವ್ಯಾಪ್ತಿಯಿಂದ ಹೊರ ಹೋಗಬಾರದು. 2 ಲಕ್ಷ ರೂ. ಬಾಂಡ್, ಇಬ್ಬರ ಶ್ಯೂರಿಟಿ, ಸಾಕ್ಷಿ ಮೇಲೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಬೆದರಿಕೆ ಹಾಕಬಾರದು. ಒಂದು ವಾರದಲ್ಲಿ ವೈದ್ಯಕೀಯ ಶಿಫಾರಸು ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಸಾಕ್ಷಿಗಳನ್ನು ಸಂಪರ್ಕಿಸಬಾರದು. ಸಾಕ್ಷ್ಯ ನಾಶ ಮಾಡ ಬಾರದು. ಜಾಮೀನನ್ನು ■9ನೇ ಪುಟಕ್ಕೆ

ಡಿಕೆಶಿ ಸ್ವಾಗತ; ಜಮೀರ್‌ಗೆ ಖುಷಿ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಆರೋಪಿ ನಟ ದರ್ಶನ್‌ಗೆ ಜಾಮೀನು ಮಂಜೂರು ಆಗಿರುವುದು ಸ್ವಾಗತಾರ್ಹ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರೆ, ತಮಗೆ ಖುಷಿ ತಂದಿದೆ ಎಂದು ಸಚಿವ ಜಮೀರ್ ಅಹಮದ್ ಖಾನ್ ಪ್ರತಿಕ್ರಿಯಿಸಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆಶಿ, ಕೊಲೆ ಪ್ರಕರಣದಲ್ಲಿ ದರ್ಶನ್‌ಗೆ ಮಧ್ಯಂತರ ಜಾಮೀನು ನೀಡಿರುವ ಹೈಕೋರ್ಟ್ ತೀರ್ಪನ್ನು ಸರ್ಕಾರ ಗೌರವಯುತವಾಗಿ ಸ್ವಾಗತಿಸುತ್ತದೆ. ನ್ಯಾಯಾಲಯದ ತೀರ್ಪನ್ನು ನಾವು ಪ್ರಶ್ನಿಸುವುದಿಲ್ಲ ಎಂದಿದ್ದಾರೆ. ಇದೇ ವಿಚಾರವಾಗಿ ಹಾವೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಜಮೀರ್ ಅಹಮದ್, ದರ್ಶನ್ ನನಗೆ ಆತ್ಮೀಯರಾಗಿರುವ ಕಾರಣದಿಂದ ಅವರಿಗೆ ಜಾಮೀನು ಸಿಕ್ಕಿರುವುದು ಸಹಜವಾಗಿಯೇ ಖುಷಿ ತಂದಿದೆ. ಈ ಪ್ರಕರಣಕ್ಕೂ ಮುನ್ನ ನಾನು ಹಾಗೂ ದರ್ಶನ್ ತಿಂಗಳಿಗೆ ಎರಡು ಬಾರಿ ಭೇಟಿಯಾಗುತ್ತಿದ್ದೆವು ಎಂದಿದ್ದಾರೆ.

ಅಯೋಧ್ಯೆಯಲ್ಲಿ ದೀಪೋತ್ಸವ: 25 ಲಕ್ಷಕ್ಕೂ ಹೆಚ್ಚು ದೀಪ ಬೆಳಗಿಸಿ 2 ಗಿನ್ನಿಸ್ ದಾಖಲೆ



ನವದೆಹಲಿ: ಉತ್ತರ ಪ್ರದೇಶದ ಸರಯೂ ನದಿಯ ದಡದಲ್ಲಿರುವ ಅಯೋಧ್ಯೆಯಲ್ಲಿ ಇಂದು (ಬುಧವಾರ) ಅದ್ಭುತ ದೀಪೋತ್ಸವವನ್ನು ಆಚರಿಸಲಾಗಿದೆ.

ಹೆಚ್ಚಿನ ಜನರು ಏಕಕಾಲದಲ್ಲಿ ಆರತಿ ಬೆಳಗುವ ಮೂಲಕ ಎರಡು 'ಗಿನ್ನಿಸ್ ವಿಶ್ವ ದಾಖಲೆ'ಯನ್ನು ನಿರ್ಮಿಸಿದೆ. ಈ ಮೂಲಕ ನಗರದ ಹಿಂದಿನ 22.23 ಲಕ್ಷ ದೀಪಗಳ ದಾಖಲೆಯನ್ನು ಮುರಿದಿದೆ. 25 ಲಕ್ಷಕ್ಕೂ ಹೆಚ್ಚು ಮಣ್ಣಿನ ದೀಪಗಳನ್ನು ಒಟ್ಟಿಗೆ ಬೆಳಗಿಸುವುದರೊಂದಿಗೆ ಮತ್ತು 1,121 ವೇದಾಚಾರ್ಯರು (ಧಾರ್ಮಿಕ ಶಿಕ್ಷಕರು) ಏಕಕಾಲದಲ್ಲಿ ಆರತಿ ಮಾಡುವ ಮೂಲಕ ಎರಡು ದಾಖಲೆಗಳನ್ನು ನಿರ್ಮಿಸಿದ್ದಾರೆ.

ಗಿನ್ನೆಸ್ ವಿಶ್ವ ದಾಖಲೆಗಳ ತೀರ್ಪುಗಾರ ಪ್ರವೀಣ್ ಪಟೇಲ್ ಅವರು ಗಿನ್ನೆಸ್ ಸಲಹೆಗಾರ ನಿಶ್ಚಲ್ ಭರೋತ್ ಅವರೊಂದಿಗೆ ಅಯೋಧ್ಯೆಗೆ ಭೇಟಿ ನೀಡಿದ್ದರು. ಬುಧವಾರ ಸಂಜೆ ಹೊಸ ದಾಖಲೆಗಳನ್ನು ಪ್ರಕಟಿಸಿದ್ದಾರೆ. ಹೆಚ್ಚಿನ ಜನರು ಏಕಕಾಲದಲ್ಲಿ ಆರತಿ ಬೆಳಗುವುದು ಮತ್ತು ದೀಪಗಳ ದೊಡ್ಡ ಪ್ರದರ್ಶನಕ್ಕಾಗಿ ಮಾರ್ಗಸೂಚಿಗಳ ಅನ್ವಯ ಒಂದಲ್ಲ ಎರಡು ಗಿನ್ನೆಸ್ ವರ್ಲ್ಡ್ ರೆಕಾರ್ಡ್ ಪ್ರಶಸ್ತಿಗಳನ್ನು ಘೋಷಿಸುತ್ತಿರುವುದು ಅತ್ಯಂತ ಸಂತೋಷವಾಗಿದೆ ಎಂದು ಪಟೇಲ್ ಹೇಳಿದ್ದಾರೆ.

ಅಯೋಧ್ಯೆಯಲ್ಲಿ ದೀಪೋತ್ಸವ ಸಂಪ್ರದಾಯ 2017ರಲ್ಲಿ ಯೋಗಿ ಆದಿತ್ಯನಾಥ್ ನೇತೃತ್ವದ ಸರ್ಕಾರ ರಚನೆಯೊಂದಿಗೆ ಪ್ರಾರಂಭವಾಯಿತು. 2017ರಲ್ಲಿ 51 ಸಾವಿರ ದೀಪಗಳನ್ನು ಬೆಳಗುವ ಮೂಲಕ ಪ್ರಾರಂಭವಾಗಿ, 2019ರಲ್ಲಿ 4.10 ಲಕ್ಷಕ್ಕೆ ಏರಿತು. 2020ರಲ್ಲಿ 6 ಲಕ್ಷಕ್ಕೂ ಹೆಚ್ಚು ಮತ್ತು 2021ರಲ್ಲಿ 9 ಲಕ್ಷಕ್ಕೂ ಹೆಚ್ಚು ದೀಪ ಬೆಳಗಿ ಗಿನ್ನೆಸ್ ವಿಶ್ವ ದಾಖಲೆ ಬರೆದಿತ್ತು

ಉಪ ಚುನಾವಣೆಯ ಜೆಡಿಎಸ್ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ

ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ, ಹೆಚ್.ಡಿ.ರೇವಣ್ಣಗೆ ಕೊಕ್


ಜಿ.ಟಿ.ದೇವೇಗೌಡ


ಹೆಚ್.ಡಿ.ರೇವಣ್ಣ

ಬೆಂಗಳೂರು, ಅ.30– ಸಂಡೂರು, ಶಿಗ್ಗಾಂವಿ ಹಾಗೂ ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಪಕ್ಷದ ಸ್ಟಾರ್ ಪ್ರಚಾರಕರ ಪಟ್ಟಿಯನ್ನು ಜೆಡಿಎಸ್ ಬಿಡುಗಡೆ ಮಾಡಿದೆ. ಆದರೆ ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡರು, ಹಿರಿಯ ಶಾಸಕ ಹೆಚ್.ಡಿ.ರೇವಣ್ಣರ ಹೆಸರಿಲ್ಲದೆ ಇರುವುದು ಅಚ್ಚರಿಗೆ ಕಾರಣವಾಗಿದೆ.

ಒಟ್ಟು 40 ನಾಯಕರನ್ನು ಒಳಗೊಂಡ ಪಟ್ಟಿ ಇದಾಗಿದ್ದು, ಇದರಲ್ಲಿ ಹೆಚ್.ಡಿ. ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಶಾಸಕರಾದ ಜಿ.ಡಿ. ಹರೀಶ್‌ಗೌಡ, ಮಂಜು, ಮಾಜಿ ಸಚಿವ ಸಾರಾ ಮಹೇಶ್ ಸೇರಿದಂತೆ ಶಾಸಕರು, ಮಾಜಿ ಶಾಸಕರು ಒಳಗೊಂಡಿದ್ದಾರೆ.


ಚನ್ನಪಟ್ಟಣ ಉಪ ಚುನಾವಣೆಗೆ ನಿಖಿಲ್ ಕುಮಾರಸ್ವಾಮಿ ಅವರು ಜೆಡಿಎಸ್‌ನಿಂದ ಸ್ಪರ್ಧೆ ಮಾಡಿದ್ದಾರೆ. ಅವರ ಪರ ಪ್ರಚಾರಕ್ಕೆ ಜೆಡಿಎಸ್ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ಶಾಸಕರು, ಮಾಜಿ ಶಾಸಕರು, ಮಾಜಿ, ಹಾಲಿ ಸಂಸದರು, ಹಿರಿಯ ನಾಯಕರು, ಮಾಜಿ, ಹಾಲಿ ಎಂಎಲ್‌ಸಿಗಳ ಹೆಸರಿದೆ.

ಜೆಡಿಎಸ್‌ನಲ್ಲಿ ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಜಿ.ಟಿ.ದೇವೇಗೌಡರ ಪರಿಗಣಿಸಿರಲಿಲ್ಲ. ಆದರೂ ಅವರು ಪಕ್ಷದ ಚಟುವಟಿಕೆಯಲ್ಲಿ ಸಕ್ರಿಯರಾಗಿದ್ದರು. ಲೋಕಸಭಾ ಚುನಾವಣೆಯಲ್ಲಿ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿದ್ದರು. ಆದರೆ, ಮೈಸೂರು ದಸರಾ ವೇಳೆ ಮುಡಾ ಹಗರಣಕ್ಕೆ ಸಂಬಂಧಪಟ್ಟಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ರಾಜೀನಾಮೆ ವಿಚಾರದ ಬಗ್ಗೆ ಮಾತನಾಡಿದ್ದರು. ಇದು ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು.

ಎಡಗೈ–ಬಲಗೈ ತಲಾ ಶೇ.50ರಷ್ಟು

ಮೀಸಲಾತಿ ಹಂಚಿಕೊಳ್ಳುವ ನಿರ್ಧಾರ

ಗೃಹ ಸಚಿವ ಡಾ.ಪರಮೇಶ್ವರ್ ನೇತೃತ್ವದ ಪರಿಶಿಷ್ಟ ಸಮುದಾಯದ ಮುಖಂಡರ ಸಭೆಯಲ್ಲಿ ತೀರ್ಮಾನ


ಡಾ.ಜಿ.ಪರಮೇಶ್ವರ್

ಬೆಂಗಳೂರು, ಅ.30(ಕೆಎಂಶಿ)– ಪರಿಶಿಷ್ಟ ಸಮುದಾಯಗಳಿಗೆ ಇರುವ ಮೀಸಲಾತಿಯಲ್ಲಿ ಎಡಗೈ ಮತ್ತು ಬಲಗೈ ಪಂಗಡಗಳಿಗೆ ಶೇಕಡ 50ರಷ್ಟು ಮೀಸಲಾತಿಯನ್ನು ಸಮಾನವಾಗಿ ಹಂಚಿಕೆ ಮಾಡಿಕೊಳ್ಳುವ ಮಹತ್ವದ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಪರಿಶಿಷ್ಟರಿಗೆ ಒಳಮೀಸಲಾತಿ ಕಲ್ಪಿಸುವ ಸಂಬಂಧ ಪೂರ್ಣಾಧಿಕಾರವನ್ನು ಆಯಾ ರಾಜ್ಯ ಸರ್ಕಾರಗಳಿಗೆ ನೀಡಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಅನ್ವಯ ಕರ್ನಾಟಕ ಸರ್ಕಾರ ಸಮಾನವಾಗಿ ಹಂಚಿಕೆ ಮಾಡಲು ಮುಂದಾಗಿದೆ.

ಸುಪ್ರೀಂಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಸದಾಶಿವ ಆಯೋಗ ವರದಿ ಬದಿಗಿರಿಸಿ ಪರಿಶಿಷ್ಟ ಸಮುದಾಯದಡಿ ಬರುವ ಪಂಗಡಗಳ ಜನಪ್ರತಿನಿಧಿಗಳು ಹಾಗೂ ಮುಖಂಡರ ಸಭೆಯಲ್ಲಿ ಈ ಸರ್ವಸಮ್ಮತ ತೀರ್ಮಾನ ಕೈಗೊಳ್ಳಲಾಗಿದೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆದ ಸಮುದಾಯದ ಮುಖಂಡರ ಸಭೆಯಲ್ಲಿ, ಸಚಿವರು ಮಂಡಿಸಿದ ಸೂತ್ರಕ್ಕೆ ಒಕ್ಕೊರಲಿನ ಸಮ್ಮತಿ ವ್ಯಕ್ತವಾಗಿದೆ.

ಕಳೆದ 2011ರ ಜನಗಣತಿ ಆಧಾರದ ಮೇಲೆ ಒಳಮೀಸಲಾತಿ ಹಂಚಿಕೆ ಮಾಡಿದರೆ ಎಲ್ಲರಿಗೂ ನ್ಯಾಯ ದೊರೆಯುವುದಿಲ್ಲ. ಹಾಗಾಗಿ 2025–26ರಲ್ಲಿ ನಡೆಯಲಿರುವ ಜನಗಣತಿ ಅಂಶಗಳ ಆಧಾರದ ಮೇಲೆ ಮೀಸಲಾತಿ ಹಂಚಿಕೆ ಮಾಡಿಕೊಳ್ಳೋಣ. ಹೊಸ ಜನಗಣತಿ ಅಂಕಿ–ಅಂಶ ಬರುವವರೆಗೂ ಎಡಗೈ–ಬಲಗೈ ಈಗಿನ ಮೀಸಲಾತಿಯನ್ನು ಸಮನಾಗಿ ಹಂಚಿಕೊಳ್ಳೋಣ. ವರದಿ ಬಂದ ನಂತರ ಜನಸಂಖ್ಯೆ ಪ್ರಮಾಣದ ಆಧಾರದ ಮೇಲೆ ಹಂಚಿಕೆ ಮಾಡಿಕೊಳ್ಳೋಣ ಎಂಬ ಡಾ.ಪರಮೇಶ್ವರ್ ಸೂತ್ರಕ್ಕೆ ಸಭೆ ಒಪ್ಪಿಗೆ ಸೂಚಿಸಿದೆ. ತದನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಮುದಾಯದ ಮುಖಂಡರ ನಿರ್ಧಾರವನ್ನು ತಿಳಿಸಿ, ಸಂಪುಟ ಸಭೆ ಮುಂದಿಟ್ಟು ಸಂವಿಧಾನಾತ್ಮಕವಾಗಿ ಹಂಚಿಕೆ ಮಾಡುವಂತೆ ಮಾಡಿದ ಮನವಿಗೆ ಸಮ್ಮತಿಯೂ ದೊರೆತಿದೆ. ಕಳೆದ ಸೋಮವಾರ ನಡೆದ ಮಂತ್ರಿ ಮಂಡಲ ಸಭೆಯಲ್ಲಿ ವಿಷಯ ಮಂಡನೆ ಮಾಡಿ ಸಂವಿಧಾನ ಬದ್ಧವಾಗಿ ಒಳಮೀಸ ಲಾತಿ ಹಂಚಿಕೆ ಮಾಡುವ ಉದ್ದೇಶ ದಿಂದ ಹೈಕೋರ್ಟ್‌ನ ನಿವೃತ್ತ ನ್ಯಾಯ ಮೂರ್ತಿ ಒಬ್ಬರ ನೇತೃತ್ವದಲ್ಲಿ ಆಯೋಗ ರಚಿಸಲು ನಿರ್ಧರಿಸಲಾಗಿದೆ. ಆಯೋಗ ಮೂರು ತಿಂಗಳಲ್ಲಿ ವರದಿ ನೀಡುವಂತೆ ಸಮಯ ನಿಗದಿ ಮಾಡಲಾಗಿದ್ದು, ಸರ್ಕಾರ ಆಯೋಗಕ್ಕೆ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಲಿದೆ.

2011ರ ನಂತರ ದೇಶದಲ್ಲಿ ಜನಗಣತಿ ನಡೆದಿಲ್ಲ, ಮುಂದಿನ ವರ್ಷ ದೇಶದಲ್ಲಿ ಜನಗಣತಿ ನಡೆಸಲು ಕೇಂದ್ರ ಸರ್ಕಾರ ಸಜ್ಜಾಗಿದೆ, ಈ ವರದಿ ಬರುವವರೆಗೆ ಕಾಯುವುದು ಒಳ್ಳೆಯದು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಅಗ್ರಹಾರದಲ್ಲಿ ಪುನೀತ್ ರಾಜ್‌ಕುಮಾರ್ ಸ್ಮರಣೆ



ಮೈಸೂರಿನ ಅಗ್ರಹಾರದಲ್ಲಿ ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್‌ನಿಂದ ಪುನೀತ್ ರಾಜ್‌ಕುಮಾರ್ ಅವರ 3ನೇ ವರ್ಷದ ಪುಣ್ಯಸ್ಮರಣೆ ಆಯೋಜಿಸಲಾಗಿತ್ತು.

ಮೈಸೂರು, ಅ. 30– ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರು ನಮ್ಮಿಂದ ಮರೆಯಾಗಿ 3 ವರ್ಷ ಕಳೆದಿವೆ. ಅವರ ನೆನಪು ಕನ್ನಡಿಗರಲ್ಲಿ ಅಚ್ಚಳಿಯದೆ ಉಳಿದಿದೆ. ಅವರು ಜನರ ಮನಸ್ಸಿನಲ್ಲಿ ಇಂದಿಗೂ ಅಮರವಾಗಿದ್ದಾರೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಹೇಳಿದರು.

ಮೈಸೂರಿನ ಅಗ್ರಹಾರದಲ್ಲಿ ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ವತಿಯಿಂದ ನಟ ಪುನೀತ್ ರಾಜ್‌ಕುಮಾರ್ ಅವರ 3ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ವಿವಿಧ ಜಾತಿಯ ಗಿಡ ನೆಟ್ಟು ಅವರು ಮಾತನಾಡಿದರು. ಇಡೀ ದೇಶವೇ ಪುನೀತ್ ಅವರನ್ನು ಇಂದಿಗೂ ಸ್ಮರಣೆ ಮಾಡುತ್ತದೆ. ಅವರ ಒಳ್ಳೆಯ ಕಾರ್ಯಗಳು ಎಲ್ಲರಿಗೂ ದಿಕ್ಸೂಚಿಯಾಗಿವೆ. ಅವರ ಆದರ್ಶ ಗುಣಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಶ್ರೀ ಶಂಕರ ಮಠದ ಧರ್ಮದರ್ಶಿ ರಾಮಚಂದ್ರ ರಾಯರು, ಎಂ.ಆರ್.ಬಾಲಕೃಷ್ಣ, ನಾಗಶ್ರೀ ಸುಚೀಂದ್ರ, ವಿದ್ಯಾ, ಗೋಪಾಲ್ ರಾವ್, ಪಣೀಶ್, ರಂಗನಾಥ್, ನಾಗಭೂಷಣ್, ಕೆ.ಎಂ.ನಿಶಾಂತ್, ಜ್ಯೋತಿ ಹಾಗೂ ಇನ್ನಿತರರು ಹಾಜರಿದ್ದರು.

ಅಂತರ ವಿವಿ ಕಬಡ್ಡಿ ಪಂದ್ಯಾವಳಿಗೆ ಮೈಸೂರು ತಂಡ



2024–25ನೇ ಸಾಲಿನ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಕಬಡ್ಡಿ ಪುರುಷರ ಪಂದ್ಯಾವಳಿ ಅ.30ರಿಂದ ನ.3ರವರೆಗೆ ಚೆನ್ನೈನ ಎಸ್.ಆರ್.ಎಂ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದೆ. ಸದರಿ ಪಂದ್ಯಾವಳಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕಬಡ್ಡಿ ಪುರುಷರ ತಂಡ ಭಾಗವಹಿಸಲಿದೆ. ಚಿತ್ರದಲ್ಲಿ (ನಿಂತಿರುವವರು: ಎಡದಿಂದ ಬಲ:) ರತನ್, ರಾಕೇಶ, ಭರತ್, ಮಹೇಶ್‌ನಾಯಕ, ಚರಣ್, ವರುಣ್ ಖಂಡ್ಲೆ, ಸಾಗರ್ ಗಾವಡೆ, ಬಳಪ್ಪ ಉಮ್ರೆ, ಓಂಕಾರ ಸುಭಾಷ್, (ಕುಳಿತಿರುವವರು:) ಸುದರ್ಶನ್, ರಮೇಶ, ತರಬೇತುದಾರರು, ಡಾ.ಸಿ.ವೆಂಕಟೇಶ್, ನಿರ್ದೇಶಕರು, ಸುಭಾಷ್, ವ್ಯವಸ್ಥಾಪಕರು, ಶಶಾಂಕ್ ಇದ್ದಾರೆ.

ಅತಿಥಿ ಉಪನ್ಯಾಸಕರ ಹುದ್ದೆಗೆ ನೇರ ಸಂದರ್ಶನ

ಮೈಸೂರು, ಅ. 30– ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ 2024–25ನೇ ಶೈಕ್ಷಣಿಕ ಸಾಲಿಗೆ ಆಂಗ್ಲ ಭಾಷಾ ವಿಭಾಗ, ಕರ್ನಾಟಕ ಸಂಗೀತ ಗಾಯನ ವಿಭಾಗ ಹಾಗೂ ಹಿಂದೂಸ್ಥಾನಿ ಸಂಗೀತ ಗಾಯನ ವಿಭಾಗದ ಅತಿಥಿ ಉಪನ್ಯಾಸಕರ ಹುದ್ದೆಗೆ ಸಂಬಂಧಿಸಿದಂತೆ ನ. 5 ರಂದು ಬೆಳಗ್ಗೆ 11.30ಕ್ಕೆ ನೇರ ಸಂದರ್ಶನವನ್ನು ಆಯೋಜಿಸಲಾಗಿದೆ. ಅರ್ಹ ಅಭ್ಯರ್ಥಿಗಳು (ನೆಟ್, ಕೆಸೆಟ್ ಉತ್ತೀರ್ಣರಾದವರು, ಪಿಹೆಚ್.ಡಿ ಪದವಿ ಪಡೆದಿರುವವರು) ತಮ್ಮ ಮೂಲ ದಾಖಲೆಗಳೊಂದಿಗೆ ಹಾಜರಾಗಲು ಪ್ರಕಟಣೆ ತಿಳಿಸಿದೆ.

ಹಾಡಿ ಮಕ್ಕಳಿಗೆ ನೋಟ್ ಪುಸ್ತಕ ವಿತರಣೆ

ಮೈಸೂರು, ಅ.30(ಜಿಎ)–ಕನ್ನಡ ರಾಜ್ಯೋತ್ಸವದ ಅಂಗವಾಗಿ ಅರಣ್ಯ ದಂಚಿನ ಹಾಡಿ ಶಾಲೆಯ ಮಕ್ಕಳಿಗೆ ನೋಟ್ ಪುಸ್ತಕ ಹಂಚುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಾಜ ಸೇವಕ ಚೇತನ್ ದೇವರಾಜ್ ಈ ವಿಷಯ ತಿಳಿಸಿ, ಸರ್ಕಾರಿ ಶಾಲೆಗಳನ್ನು ಉಳಿಸುವ ಸಲುವಾಗಿ 'ನಿಮ್ಮ ದೇಣಿಗೆ ನಿಮ್ಮ ಶಾಲೆಗೆ' ಅಭಿಯಾನದಡಿ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಸರ್ಕಾರಿ ಶಾಲೆಗಳಿಗೆ ಬಣ್ಣ ಹಚ್ಚುವ, ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಾಗೂ ಆಟೋಪಕರಣಗಳನ್ನು ನೀಡುತ್ತಿದ್ದು, ಇದೀಗ ಮಕ್ಕಳಿಗೆ ನೋಟ್ ಪುಸ್ತಕ ಹಂಚುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದೆ. ನಾಗರಹೊಳೆ ಅರಣ್ಯ ದಂಚಿನ ಹುಸ್ಕೂರು, ಬಳ್ಳೆ ಮೊದಲಾದ ಹಾಡಿಗಳ ಸರ್ಕಾರಿ ಶಾಲೆಗಳ ಮಕ್ಕಳಿಗೆ ತಲಾ 2ರಂತೆ ಒಂದು ಸಾವಿರ ನೋಟ್ ಪುಸ್ತಕಗಳನ್ನು ನೀಡಲಾಗಿದೆ ಎಂದರು.

ಗೋಷ್ಠಿಯಲ್ಲಿ ಪೌರಕಾರ್ಮಿಕ ಮಹಿಳೆ ಲತಾ, ಆಟೋ ಚಾಲಕ ಅನಂತ್, ಪ್ರದೀಪ್ ಕೃಷ್ಣೇಗೌಡ ಉಪಸ್ಥಿತರಿದ್ದರು.


ಕರ್ನಾಟಕ ನಾಣ್ಯ ಪರಂಪರೆ; ಉಪನ್ಯಾಸ

ಮೈಸೂರು, ಅ.30–ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖಾ ವತಿಯಿಂದ ನ.30ರಂದು ಬೆಳಗ್ಗೆ 11 ಗಂಟೆಗೆ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರ ಕಚೇರಿಯಲ್ಲಿ 'ಕರ್ನಾಟಕ ನಾಣ್ಯ ಪರಂಪರೆ' ವಿಷಯದ ಕುರಿತಂತೆ ಶಿವಮೊಗ್ಗದ ಕುವೆಂಪು ವಿವಿ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಪಿಎಚ್.ಡಿ ಸಂಶೋಧನಾ ವಿದ್ವಾಂಸರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಂಪನ್ಮೂಲ ವ್ಯಕ್ತಿ ಗೌತಮ್ ಆರ್ ಜಂತಕಲ್ ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಆಸಕ್ತ ವಿದ್ಯಾರ್ಥಿಗಳು, ಇತಿಹಾಸ ಆಸಕ್ತರು, ಸಂಶೋಧಕರು, ಸಾರ್ವಜನಿಕರು ಭಾಗವಹಿಸಬಹುದು. ಮಾಹಿತಿಗೆ ದೂ.ಸಂ: 0821–2424671/ 2424673 ಅನ್ನು ಸಂಪರ್ಕಿಸಬಹುದು.


ಉದಯಗಿರಿ ವ್ಯಾಪ್ತಿಯ ನಾಲ್ವರು ನಾಪತ್ತೆ



ಸ್ವರೂಪ್



ಸೈಯದ್ ಇಫ್ರಜ್



ಅಮ್ರೀನ್



ಸೈಯದ್ ಉಮರ್

ಮೈಸೂರು,ಅ.30–ಪ್ರತ್ಯೇಕ ಪ್ರಕರಣಗಳಲ್ಲಿ ಮೈಸೂರಿನ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಾಲ್ವರು ನಾಪತ್ತೆಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ದಿವಂಗತ ಸೈಯದ್ ಇಲಿಯಾಸ್ ಅವರ ಪುತ್ರ ಸೈಯದ್ ಇಫ್ರಜ್ (27) ಸೆ.28ರಂದು ಮನೆಯಿಂದ ಹೊರ ಹೋದವರು ವಾಪಸ್ ಮನೆಗೆ ಬಂದಿಲ್ಲ ಎಂದು ದೂರು ದಾಖಲಾಗಿದೆ.

ದಿವಂಗತ ನಾರಾಯಣಸ್ವಾಮಿ ಅವರ ಪುತ್ರ ಸ್ವರೂಪ್ (38) ಸೆ.22ರಿಂದ ಕಾಣೆಯಾಗಿದ್ದಾರೆ. ಕಲೀಂವುಲ್ಲಾ ಖಾನ್ ಪತ್ನಿ ಅಮ್ರೀನ್ ಅಲಿಯಾಸ್ ಫರ್ಹಾನಾ ಸೆ.25ರಿಂದ ಕಾಣೆಯಾಗಿದ್ದಾರೆ. ಸೈಯದ್ ಇಕ್ಬಾಲ್ ಅವರ ಪುತ್ರ ಸೈಯದ್ ಮೊಹಮ್ಮದ್ ಉಮರ್ (22) ಅ.22ರಿಂದ ಕಾಣೆಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಉದಯಗಿರಿ ಪೊಲೀಸ್ ಠಾಣೆಗೆ ತಿಳಿಸಲು ಕೋರಲಾಗಿದೆ.

ನಿಧನ

ಅಟ್ರೆಂಗಡ ಎನ್. ಪೆಮ್ಮಯ್ಯ



ಮೈಸೂರು,ಅ.30–ಮೈಸೂರಿನ ಬೆಳವಾಡಿ ಅಮೃತೇಶ್ವರ ನಗರ ನಿವಾಸಿ ಅಟ್ರೆಂಗಡ ಎನ್. ಪೆಮ್ಮಯ್ಯ (93) ಅವರು ಮಂಗಳವಾರ ನಿಧನರಾದರು. ಮೃತರು ಪತ್ನಿ ದೇವಕಿ (ತಾಮನೆ ಮಂಡೇಪಂಡ), ಪುತ್ರ ದೀಪಕ್ ಉತ್ತಯ್ಯ, ಪುತ್ರಿಯರಾದ ಚಂಗಂಡ ಕವಿತಾ ಸೋಮಯ್ಯ, ವಾಲೇಚಂಡ ಶೋಭಾ ಸುರೇಶ್ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದು, ಇವರ ಅಂತ್ಯಕ್ರಿಯೆ ಇಂದು (ಬುಧವಾರ) ಮಧ್ಯಾಹ್ನ ಹೂಟಗಳ್ಳಿಯ ಎಸ್‌ಆರ್‌ಎಸ್ ಮುಕ್ತಿಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಳ ಮೀಸಲಾತಿ ಜಾರಿಗೆ ಹೊಸ ಆಯೋಗ ರಚಿಸಿರುವುದು ಉಪಚುನಾವಣೆಯ ಗಿಮಿಕ್

ಹಿರಿಯ ವಕೀಲ ಅರುಣ್‌ಕುಮಾರ್ ಆರೋಪ

ಮೈಸೂರು, ಅ.30(ಬಿಎಲ್‌ಯು)–ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ರಾಜ್ಯ ಕಾಂಗ್ರೆಸ್ ಸರ್ಕಾರ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಮತ್ತೊಂದು ಆಯೋಗ ರಚನೆ ಮಾಡಿರುವುದು ಉಪ ಚುನಾವಣೆಯ ರಾಜಕೀಯ ಗಿಮಿಕ್ ಅಷ್ಟೆ ಇದು ಓಟ್ ಬ್ಯಾಂಕ್‌ಗಾಗಿ ಮಾಡಿರುವ ಕುತಂತ್ರ ನಡೆ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಟೀಕಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಸಲ್ಲಿಕೆಯಾಗಿರುವ ಸದಾಶಿವ ಆಯೋಗದ ವರದಿಯನ್ನೇ ಜಾರಿಗೆ ತರುವ ಬದಲು, ಮತ್ತೊಂದು ಆಯೋಗ ರಚನೆ ಮಾಡಿರುವುದು ರಾಜಕೀಯ ಪ್ರೇರಿತ ಎಂದು ಆರೋಪಿಸಿದರು.

ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ಕಲ್ಪಿಸಲು ಈಗಾಗಲೇ ದತ್ತಾಂಶ ಸಂಗ್ರಹಿಸಿದ್ದರೆ ಅಂತಹ ರಾಜ್ಯದಲ್ಲಿ ಒಳ ಮೀಸಲಾತಿ ಜಾರಿಗೆ ತರಬಹುದು. ರಾಜಕೀಯ ಇಚ್ಛೆಗೆ ಅನುಗುಣವಾಗಿ ಯಾವ ರಾಜ್ಯವು ಆಂತರಿಕ ಮೀಸಲಾತಿ ಜಾರಿಗೆ ತರಬಾರದು ಎಂದು ಒಳ ಮೀಸಲಾತಿ ಕುರಿತ ತನ್ನ ತೀರ್ಪಿನಲ್ಲಿ ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿದೆ ಎಂದು ಅರುಣ್ ಕುಮಾರ್ ಉಲ್ಲೇಖಿಸಿದರು.

2011ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ 1.04,74,999 ಪರಿಶಿಷ್ಟ ಸಮುದಾಯದವರಿದ್ದಾರೆ. ಇದರ ಆಧಾರದ ಮೇಲೆ ಸದಾಶಿವ ಆಯೋಗ ವರದಿ ನೀಡಿದೆ. ಸದಾಶಿವ ಆಯೋಗದ ವರದಿ ಮತ್ತು ಮಾಧುಸ್ವಾಮಿ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ದತ್ತಾಂಶ ಆಧರಿಸಿ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರದಿಂದ 101 ಜಾತಿಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ. ಮಾದಿಗ ಮತ್ತು ಸಂಬಂಧಿತ ಜಾತಿಗಳಿಗೆ ಶೇಕಡ 6, ಹೊಲೆಯ ಮತ್ತು ಸಂಬಂಧಿತ ಜಾತಿಗಳಿಗೆ ಶೇಕಡ 5, ಬೋವಿ, ಲಂಬಾಣಿ ಮತ್ತು ಸಂಬಂಧಿತ ಜಾತಿಗಳಿಗೆ ಶೇಕಡ 3 ಹಾಗೂ ಇತರರಿಗೆ ಶೇಕಡ 1 ಮೀಸಲಾತಿ ವಿಂಗಡಿಸಿದೆ ಎಂದು ತಿಳಿಸಿದರು.

ಅಲ್ಲದೆ ಮಾಧುಸ್ವಾಮಿ ನೇತೃತ್ವದ ಉಪ ಸಮಿತಿ ಮೀಸಲಾತಿಯನ್ನು ಶೇಕಡ 15ರಿಂದ ಶೇಕಡ 17ಕ್ಕೆ ಹೆಚ್ಚಿಸಲು ಪ್ರಸ್ತಾಪಿಸಿತ್ತು. ಇದನ್ನು ಶೇಕಡ 6, 5.5, 4.5 ಮತ್ತು 1 ಎಂದು ವಿಂಗಡಿಸಿತು. ಇದನ್ನು ಜಾರಿಗೊಳಿಸುವ ಬದಲು ಈಗಿನ ಕಾಂಗ್ರೆಸ್ ಸರ್ಕಾರ ಮತ್ತೊಂದು ಹೊಸ ಆಯೋಗ ರಚನೆ ಮಾಡಿದೆ ಎಂದು ಹಿರಿಯ ವಕೀಲ ಅರುಣ್ ಕುಮಾರ್ ಆರೋಪಿಸಿದರು.

ಒಳ ಮೀಸಲಾತಿಗೊಳಪಡುವ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿರುವ ಕಾರಣ ಉಪ ಚುನಾವಣೆಯಲ್ಲಿ ಮತಗಳನ್ನು ಪಡೆಯಲು ರಾಜ್ಯ ಕಾಂಗ್ರೆಸ್ ಸರ್ಕಾರ ಒಳ ಮೀಸಲಾತಿ ಜಾರಿಗೆ ಮತ್ತೊಂದು ಆಯೋಗ ರಚನೆ ಮಾಡಿದೆ. ರಾಜಕೀಯ ಉದ್ದೇಶದಿಂದ ರಚನೆ ಮಾಡಿರುವ ಈ ಆಯೋಗ ಕಾನೂನಿನ ನಿಬಂಧನೆ ಹಾಗೂ ನೈಸರ್ಗಿಕ ನ್ಯಾಯ ತತ್ವಕ್ಕೆ ವಿರುದ್ಧವಾಗಿದೆ ಎಂದು ಆಪಾದಿಸಿದರು.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಒಳ ಮೀಸಲಾತಿಗೊಳಪಡುವ ಮುಗ್ಧ ಜನರ ದಿಕ್ಕು ತಪ್ಪಿಸಲು ಹೇಳಿಕೆ ಕೊಡುತ್ತಿದ್ದಾರೆ. ಸದಾಶಿವ ಆಯೋಗದ ವರದಿ ಮುಚ್ಚಿ ಹೋಗಿರುವ ಕಾರಣ ಮತ್ತೊಂದು ಆಯೋಗದ ವರದಿ ರಚನೆ ಮಾಡಲಾಗಿದೆ ಎಂದು ಸ್ಪಷ್ಟನೆ ನೀಡುತ್ತಿದ್ದಾರೆ. ಆದರೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಸದಾಶಿವ ನೀಡಿರುವ ಆಯೋಗದ ವರದಿ ಎಂದೆಂದಿಗೂ ಪ್ರಸ್ತುತವಾಗಿದ್ದು, ಇದರ ಆಧಾರದ ಮೇಲೆ ಈಗ ಒಳ ಮೀಸಲಾತಿ ಕಲ್ಪಿಸಬಹುದು ಎಂದು ಅರುಣ್‌ಕುಮಾರ್ ಅಭಿಪ್ರಾಯಪಟ್ಟರು.

ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಉಪಾಧ್ಯಕ್ಷರಾದ ಎಂ.ಶಿವಕುಮಾರ್, ದಾಸಯ್ಯ, ಬೂದಿತಿಟ್ಟು ರಾಜೇಂದ್ರ, ಖಜಾಂಚಿ ಚಂದ್ರಸೇನ ಸಾಗರ್ ಹಾಗೂ ಸುರೇಂದ್ರ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಪತ್ರಕರ್ತರ ಭವನದಲ್ಲಿ ಬುಧವಾರ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಹೊಸ ನೇಮಕಾತಿಯಾದರೆ ಅದು ಅಸಿಂಧು

ಒಳ ಮೀಸಲಾತಿ ಕಲ್ಪಿಸುವ ತನಕ ಹೊಸ ನೇಮಕಾತಿ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬಾರದು ಎಂದು ಅರುಣ್ ಕುಮಾರ್ ರಾಜ್ಯ ಸರ್ಕಾರವನ್ನು ಆಗ್ರಹಿಸಿದರು. ಯಾವುದೇ ನೇಮಕಾತಿ ನಿಲ್ಲಿಸುವುದಿಲ್ಲ ಎಂದು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ ಆಗಸ್ಟ್ 1ರ ಸುಪ್ರೀಂಕೋರ್ಟ್ ತೀರ್ಪಿನ ನಂತರ ಯಾವುದೇ ನೇಮಕಾತಿ ಆದರೂ ಅದನ್ನು ಸುಪ್ರೀಂಕೋರ್ಟ್ ಮೆಟ್ಟಿಲೇರಿ ರದ್ದು ಮಾಡಿಸುತ್ತೇವೆ ಎಂದು ಎಚ್ಚರಿಸಿದರು. ಈ ಸಂಬಂಧ ಈಗಾಗಲೇ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಕೂಡ ದಾಖಲಿಸಿದ್ದೇವೆ ಎಂದರು.

ಸರ್ಕಾರಿ ಹುದ್ದೆಗೆ ಆಸೆ ಪಟ್ಟು ಯಾರಾದರೂ ಹಣ ಕೊಟ್ಟು ಆಗಸ್ಟ್ 1ರ ನಂತರ ನೇಮಕಾತಿಯಾದರೆ ಅವರಿಗೆ ಮೋಸವಾಗುತ್ತದೆ. ಒಳ ಮೀಸಲಾತಿ ಜಾರಿ ತನಕ ಹೊಸ ನೇಮಕಾತಿಯಾದರೆ ಅದು ಸಿಂಧು ಆಗುವುದಿಲ್ಲ. ಆದ್ದರಿಂದ ಯಾರೂ ಕೂಡ ಹೊಸ ನೇಮಕಾತಿಗೊಳ್ಳಬಾರದು ಎಂದು ಹಿರಿಯ ವಕೀಲ ಅರುಣ್‌ಕುಮಾರ್ ಸಲಹೆ ನೀಡಿದರು.

ಕೆ.ಆರ್.ಬ್ಯಾಂಕ್ ನೂತನ ಅಧ್ಯಕ್ಷ ಬಸವರಾಜ್ ಬಸಪ್ಪ



ಶ್ರೀಕೃಷ್ಣ ರಾಜೇಂದ್ರ ಸಹಕಾರಿ ಬ್ಯಾಂಕ್‌ನ ನೂತನ ಅಧ್ಯಕ್ಷ ಬಸವರಾಜ್ ಬಸಪ್ಪ ಅವರನ್ನು ಅಭಿನಂದಿಸಲಾಯಿತು.

ಮೈಸೂರು,ಅ.30–ಮೈಸೂರಿನ ಶ್ರೀಕೃಷ್ಣ ರಾಜೇಂದ್ರ ಸಹಕಾರಿ ಬ್ಯಾಂಕ್ 2024–2029ನೇ ಸಾಲಿನ ಅಧ್ಯಕ್ಷರಾಗಿ ಮಾಜಿ ಉಪಾಧ್ಯಕ್ಷರಾದ ಬಸವರಾಜ್ ಬಸಪ್ಪ, ಉಪಾಧ್ಯಕ್ಷರಾಗಿ ಎಚ್.ಎನ್.ಸರ್ವಮಂಗಳ ಆಯ್ಕೆಯಾಗಿದ್ದಾರೆ. ಈ ವೇಳೆ ಬ್ಯಾಂಕ್‌ನ ನಿರ್ದೇಶಕ ಹೆಚ್.ವಿ.ಭಾಸ್ಕರ್, ಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ (ಪಾತಿ), ಜಿ.ಎಂ.ಪಂಚಾಕ್ಷರಿ, ಟಿ.ವಿ.ಗಣೇಶ್ ಮೂರ್ತಿ, ಕೆಎಂಪಿಕೆ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಜಿ.ರಾಘವೇಂದ್ರ ಲೋಕೇಶ್ ಕುಮಾರ್, ಶಿವಮೂರ್ತಿ, ಮಲ್ಲೇಶ್, ಮಹಾನ್ ಶ್ರೇಯಸ್, ಮಂಜಪ್ಪ, ತೀರ್ಥ ಕುಮಾರ್, ಮಂಜುನಾಥ್, ಬ್ಯಾಂಕ್ ಸಿಬ್ಬಂದಿ, ಸ್ನೇಹಿತರು ಶುಭಾಶಯ ಕೋರಿದರು.

ವಿದ್ಯುತ್ ನಿರ್ಮಾಣದ ಮಾರ್ಗಕ್ಕೆ ಚಾಲನೆ

ಮೈಸೂರು,ಅ.30–ಹುಣಸೂರು ತಾಲೂಕಿನ ಬೃಹತ್ ಕಾಮಗಾರಿ ವಿಭಾಗದ, ರತ್ನಪುರಿ (ಆಸ್ಪತ್ರೆ ಕಾವಲ್) ಗ್ರಾಮದಲ್ಲಿ ವಿದ್ಯುತ್ ಉಪಕೇಂದ್ರಕ್ಕೆ ಹಾಲಿ ಇರುವ ಜಿ.ವಿ.ಗುಡಿ ವಿ.ವಿ. ಕೇಂದ್ರದಿಂದ ಸುಮಾರು 6.955 ಕಿಮೀ ವಿದ್ಯುತ್ ಏಕಮುಖ ಮಾರ್ಗ ನಿರ್ಮಾಣ ಮಾಡುತ್ತಿದ್ದು, ವಿದ್ಯುತ್ ಮಾರ್ಗಗಳಲ್ಲಿ ನ.4 ರಂದು ಅಥವಾ ನಂತರದ ಯಾವುದೇ ದಿನಾಂಕದಂದು ವಿದ್ಯುತ್ ಹರಿಸಲಾಗುವುದು.

ಮಾರ್ಗವು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಆಸ್ಪತ್ರೆ ಕಾವಲ್, ಉದ್ದುರು ಕಾವಲ್, ತರಿಕಲ್ಲ ಕಾವಲ್, ತರಿಕಲ್, ತರಿಕಲ್ ನಾಲಾ ಹಳ್ಳದ ಕೊಪ್ಪಲು, ಧರ್ಮಪುರ, ಬಸ್ತಿಮಾದನಹಳ್ಳಿ, ಜಿ.ವಿ.ಗುಡಿ ಮತ್ತು ಕರಿಮುದ್ದನಹಳ್ಳಿ ಗ್ರಾಮಗಳಲ್ಲಿ ಹಾದು ಹೋಗುತ್ತದೆ.

ಆದ್ದರಿಂದ ಸಾರ್ವಜನಿಕರು ಗೋಪುರಗಳಿಗೆ ದನ–ಕರುಗಳನ್ನು ಕಟ್ಟುವುದು, ಲೋಹದ ಪಟ್ಟಿಯನ್ನು ತೆಗೆಯುವುದು, ಗೋಪುರಗಳನ್ನು ಹತ್ತುವುದು, ತಂತಿಗಳನ್ನು ಮುಟ್ಟುವುದು, ಗೋಪುರಗಳ ಕೆಳಗಡೆ ಮರಗಿಡಗಳನ್ನು ನೆಡುವುದು, ಗೋಪುರಗಳಿಗೆ ಬಳ್ಳಿ ಮತ್ತು ಹಗ್ಗ ಮುಂತಾದವುಗಳನ್ನು ಎಸೆಯುವುದು, ಗಾಳಿಪಟವನ್ನು ಗೋಪುರದ ಹತ್ತಿರ ಹಾರಿಸುವುದನ್ನು ಮಾಡುವುದು ತುಂಬಾ ಅಪಾಯಕಾರಿ ಹಾಗೂ ಪ್ರಾಣಹಾನಿಯಾಗುವ ಸಂಭವವಿರುತ್ತದೆ. ಈ ಸೂಚನೆಯನ್ನು ಉಲ್ಲಂಘಿಸಿದಲ್ಲಿ ಉಂಟಾಗುವ ಯಾವುದೇ ತರಹದ ಅಪಘಾತ ಅಥವಾ ಪ್ರಾಣಹಾನಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಜವಾಬ್ದಾರರಲ್ಲ ಎಂದು ಕವಿಪ್ರನಿನಿ.ನ ಬೃಹತ್ ಕಾಮಗಾರಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಸ್ತುಪ್ರದರ್ಶನದಲ್ಲಿ ಗಂಧದಗುಡಿ ಚಿತ್ರಕಲಾ ಪ್ರದರ್ಶನ



ವಸ್ತುಪ್ರದರ್ಶನದಲ್ಲಿ ಆಯೋಜಿಸಿದ್ದ ಗಂಧದಗುಡಿ ಚಿತ್ರಕಲಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಅ. 30–ಕರ್ನಾಟಕ ರತ್ನ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ನೆನಪಿನಲ್ಲಿ ದಸರಾ ಸಾಂಸ್ಕೃತಿಕ ಮತ್ತು ಮಹಿಳಾ ಮತ್ತು ಮಕ್ಕಳ ಸಮಿತಿ ವತಿಯಿಂದ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಗಂಧದಗುಡಿ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. 600ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸಿ ಪರಿಸರ ಚಿತ್ರಗಳನ್ನು ಬಿಡಿಸಿದರು.

8–12 ವರ್ಷದ ವಯೋಮಾನ: ಪ್ರಥಮ–ಕಮಲಾಕರ್, ದ್ವಿತೀಯ– ಅದಿತಿ, ತೃತೀಯ–ಸ್ನೇಹಾರ್ಚನ, 12–18 ವರ್ಷದ ವಯೋಮಾನ: ಪ್ರಥಮ–ಚೇತನ್, ದ್ವಿತೀಯ –ವಿಷ್ಣು ಪ್ರಸಾದ, ತೃತೀಯ–ತ್ರಿಷಾ, 18 ವರ್ಷದ ಮೇಲ್ಪಟ್ಟವರಲ್ಲಿ ಮಧುಸೂದನ್, ಸಾನಿಕ, ಮಧುಸೂದನ್, ಪ್ರಶಸ್ತಿ ಪಡೆದುಕೊಂಡರು

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಮಾತನಾಡಿ, ಪುನೀತ್ ರಾಜಕುಮಾರ್ ಅವರ ಒಂದೊಂದು ಚಿತ್ರವು ಯುವಪೀಳಿಗೆಗೆ ಉತ್ತಮ ಸಂದೇಶ ನೀಡಿವೆ. ಹಲವಾರು ಬ್ರಾಂಡಿಂಗ್ ರಾಯಭಾರಿಯಾಗಿ ಮತ್ತು ಸರ್ಕಾರಿ ಜಾಹೀರಾತು ಮತ್ತು ಖಾಸಗಿ ವಾಹಿನಿಯ ನಿರೂಪಕರಾಗಿ ಬರುವ ಸಂಭಾವನೆಯನ್ನು ಅನಾಥಶ್ರಮ, ವೃದ್ಧಾಶ್ರಮಗಳಿಗೆ ಕೊಡುಗೆ ನೀಡಿ ಹಲವಾರು ಮಂದಿಗೆ ಆಸರೆಯಾಗಿದ್ದರು ಎಂದು ಹೇಳಿದರು.


ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಪುನೀತ್ ರಾಜಕುಮಾರ್ ಅವರು ತಂದೆ ಡಾ. ರಾಜ್‌ಕುಮಾರ್ ಅವರಿಂದ ಪ್ರೇರೇಪಿತರಾಗಿ ಪ್ರೇಮದ ಕಾಣಿಕೆ ಚಿತ್ರಕ್ಕೆ ಬಾಲ್ಯದ ದಿನದಲ್ಲೇ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾದರು. ಪುನೀತ್ ಅವರ ನೆನಪಿನಲ್ಲಿ ವಸ್ತುಪ್ರದರ್ಶನದಲ್ಲಿ ಯಾವುದಾದರು ವೃತ್ತಕ್ಕೆ ನಾಮಕರಣ ಮಾಡಲಿ ಎಂದರು.

ಈ ಸಂದರ್ಭದಲ್ಲಿ ಕೆ.ಆರ್.ಬ್ಯಾಂಕ್ ನಿರ್ದೇಶಕ ಶಿವಪ್ರಕಾಶ್, ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಮಹಿಳಾ ಮತ್ತು ಮಕ್ಕಳ ಸಮಿತಿ ಅಧ್ಯಕ್ಷೆ ಶಾರದಾ ಸಂಪತ್, ನಿರೂಪಕ ಅಜಯ್ ಶಾಸ್ತ್ರಿ, ರತನ್ ಚಿಕು, ದೀಕ್ಷಿತ್, ರಂಗಸ್ವಾಮಿ, ಗುರುರಾಜ್, ಪದ್ಮನಾಭ್, ಜಗದೀಶ್, ನಾಗರತ್ನ, ಲತಾ, ಗಿರೀಶ್, ಸಚಿನ್ ನಾಯಕ, ನಾಗೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಿಶಬ್ದ ವಲಯಗಳಲ್ಲಿ ಪಟಾಕಿ ಸಿಡಿಸುವುದು ಕಡ್ಡಾಯ ನಿಷೇಧ

ಮೈಸೂರು,ಅ.30–ಮೈಸೂರು ನಗರದ ಕಮೀಷನರೇಟ್ ವ್ಯಾಪ್ತಿಯಲ್ಲಿರುವ ಶ್ರೀ ಚಾಮರಾಜೇಂದ್ರ ಮೃಗಾಲಯ, ಕುಕ್ಕರಹಳ್ಳಿ ಕೆರೆ ಪ್ರದೇಶ, ಕಾರಂಜಿ ಕೆರೆ ಪ್ರದೇಶ, ಲಿಂಗಾಂಬುದಿ ಕೆರೆ ಪ್ರದೇಶ, ಸಾರ್ವಜನಿಕ ಉದ್ಯಾನವನಗಳು, ಆಸ್ಪತ್ರೆ ಹಾಗೂ ನರ್ಸಿಂಗ್ ಹೋಂಗಳು, ಶೈಕ್ಷಣಿಕ ಸಂಸ್ಥೆಗಳು, ನ್ಯಾಯಾಲಯ ಹಾಗೂ ಧಾರ್ಮಿಕ ಸ್ಥಳಗಳ 100 ಮೀಟರ್ ಸುತ್ತಳತೆ ಪ್ರದೇಶವನ್ನು ಅ.30ರಿಂದ ನ.2ರ ಮಧ್ಯರಾತ್ರಿ 12 ಗಂಟೆಯವರೆಗೆ ನಿಶಬ್ದ ವಲಯ ಎಂದು ಘೋಷಿಸಲಾಗಿದೆ. ಈ ವಲಯಗಳಲ್ಲಿ ಯಾವುದೇ ರೀತಿಯ ಪಟಾಕಿ ಸಿಡಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.10.2024 ಗುರುವಾರ, ಮಳೆ ನಕ್ಷತ್ರ: ಸ್ವಾತಿ, 24.10.2024ರಿಂದ 05.11.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ರಂಗಭೂಮಿ ಟ್ರಸ್ಟ್, ಕೊಡಗು :** 'ಸತ್ಯವನ್ನೇ ಹೇಳುತ್ತೇವೆ' ನಾಟಕ, ರಚನೆ, ನಿರ್ದೇಶನ: ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.
- **ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ, ಶ್ರೀ ಮಹರ್ಷಿ ವಾಲ್ಮೀಕಿ ಗುರುಕುಲ ಸೇವಾ ಟ್ರಸ್ಟ್** : ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಾಲಯದಲ್ಲಿರುವ ಮೈಸೂರಿನ ದೊರೆ ಶ್ರೀ ಮಾರನಾಯಕರವರ ಪ್ರತಿಮೆಗೆ ಪುಷ್ಪಾರ್ಚನೆ, ಬೆಳಗ್ಗೆ 10ಕ್ಕೆ.
- **ತನುಮನ ಸಂಸ್ಥೆ :** ಧಮ್ಮ ಸಂಗೀತೋತ್ಸವ ಮತ್ತು ರಾಜ್ಯ ಮಟ್ಟದ ಧಮ್ಮ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಶಾಸಕ ಡಿ.ರವಿಶಂಕರ್, ಅಧ್ಯಕ್ಷತೆ: ಮಾಜಿ ಶಾಸಕ ಬಿ.ಹರ್ಷವರ್ಧನ್, ಪ್ರಶಸ್ತಿ ಪ್ರದಾನ: ಎಪಿಎಂಸಿ ಮಾಜಿ ಉಪಾಧ್ಯಕ್ಷ ಚಿಕ್ಕಜವರಪ್ಪ, ಮುಖ್ಯ ಅತಿಥಿಗಳು: ಹಿರಿಯ ಮುಖಂಡ ಹೆಚ್.ವಾಸು, ಆರ್.ಪಿ. ನಂಜುಂಡಸ್ವಾಮಿ, ಎ.ಆರ್. ಕಾಂತರಾಜು, ಮರಿ ಗೋವಿಂದರಾಜು, ಸ್ಥಳ: ರಮಾಗೋವಿಂದ ರಂಗಮಂದಿರ, ಸುಯೋಗ್ ಆಸ್ಪತ್ರೆ ಸಮೀಪ, ರಾಮಕೃಷ್ಣನಗರ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ:ಜಯಶ್ರೀ ಹೆಗಡೆ, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾಡಳಿತ, ಹಾಸನ, 8.45 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಾಂಬೆ ಜಯಶ್ರೀ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.30 ದೇವರನಾಮ–ವ್ಯಾಸರಾಯರ ರಚನೆಗಳು, 12.45 ಚಿತ್ರಗೀತೆಗಳು, 1.20 ಭಾವಗೀತೆಗಳು–ವಸುಧಾ ಶಾಸ್ತ್ರಿ, 2.40 ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಚರ್ಚೆ, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ: ಜಯಶ್ರೀ ಹೆಗಡೆ, 6.50 ಕೃಷಿರಂಗ –ಕಿಸಾನ್‌ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಸಾವಯವ ಕೃಷಿ ಹಾಗೂ ಉತ್ಪನ್ನಗಳ ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ : ಪುಣ್ಯಭೂಮಿ ಸಾವಯವ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ವಿ. ಆರ್. ಸುಬ್ಬೇಗೌಡ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಾಗೇಗೌಡ, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಯುವವಾಣಿ –ದೀಪಾವಳಿ ಹಬ್ಬದ ಸಂದರ್ಭದಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ. ಪ್ರಸ್ತುತಪಡಿಸುತ್ತಾರೆ ಮೈಸೂರಿನ ರಾಮಕೃಷ್ಣನಗರದ ಸವಿಗಾನ ಸಂಗೀತ ಶಾಲೆಯ ವಿದ್ಯಾರ್ಥಿಗಳು. ನಿರ್ದೇಶನ–ಗಾಯತ್ರಿ ಸತ್ಯನಾರಾಯಣ, 9.30 ಕನ್ನಡ ಭಾರತಿ, 10.00 ನಾಟಕ : ಇಂಥವರೂ ಇದ್ದಾರೆ, ರಚನೆ–ಬಿ. ಎಸ್. ಕೇಶವರಾವ್, ನಿರ್ಮಾಣ–ಉಮೇಶ್. ಎಸ್.ಎಸ್., 10.30 ಸವಿನೆನಪು

ದೀಪಾವಳಿ ಪ್ರಯುಕ್ತ ಮೈಸೂರು–ವಿಜಯಪುರ ವಿಶೇಷ ಎಕ್ಸ್‌ಪ್ರೆಸ್ ರೈಲು ಸೌಲಭ್ಯ

● ಮೈಸೂರು ರೈಲ್ವೆ ನಿಲ್ದಾಣದಲ್ಲಿ ಮೊಬೈಲ್ ಅನ್‌ರಿಸರ್ವ್ಡ್ ಟಿಕೆಟಿಂಗ್ ಸಿಸ್ಟಮ್ ಪ್ರಾಯೋಗಿಕ ಜಾರಿ ● ಹಬ್ಬದಲ್ಲಿ ಪ್ರಯಾಣಿಕರ ದಟ್ಟಣೆ ನಿರ್ವಹಿಸಲು ಅನೇಕ ಕ್ರಮ



ಬುಧವಾರ ಸಂಜೆ ಮೈಸೂರು ರೈಲ್ವೆ ನಿಲ್ದಾಣದಿಂದ ವಿಜಯಪುರಕ್ಕೆ ವಿಶೇಷ ಎಕ್ಸ್‌ಪ್ರೆಸ್ ರೈಲು ನಿರ್ಗಮಿಸಿತು.

ಮೈಸೂರು,ಅ.30(ಪಿಎಂ)– ನೈರುತ್ಯ ರೈಲ್ವೆ ವತಿಯಿಂದ ದೀಪಾವಳಿ ಹಬ್ಬದ ಪ್ರಯುಕ್ತ ಮೈಸೂರು–ಬಿಜಾಪುರ (ವಿಜಯಪುರ)–ಮೈಸೂರು ವಿಶೇಷ ಎಕ್ಸ್‌ಪ್ರೆಸ್ ರೈಲು ಸೌಲಭ್ಯ ಕಲ್ಪಿಸಲಾಗಿದೆ. ಅಲ್ಲದೆ, ಮೈಸೂರು ರೈಲ್ವೆ ನಿಲ್ದಾಣದಲ್ಲಿ ದೀಪಾವಳಿ ಸಂದರ್ಭದಲ್ಲಿ ಪ್ರಾಯೋಗಿಕವಾಗಿ ಮೊಬೈಲ್ ಅನ್‌ರಿಸರ್ವ್ಡ್ ಟಿಕೆಟಿಂಗ್ ಸಿಸ್ಟಮ್ ಪ್ರಾರಂಭಿಸಲಾಗಿದೆ.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಬುಧವಾರ ನೈರುತ್ಯ ರೈಲ್ವೆ ವಿಭಾಗೀಯ ವಾಣಿಜ್ಯ ಪ್ರಬಂಧಕರೂ ಆದ ಸಾರ್ವಜನಿಕ ಸಂಪರ್ಕ ಅಧಿಕಾರಿ ಗಿರೀಶ ಧರ್ಮರಾಜ ಕಲಗೊಂಡ ಈ ವಿಷಯ ತಿಳಿಸಿದರು. ಇಂದು (ಬುಧವಾರ) ಸಂಜೆ 6ಕ್ಕೆ ಮೈಸೂರಿನಿಂದ ಸದರಿ ವಿಶೇಷ ಎಕ್ಸ್‌ಪ್ರೆಸ್ ರೈಲು (ಸಂಖ್ಯೆ 06567) ನಿರ್ಗಮಿಸಿದ್ದು, ಅ.31 ರಂದು ಮಧ್ಯಾಹ್ನ 2ಕ್ಕೆ ವಿಜಯಪುರ ತಲುಪಲಿದೆ. ನ.3ರಂದು ಸಂಜೆ 7ಕ್ಕೆ ವಿಜಯಪುರದಿಂದ ಹೊರಡಲಿರುವ ವಿಶೇಷ ಎಕ್ಸ್‌ಪ್ರೆಸ್ ರೈಲು (ಸಂಖ್ಯೆ 06568) ನ.4ರಂದು ಮಧ್ಯಾಹ್ನ 2.20ಕ್ಕೆ ಮೈಸೂರಿಗೆ ಆಗಮಿಸಲಿದೆ ಎಂದು ಅವರು ತಿಳಿಸಿದರು.

ಮೈಸೂರಿನಿಂದ ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಪ್ರಯಾಣಿಸುತ್ತಾರೆ. ದೀಪಾವಳಿ ಸಂದರ್ಭದಲ್ಲಿ ಇದು ಸಾಮಾನ್ಯ. ಬೆಂಗಳೂರು ಮೂಲಕ ಈ ರೈಲು ಸಂಚರಿಸಲಿದೆ. ಇದಲ್ಲದೆ, ದಿನಕ್ಕೆ ಆಗಮನ–ನಿರ್ಗಮನ ಸೇರಿದಂತೆ 104 ರೈಲುಗಳು ಮೈಸೂರು ನಿಲ್ದಾಣದ ಮೂಲಕ ವಿವಿಧ ಮಾರ್ಗದಲ್ಲಿ ಸಂಚಾರ ನಡೆಸುತ್ತಿವೆ. ಈ ಪೈಕಿ ವಿಜಯಪುರಕ್ಕೂ ರೈಲುಗಳಿದ್ದು, ಇದರ ಹೊರತಾಗಿ ದೀಪಾವಳಿಗಾಗಿ ಈ ವಿಶೇಷ ಎಕ್ಸ್‌ಪ್ರೆಸ್ ಸೌಲಭ್ಯ ಕಲ್ಪಿಸಲಾಗಿದ್ದು, ಈ ಸಂಬಂಧ ಟಿಕೆಟ್ ದರದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನೈರುತ್ಯ ರೈಲ್ವೆಯಿಂದ ಪ್ರಯಾಣಿಕರ ದಟ್ಟಣೆ ನಿರ್ವಹಣೆಗೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಮೈಸೂರು ನಿಲ್ದಾಣದಲ್ಲಿ 52 ಸಾವಿರಕ್ಕೂ ಅಧಿಕ ಮಂದಿಯ ದಟ್ಟಣೆ ಪ್ರತಿದಿನ ಇರುತ್ತದೆ. ಹಬ್ಬದ ಸಂದರ್ಭದಲ್ಲಿ ಲಕ್ಷಕ್ಕೂ ಅಧಿಕ ಮಂದಿ ಮೀರುವ ಸಂಭವವೂ ಇರುತ್ತದೆ. ಮೈಸೂರು ರೈಲ್ವೆ ನಿಲ್ದಾಣದಲ್ಲಿ ಈ ದಸರಾ ಸಂದರ್ಭದಲ್ಲಿ ದಿನಕ್ಕೆ ಲಕ್ಷ ಮಂದಿಯ ಓಡಾಟವನ್ನು ನಿರ್ವಹಿಸಿದ್ದೇವೆ. ಒಟ್ಟಾರೆ ಸುಮಾರು 9 ಲಕ್ಷ ಜನರ ದಟ್ಟಣೆ ನಿರ್ವಹಣೆ ಮಾಡಿದ್ದೇವೆ. ಅಂತೆಯೇ ದೀಪಾವಳಿ ಸಂದರ್ಭದ ದಟ್ಟಣೆ ನಿರ್ವಹಿಸಲು ಮೈಸೂರು, ಹಾಸನ, ಅರಸೀಕೆರೆ, ದಾವಣಗೆರೆ ಮತ್ತು ಶಿವಮೊಗ್ಗ ಸೇರಿದಂತೆ ಪ್ರಮುಖ ನಿಲ್ದಾಣಗಳಲ್ಲಿ ಹೆಚ್ಚುವರಿ ಸಿಬ್ಬಂದಿ ಸಹ ನಿಯೋಜಿಸಲಾಗಿದೆ ಎಂದು ಹೇಳಿದರು.

ಟಿಕೆಟ್ ಖರೀದಿಗೆ ಎಂಯುಟಿಎಸ್ ವ್ಯವಸ್ಥೆ: ಮೈಸೂರು ರೈಲ್ವೆ ನಿಲ್ದಾಣದಲ್ಲಿ ಎಂಯುಟಿಎಸ್ (ಮೊಬೈಲ್ ಅನ್‌ರಿಸರ್ವ್ಡ್ ಟಿಕೆಟಿಂಗ್ ಸಿಸ್ಟಮ್) ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ದೀಪಾವಳಿ ಸಂದರ್ಭದಲ್ಲಿ ಪ್ರಾಯೋಗಿಕವಾಗಿ ಇದನ್ನು ಜಾರಿಗೊಳಿಸಿದ್ದು, ಯಾವುದೇ ಮಾರ್ಗದ ರೈಲುಗಳ ಟಿಕೆಟ್‌ಗಳನ್ನು ಈ ವ್ಯವಸ್ಥೆಯಡಿ ಪ್ರಯಾಣಿಕರು ಖರೀದಿಸಬಹುದು. ಈ ವ್ಯವಸ್ಥೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೆ ಮುಂದುವರೆಸುವ ಬಗ್ಗೆ ಪರಿಶೀಲಿಸಲಾಗುವುದು. ಟಿಕೆಟಿಂಗ್ ಕೌಂಟರ್‌ಗಳಲ್ಲಿ ಪ್ರಯಾಣಿಕರ ದಟ್ಟಣೆ ನಿರ್ವಹಿಸಲು ಇದು ಅನುಕೂಲವಾಗಿದೆ. ರೈಲ್ವೆ ನಿಲ್ದಾಣದ ಮುಖ್ಯದ್ವಾರಕ್ಕೆ ಬರುತ್ತಿದ್ದಂತೆ ಪ್ರಯಾಣಿಕರು ಈ ವ್ಯವಸ್ಥೆಯಡಿ ಟಿಕೆಟ್ ಖರೀದಿ ಮಾಡಬಹುದು. ಇದೊಂದು ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪ್ರಯಾಣಿಕರಿಗೆ ಅಗತ್ಯ ಮಾಹಿತಿ ಒದಗಿಸಲು ಎಲ್ಲಾ ನಿಲ್ದಾಣಗಳಲ್ಲಿ ತಲಾ ಎರಡು ಮಾಹಿತಿ ಕಿಯೋಸ್ಕ್‌ಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ, ಮೈಸೂರು ನಿಲ್ದಾಣದಿಂದ ದೂರದ ಊರುಗಳಿಗೆ ತೆರಳುವ ರೈಲುಗಳಿಗೆ ಕೋಚ್‌ಗಳನ್ನು ಹೆಚ್ಚಳ ಮಾಡಲಾಗಿದೆ. ಆರ್‌ಪಿಎಫ್ ಸಿಬ್ಬಂದಿ ಸೇರಿದಂತೆ ಎಲ್ಲೆಡೆ ಡಾಗ್ ಸ್ಕ್ವಾಡ್ ನಿಯೋಜಿಸಿದ್ದು, ಈ ಸಿಬ್ಬಂದಿ ನಿಲ್ದಾಣಗಳಲ್ಲಿ ದಟ್ಟಣೆ ನಿವಾರಿಸುವ ಜೊತೆಗೆ ಸೂಕ್ತ ಭದ್ರತೆಗೆ ಕ್ರಮ ವಹಿಸಲಿದ್ದಾರೆ. ಅಲ್ಲದೆ, ಪ್ರತಿಯೊಂದು ರೈಲುಗಳ ಆಗಮನ–ನಿರ್ಗಮನದ ಬಗ್ಗೆ ಘೋಷಣೆ ಮಾಡಲು ಹೆಚ್ಚುವರಿ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ ಎಂದು ವಿವರಿಸಿದರು.

24 ಗಂಟೆ ಕಾಲ ಸಾರ್ವಜನಿಕರ ಸಮಸ್ಯೆ ಆಲಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಹಾಗೆಯೇ ಮೈಸೂರು ರೈಲ್ವೆ ನಿಲ್ದಾಣದ ಮುಖ್ಯದ್ವಾರದಲ್ಲಿ ಹೆಲ್ತ್ ಇನ್ಸ್‌ಪೆಕ್ಟರ್‌ಗಳನ್ನು ನಿಯೋಜಿಸಿದ್ದು, ಪ್ರಥಮ ಚಿಕಿತ್ಸೆ ಅಗತ್ಯತೆ ಕಂಡು ಬಂದರೆ ಕ್ರಮ ವಹಿಸಲು ವೈದ್ಯರನ್ನು ನಿಯೋಜನೆ ಮಾಡಲಾಗಿದೆ. ದೀಪಾವಳಿ ಪ್ರಯುಕ್ತ ಮೈಸೂರು ರೈಲ್ವೆ ನಿಲ್ದಾಣ ಸೇರಿದಂತೆ ವಿಭಾಗದ ಮುಖ್ಯ ನಿಲ್ದಾಣಗಳಲ್ಲಿ ಈ ವ್ಯವಸ್ಥೆ ಕಲ್ಪಿಸಲಾಗಿದೆ.

ಪಟಾಕಿ ಸೇರಿ ಸ್ಫೋಟಕ ಸಾಮಗ್ರಿ ಕೊಂಡೊಯ್ಯಲು ಅವಕಾಶವೇ ಇಲ್ಲ



ರೈಲುಗಳಲ್ಲಿ ಪ್ರಯಾಣಿಕರು ಪಟಾಕಿ ಸೇರಿದಂತೆ ಸ್ಫೋಟಗೊಳ್ಳುವ ಗುಣಲಕ್ಷಣ ಹೊಂದಿರುವ ಯಾವುದೇ ಸಾಮಗ್ರಿ ಕೊಂಡೊಯ್ಯಲು ಅವಕಾಶವೇ ಇಲ್ಲ. ಒಂದು ವೇಳೆ ಅಂತಹ ಸಾಮಗ್ರಿಗಳು ಪತ್ತೆಯಾದಲ್ಲಿ ವಶಪಡಿಸಿಕೊಂಡು ದಂಡ ವಿಧಿಸಲಾಗುವುದು. ಹಬ್ಬದ ದಟ್ಟಣೆಯಲ್ಲಿ ಟಿಕೆಟ್ ರಹಿತ ಪ್ರಯಾಣ ಮಾಡುವವರ ಪತ್ತೆಗೂ ಕ್ರಮ ವಹಿಸಲಾಗಿದೆ. ಅದಕ್ಕಾಗಿಯೇ ಹೆಚ್ಚುವರಿ ಸ್ಕ್ವಾಡ್‌ಗಳನ್ನು ನಿಯೋಜನೆ ಮಾಡಲಾಗಿದೆ.

–ಗಿರೀಶ ಧರ್ಮರಾಜ ಕಲಗೊಂಡ

ದರ್ಶನ್ ಅಭಿಮಾನಿಗಳ ಸಂಭ್ರಮ




ನಟ ದರ್ಶನ್ ಜೈಲಿನಿಂದ ಬಿಡುಗಡೆಯಾದ ಹಿನ್ನೆಲೆಯಲ್ಲಿ ತೆಂಗಿನಕಾಯಿ ಒಡೆದು, ಭಾವಚಿತ್ರ ಪ್ರದರ್ಶಿಸಿದರು.

ಮೈಸೂರು, ಅ.30(ಎಸ್‌ಪಿಎನ್)– ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿದ್ದ ನಟ ದರ್ಶನ್ ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆಯಾದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟ ಪಾದದ ಬಳಿ 101 ತೆಂಗಿನಕಾಯಿ ಒಡೆದು ದರ್ಶನ್ ಅಭಿಮಾನಿ ಬಳಗದ ಸದಸ್ಯರು ಸಂಭ್ರಮಪಟ್ಟರು.

ಬಳಗದ ಹರೀಶ್ ನಾಯ್ಡು ನೇತೃತ್ವದಲ್ಲಿ 101 ತೆಂಗಿನಕಾಯಿ ಒಡೆದು, ನಟ ದರ್ಶನ್ ಪರ ಘೋಷಣೆಗಳನ್ನು ಕೂಗಿ ಅಭಿಮಾನದ ಪರಾಕಾಷ್ಠೆ ಮೆರೆದರು. ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, ನಟ ದರ್ಶನ್‌ಗೆ ಮಧ್ಯಂತರ ಜಾಮೀನು ದೊರೆತಿರುವುದು ಸಂತೋಷದ ಸಂಗತಿ. ಇದು ಪೂರ್ಣ ಪ್ರಮಾಣದಲ್ಲಿ ದೊರಕಲಿ ಎಂದು ಚಾಮುಂಡೇಶ್ವರಿ ದೇವಿಯಲ್ಲಿ ಪ್ರಾರ್ಥಿಸಿರುವುದಾಗಿ ತಿಳಿಸಿದರು. ಈ ವೇಳೆ ಕಡಕೊಳ ಜಗದೀಶ್, ಕಿಶೋರ್, ಮಂಜು, ಸುಹಾಸ್, ನವೀನ್, ಮಹಾನ್ ಶ್ರೇಯಸ್ ಇನ್ನಿತರಿದ್ದರು.

ಪರಿಷತ್ ಸದಸ್ಯರಾಗಿ ಕಿಶೋರ್ ಕುಮಾರ್ ಪುತ್ತೂರು ಪ್ರಮಾಣ



ಕಿಶೋರ್ ಕುಮಾರ್

ಬೆಂಗಳೂರು, ಅ.30(ಕೆಎಂಶಿ)–ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಉಪ ಚುನಾವಣೆಯಲ್ಲಿ ಆಯ್ಕೆಯಾದ ಬಿಜೆಪಿಯ ಕಿಶೋರ್ ಕುಮಾರ್ ಪುತ್ತೂರು ಅವರು ಇಂದು ವಿಧಾನಪರಿಷತ್‌ನ ನೂತನ ಸದಸ್ಯರಾಗಿ ಭಗವಂತ ಹಾಗೂ ತಾಯಿ ಭಾರತಾಂಬೆ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ನೂತನ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಓಲೈಕೆ ರಾಜಕಾರಣ ಮಿತಿ ಮೀರಿದೆ. ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುತ್ತಿದೆ, ವಕ್ಫ್ ಹೆಸರಿನಲ್ಲಿ ರೈತರ ಭೂಮಿಯನ್ನು ಕಬಳಿಸುವ ಕಾರ್ಯ ನಡೆಯುತ್ತಿದೆ ಎಂದರು.

ಯಾವೊಬ್ಬ ಸಣ್ಣ–ದೊಡ್ಡ ರೈತರಿಗೂ ಅನ್ಯಾಯ ಆಗಲು ಬಿಜೆಪಿ ಬಿಡುವುದಿಲ್ಲ. ವಕ್ಫ್ ಕಾಯಿದೆಗೆ ತಿದ್ದುಪಡಿ ತರುವ ಮೂಲಕ ದೇಶದಲ್ಲಿ ಒಂದು ಸಮುದಾಯದಿಂದ ಸಾರ್ವಜನಿಕರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸುವ ಪ್ರಯತ್ನವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಾಡುತ್ತಿದೆ ಎಂದರು.

ಶಾಸಕ ಹರೀಶ್ ಪೂಂಜ ಮಾತನಾಡಿ, ವಕ್ಫ್ ಸಮಸ್ಯೆ ಸಂಬಂಧ ವಿಜಯಪುರಕ್ಕೆ ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ್ ನೇತೃತ್ವದ ನಿಯೋಗ ಭೇಟಿ ಕೊಟ್ಟಿದೆ. ನಿಯೋಗ ನಡೆಸಿದ ಸಮೀಕ್ಷೆಯಿಂದ ಅಲ್ಪಸಂಖ್ಯಾತರ ಇಲಾಖೆ ಸಚಿವ ಜಮೀರ್ ಅಹ್ಮದ್ ಮತ್ತು ಅವರ ಸಂಗಡಿಗರ ಷಡ್ಯಂತ್ರ ಬಹಿರಂಗವಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಮೇರೆಗೆ ಸಚಿವ ಜಮೀರ್ ಅಹ್ಮದ್ ಜಿಲ್ಲಾವಾರು ಅದಾಲತ್ ನಡೆಸಿ, 1974ರ ವಕ್ಫ್ ಗೆಜೆಟ್ ಅಧಿಸೂಚನೆಯಲ್ಲಿರುವ ಸರ್ವೆ ನಂಬರ್‌ಗಳಿಗೆ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸುವ ಕಾರ್ಯ ನಡೆದಿರುವುದು ಜಿಲ್ಲಾಧಿಕಾರಿಗಳ ಸಭಾ ನಡಾವಳಿಯಿಂದ ಗೊತ್ತಾಗಿದೆ.

ಒಳ ಮೀಸಲಾತಿ ಪರಿಷ್ಕರಣೆಗೆ ಬಲಗೈ ಸಮುದಾಯದ ನಾಯಕರ ಆಗ್ರಹ

ಪುನರ್ ಸಮೀಕ್ಷೆ ನಂತರವೇ ನಿರ್ಧಾರಕ್ಕೆ ಬರುವಂತೆ ತೀರ್ಮಾನ



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಬುಧವಾರ ನಡೆದ ದಲಿತ ಸಮಾಜದ(ಬಲಗೈ) ಮುಖಂಡರ ಸಭೆಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿದರು. ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಪ್ರಧಾನ ಕಾರ್ಯದರ್ಶಿ ಎ.ಆರ್.ಕಾಂತರಾಜು ಮತ್ತಿತರರಿದ್ದರು.

ಮೈಸೂರು, ಅ.30(ಎಂಕೆ)– ಪರಿಶಿಷ್ಟ ಜಾತಿಯ 101 ಸಮುದಾಯಗಳಿಗೂ ನ್ಯಾಯ ಸಿಗಬೇಕಾದರೆ ಒಳಮೀಸಲಾತಿ ಪುನರ್ ಪರಿಷ್ಕರಣೆಯಾಗಬೇಕು. ರಾಜ್ಯ ಸರ್ಕಾರ ಆದಿಕರ್ನಾಟಕ ಹೊಲೆಯ ಮತ್ತು ಆದಿದ್ರಾವಿಡ ಮಾದಿಗ ಎಂದೇ ಸಮೀಕ್ಷೆ ನಡೆಸಿ, ಒಳಮೀಸಲಾತಿಗೆ ಅನುವು ಮಾಡಿಕೊಡಬೇಕೆಂದು ಒತ್ತಾಯಿಸಲು ಒಕ್ಕೊರಲ ತೀರ್ಮಾನ ಕೈಗೊಳ್ಳಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ದಲಿತ ಸಮಾಜದ(ಬಲಗೈ) ಮುಖಂಡರ ಸಭೆಯಲ್ಲಿ, ಒಳ ಮೀಸಲಾತಿ ಜಾರಿಗೊಳಿಸಲು ಮುಂದಾಗಿರುವ ರಾಜ್ಯ ಸರ್ಕಾರ, ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವ ಆಯೋಗದ ವರದಿ ಸಲ್ಲಿಕೆಗೆ ಮೂರು ತಿಂಗಳ ಕಾಲಾವಕಾಶ ನೀಡಿದೆ. ಅದುವರೆಗೆ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸದಿರಲು ನಿರ್ಧರಿಸಿದೆ. ಇದರಿಂದ ಈಗಾಗಲೇ ಪ್ರಕಟಗೊಂಡಿರುವ ನೇಮಕಾತಿ ಅಧಿಸೂಚನೆಗಳಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿ ಪರೀಕ್ಷೆಗೆ ತಯಾರಿ ನಡೆಸುತ್ತಿರುವವರು ಆತಂಕಕ್ಕೆ ಒಳಗಾಗಿದ್ದು, ನೇಮಕಾತಿ ಪ್ರಕ್ರಿಯೆಯನ್ನು ಸ್ವಲ್ಪ ಸಡಿಲಗೊಳಿಸಬೇಕೆಂದು ಆಗ್ರಹಿಸಲಾಯಿತು. ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಎಂಬುದು ಸಾಕಷ್ಟು ಗೊಂದಲದಿಂದ ಕೂಡಿದೆ. ಪರಿಶಿಷ್ಟ ಜಾತಿಯ 101 ಸಮುದಾಯಗಳಿಗೂ ನ್ಯಾಯ ಸಿಗಬೇಕಾದರೆ ಒಳಮೀಸಲಾತಿ ಪುನರ್ ಪರಿಷ್ಕರಣೆಯಾಗಬೇಕು. ಸಮೀಕ್ಷೆ ವೇಳೆ ಎಡಗೈ(ಆದಿ ದ್ರಾವಿಡ) ಸಮುದಾಯವರು ಆದಿ ಕರ್ನಾಟಕ ಎಂದೇಳುವ ಮೂಲಕ ಬಲಗೈ ಸಮುದಾಯ ಎಂದು ಗುರ್ತಿಸಿಕೊಂಡಿರುವ ಉದಾಹರಣೆಗಳು ಸಾಕಷ್ಟಿವೆ. ಆದ್ದರಿಂದ ಇನ್ನು ಮುಂದೆ ಆದಿಕರ್ನಾಟಕ ಹೊಲೆಯ ಮತ್ತು ಆದಿದ್ರಾವಿಡ ಮಾದಿಗ ಎಂದೇ ಸಮೀಕ್ಷೆ ನಡೆಸಿ, ಒಳಮೀಸಲಾತಿ ವರ್ಗೀಕರಣಕ್ಕೆ ಅನುವು ಮಾಡಿಕೊಡಬೇಕೆಂದು ಒತ್ತಾಯಿಸಲು ನ.10 ರಂದು ವಿಚಾರ ಸಂಕಿರಣ ನಡೆಸಲು ನಿರ್ಧರಿಸಲಾಯಿತು.

ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಸಮಾಜದಲ್ಲಿ ಅಸ್ಪೃಶ್ಯತೆ ಹಾಗೂ ದೌರ್ಜನ್ಯಕ್ಕೆ ಒಳಗಾದ ಸಮುದಾಯವೆಂದರೆ ಬಲಗೈ ಮತ್ತು ಎಡಗೈ ಸಮುದಾಯ ಮಾತ್ರ. ಎಡಗೈನ ವರಷ್ಟೇ ಬಲಗೈ ಸಮುದಾಯದವರ ಸ್ಥಿತಿಯೂ ಹೀನಾಯವಾಗಿದೆ. ರಾಜಕೀಯದಿಂದ ಎಡ, ಬಲ ವಂಚಿತವಾಗಿದೆ. ಒಳ ಮೀಸಲಾತಿ ಆದರೆ ಸಾಲದು ಇತರೆ ಯೋಜನೆಗಳ ಬಗ್ಗೆಯೂ ಮಾತನಾಡಿ ಎಂದರು. ಗೃಹ ಸಚಿವ ಜಿ.ಪರಮೇಶ್ವರ್ ಅವರ ಮನೆಯಲ್ಲಿ ಎಡಗೈ ಸಮುದಾಯದ ಚರ್ಚೆವೇಳೆ ಒಪ್ಪಂದ ಆಗಿದೆ. ಒಡೆದಾಳುವ ನೀತಿ ಅನುಸರಿಸಲಾಗುತ್ತಿರುವಂತಿದೆ. ಪರಿಶಿಷ್ಟ ಜಾತಿಯ 101 ಸಮುದಾಯಗಳಿಗೂ ನ್ಯಾಯ ಸಿಗಬೇಕಾದರೆ ಒಳಮೀಸಲಾತಿ ಪುನರ್ ಪರಿಷ್ಕರಣೆಯಾಗಬೇಕು. ಅಲ್ಲದೆ ಪ್ರತಿಯೊಬ್ಬರು ಒಳಮೀಸಲಾತಿ ಎಂಬುದನ್ನು ಅರ್ಥೈಸಿಕೊಳ್ಳಬೇಕು ಎಂದು ಕೋರಿದರು.

ಹೋರಾಟಕ್ಕೆ ಸಿದ್ಧ: ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಆರ್.ಕಾತರಾಜು ಮಾತನಾಡಿ, ಒಳ ಮೀಸಲಾತಿ ಕುರಿತು ಆಯೋಗದ ವರದಿ ಬರುವವರೆಗೂ ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡಬಾರದು ಎನ್ನುವ ನಿರ್ಧಾರ ಸರಿಯಲ್ಲ. ಬಲಗೈ ಸಮುದಾಯ ಹಿಂದಿನಿಂದಲೂ ಎಡಗೈ ಸಮುದಾಯದ ಪರವಾಗಿ ಹೋರಾಟ ಮಾಡುತ್ತಾ ಬಂದಿದೆ. ಆದರೆ ಎಡಗೈ ಸಮುದಾಯದ ಕೆಲವರ ನಡೆ ಬಲಗೈನವರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಒಳ ಮೀಸಲಾತಿ ಕುರಿತು ಸರ್ಕಾರ ಸಮಾನ ನಿರ್ಧಾರ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಬಲಗೈ ಸಮುದಾಯ ಹೋರಾಟಕ್ಕೆ ಸಿದ್ಧರಾಗಿದ್ದೇವೆ ಎಂದರು.

ವಕೀಲರಾದ ವಿಷ್ಣುವರ್ಧನ್, ಉಮೇಶ್, ಚಂದ್ರಶೇಖರ, ಗಂಗಾಧರ್, ರಾಜೇಂದ್ರ ಪ್ರಸಾದ್, ಡಿ.ಪುಟ್ಟಯ್ಯ, ಎಲ್.ಮಂಜುಳಾ, ಪ್ರೊ.ಜ್ಞಾನಪ್ರಕಾಶ್, ವಿಜ್ಞಾನಿ ಕನಕರಾಜ್, ಬಿಎಸ್‌ಪಿ ಮುಖಂಡ ಚನ್ನಕೇಶವಮೂರ್ತಿ, ದಲಿತ ವೇದಿಕೆ ಅಧ್ಯಕ್ಷ ರೇವಣ್ಣ, ಗೋವಿಂದರಾಜು, ಡಾ.ಸುನಿಲ್, ಇರಸವಾಡಿ ಮಹೇಶ್ ವಿವಿ ಸಂಶೋಧಕರ ಸಂಘದ ಅಧ್ಯಕ್ಷರಾದ ಶಿವಶಂಕರ್, ನಗರಪಾಲಿಕೆ ಮಾಜಿ ಸದಸ್ಯ ಆರ್ ಸಿದ್ದಪ್ಪ, ಸರ್ಕಾರಿ ನೌಕರ ಸಂಘದ ಸಂಘಟನಾ ಕಾರ್ಯದರ್ಶಿ ಪ್ರಭು, ದಲಿತ ಮುಖಂಡರಾದ ಕಲ್ಲಲ್ಲಿ ಕುಮಾರ್. ಗೋವಿಂದರಾಜು, ಬಬಿತಾ, ಅನಂತನಾಗ್, ಸದಾನಂದ, ಎಲ್.ಚಂದು, ಗಿರೀಶ್ ಲಕ್ಕೂರು ಮತ್ತಿತರರು ಉಪಸ್ಥಿತರಿದ್ದರು.

ಧರ್ಮದ ಕಲಂನಲ್ಲಿ ಬುದ್ಧಿಸ್ಟ್ ಎಂದು ಬರೆಸಿ...!

ಡಾ.ಬಿ.ಆರ್.ಅಂಬೇಡ್ಕರ್ ಮೇಲೆ ನಿಮಗೇನಾದರೂ ಗೌರವವಿದ್ದರೆ ಧರ್ಮದ ಕಲಂನಲ್ಲಿ ಬುದ್ಧಿಸ್ಟ್ ಎಂದು ಬರೆಸಿ. ಜಾತಿ ಕಲಂನಲ್ಲಿ ಆದಿ ಕರ್ನಾಟಕ ಹೊಲೆಯ ಎಂದೇ ಇದ್ದರೂ ಧರ್ಮದ ಕಲಂನಲ್ಲಿ ಬುದ್ಧಿಸ್ಟ್ ಎಂದು ಬರೆಸಲು ಪ್ರಯತ್ನಿಸಿ. ಅಂಬೇಡ್ಕರ್ ಅವರ ಜೀವನ ಇತಿಹಾಸವನ್ನು ತಿರುಚುತ್ತಿರುವವರ ವಿರುದ್ಧ ಆ ಮೂಲಕ ಪ್ರತಿಭಟಿಸಬೇಕಿದೆ.

–ಪುರುಷೋತ್ತಮ್, ಮಾಜಿ ಮೇಯರ್

ನಕ್ಕರೆ ಅದೇ ಸ್ವರ್ಗ

ಟೀಚರ್: ಎಮ್ಮೆ ಬಾಲವನ್ನು ಏಕೆ ಅಲುಗಾಡಿಸುತ್ತೆ!

ಗುಂಡ : ಯಾಕಂದ್ರೆ, ಬಾಲಕ್ಕೆ ಎಮ್ಮೆಯನ್ನು ಅಲ್ಲಾಡಿಸಲು ಶಕ್ತಿ ಇಲ್ಲ, ಅದಕ್ಕೆ...!

ಮೈಸೂರು ಮಿತ್ರ

ಗುರುವಾರ, 31 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಬಾಳಿನ ಮೊದಲರ್ಥವು ಇನ್ನೊಂದರ್ಥಕ್ಕಾಗಿ ಕಾಯುತ್ತದೆ.
ಇನ್ನೊಂದರ್ಥವು ಕಳೆದ ಅರ್ಥಕ್ಕೆ ಗೋಳಾಡುತ್ತದೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರಂತೆ

ನಿಮ್ಮ ಪತ್ರಗಳು

■ ಆನೆ ದಾಳಿ, ಸಾವಿಗೆ ಕಡಿವಾಣ ಅಗತ್ಯ

ಮಾನ್ಯರೆ,

ಒಂದೆಡೆ ಪ್ರಕೃತಿ ವಿಕೋಪ ಇನ್ನೊಂದೆಡೆ ವನ್ಯಜೀವಿಗಳ ದಾಳಿಯಿಂದ ರಾಜ್ಯದ ಪಶ್ಚಿಮಘಟ್ಟಕ್ಕೆ ಹೊಂದಿಕೊಂಡಿರುವ ದಕ್ಷಿಣ ಕರ್ನಾಟಕದ 10ಕ್ಕೂ ಹೆಚ್ಚು ಜಿಲ್ಲೆಗಳ ಜನತೆ ತತ್ತರಿಸುತ್ತಿದ್ದಾರೆ. ಕಳೆದ 5 ವರ್ಷಗಳಲ್ಲಿ ಮಾನವ ಹಾಗೂ ಆನೆಗಳ ನಡುವಿನ ಸಂಘರ್ಷದಿಂದ ಕರ್ನಾಟಕದಲ್ಲಿ 160 ಜನರು ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಸರಕಾರ ರಾಜ್ಯಸಭೆಗೆ ಮಾಹಿತಿ ನೀಡಿದೆ. ಇದೇ ವೇಳೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 285 ಆನೆಗಳು ಅಸಹಜ ಸಾವು ಕಂಡಿವೆ. ಕಳೆದ ಒಂದೇ ವರ್ಷದಲ್ಲಿ 94 ಆನೆಗಳು ಮೃತಪಟ್ಟಿವೆ. ದೇಶದಲ್ಲಿಯೇ ಅತಿ ಹೆಚ್ಚು (6,395– 2023ರ ಗಜಗಣತಿ) ಗಜ ಸಂತತಿ ಹೊಂದಿರುವ ಕರ್ನಾಟಕದಲ್ಲಿ ವನ್ಯ ಜೀವಿ ಸಂಘರ್ಷ ಹೊಸದೇನೂ ಅಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಆನೆಗಳು ನಾಡಿಗೆ ಪ್ರವೇಶಿಸಿ ಎಲ್ಲೆಂದರಲ್ಲಿ ದಾಳಿ ಮಾಡುವುದು ಸಾಮಾನ್ಯವಾಗಿದೆ. ಕೆಲವೊಮ್ಮೆ ನಡುರಸ್ತೆಯಲ್ಲಿ ಅಡ್ಡವಾಗಿ ನಿಂತು ತೊಂದರೆ ನೀಡುತ್ತಿವೆ. ಕರಾವಳಿ ಜಿಲ್ಲೆಗಳಲ್ಲೂ ಆನೆ ಹಾವಳಿ ವ್ಯಾಪಕವಾಗಿದೆ. ಆನೆಗಳ ಸಾವಿಗೂ, ಈ ದಾಳಿಗೂ ನೇರ ಸಂಬಂಧವಿದೆ. ಆನೆ ದಾಳಿಯಿಂದ ತಮ್ಮ ಬೆಳೆ ರಕ್ಷಿಸಿಕೊಳ್ಳಲು ಮತ್ತು ಪ್ರಾಣ ಉಳಿಸಿಕೊಳ್ಳಲು ಕಾಡಂಚಿನ ರೈತರು ಬೇಲಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಕಲ್ಪಿಸುತ್ತಿದ್ದಾರೆ. ಇದೊಂದೇ ಕಾರಣ ದಿಂದ ಕಳೆದ ವರ್ಷ 30ಕ್ಕೂ ಹೆಚ್ಚು ಆನೆಗಳು ಸಾವಿಗೀಡಾಗಿವೆ. ಕರ್ನಾಟಕ ಹೈಕೋರ್ಟ್ ಈ ಸಂಬಂಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ವಿಚಾರಣೆ ಯನ್ನೂ ನಡೆಸುತ್ತಿದೆ. ರಾಜ್ಯ ಅರಣ್ಯ ಇಲಾಖೆ ಮಾಹಿತಿ ಪ್ರಕಾರ ಈ ವರ್ಷದ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ 35 ಆನೆಗಳು ಸಾವಿಗೀಡಾಗಿವೆ. ಚಾಮರಾಜ ನಗರ ಅರಣ್ಯ ವಲಯ ವ್ಯಾಪ್ತಿಯಲ್ಲಿ 17 ಆನೆಗಳು ಮೃತಪಟ್ಟರೆ, ಕೊಡಗು ಅರಣ್ಯ ವ್ಯಾಪ್ತಿಯಲ್ಲಿ 11 ಆನೆಗಳು ಮೃತಪಟ್ಟಿವೆ. ತಿಂಗಳಲ್ಲಿ ಸರಾಸರಿ 10ಕ್ಕೂ ಹೆಚ್ಚು ಆನೆಗಳು ದುರಂತ ಸಾವು ಕಾಣುತ್ತಿರುವುದು ಕಳವಳಕಾರಿ ವಿಚಾರ. ಅವುಗಳ ದಾಳಿಗೆ ಕಾರಣವಾದ ಅಂಶಗಳ ಬಗ್ಗೆ ಸಂಶೋಧನೆಯ ಜೊತೆಗೆ ಸಂಘರ್ಷವನ್ನು ತಪ್ಪಿಸುವ ಮಾರ್ಗೋಪಾಯಗಳನ್ನೂ ಕಂಡುಕೊಳ್ಳಬೇಕಾಗಿದೆ. ಆನೆಗಳ ದಾಳಿ ಕಾರಣದಿಂದ ಕೊಡಗು, ಹಾಸನ, ಚಿಕ್ಕಮಗಳೂರಿನಲ್ಲಿ ಕಾಡಂಚಿನ ನೂರಾರು ರೈತರು ತಮ್ಮ ಕೃಷಿ ಭೂಮಿಯನ್ನು ಪಾಳು ಬಿಟ್ಟಿದ್ದಾರೆ. ಇಲ್ಲಿ ಕಾರ್ಮಿಕರೂ ಕೆಲಸಕ್ಕೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಮುಂದೊಂದು ದಿನ ಕರಾವಳಿ ಜಿಲ್ಲೆಗಳಲ್ಲೂ ಜನರು ಅಡಕೆ ತೋಟಕ್ಕಿಳಿಯಲು ಹಿಂದೇಟು ಹಾಕುವ ಪರಿಸ್ಥಿತಿ ಎದುರಾಗ ಬಹುದು. ಈ ಬಗ್ಗೆ ಗಂಭೀರ ಚಿಂತನೆ ಅಗತ್ಯವಿದೆ.

–ಚೇತನ್ ಎನ್. ಆರ್., ನಗರ್ಲೆ, ನಂಜನಗೂಡು.

■ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಲ್ಲಿ ಮನವಿ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಪ್ಲಾಸ್ಟಿಕ್ ಚೀಲಗಳಲ್ಲಿ ತಂದು ಕಸವನ್ನು ರಾಶಿ ರಾಶಿಯಾಗಿ ಸುರಿಯಲಾಗುತ್ತಿದೆ. ಮುಂದೊಂದು ದಿನ ಇದನ್ನು ನಿಯಂತ್ರಿಸದಿದ್ದಲ್ಲಿ ಇದು ಇಡೀ ಬಡಾವಣೆಗೆ ಹರಡುವುದರಲ್ಲಿ ಸಂಶಯವಿಲ್ಲ. ಇಲ್ಲಿ ಯಾರಿಗೆ ದೂರು ಕೊಡುವುದು ಎನ್ನುವುದೇ ಗೊಂದಲವಾಗಿದೆ. ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುತ್ತದೋ ಅಥವಾ ಮುಡಾ ವ್ಯಾಪ್ತಿಗೆ ಬರುತ್ತದೋ ಒಟ್ಟಿನಲ್ಲಿ ಇಲ್ಲಿ ಮುಂಜಾನೆ ವಾಯು ವಿಹಾರ ಮಾಡುವವರು ಕೋಟಿಗಟ್ಟಲೇ ಹಣ ಸುರಿದು ಮನೆ ಕಟ್ಟಿಕೊಂಡವರಿಗೆ ನರಕಯಾತನೆ. ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು ಇತ್ತ ಗಮನಹರಿಸಬೇಕೆಂದು ಈ ಮೂಲಕ ಮನವಿ.

–ವಿಜಯನಗರ 4ನೇ ಹಂತದ ನಿವಾಸಿಗಳು, ಮೈಸೂರು.

■ ತಿಲಕ್‌ನಗರದಲ್ಲಿ ದನಗಳ ಹಾವಳಿ ತಪ್ಪಿಸಿ



ಮಾನ್ಯರೆ,

ಮೈಸೂರು ನಗರದಲ್ಲಿ ರಸ್ತೆ ಮಧ್ಯೆ ಭಾಗದಲ್ಲಿ ಹಸುಗಳು ಕುಳಿತು ಕೊಳ್ಳುವುದು, ಓಡಾಡುವುದು, ವಾಹನ ಸವಾರರಿಗೆ ಗುದ್ದುವುದು ಅತೀ ಹೆಚ್ಚಾಗಿ ಸಂಭವಿಸುತ್ತಿವೆ. ವಿಶೇಷವಾಗಿ ತಿಲಕನಗರದ ಮುಖ್ಯ ರಸ್ತೆ ಮತ್ತು ಕ್ರಾಸ್ ರಸ್ತೆಗಳಲ್ಲಿ ಅತೀ ಹೆಚ್ಚಾಗಿ ಹಸುಗಳು ರಸ್ತೆ ಮಧ್ಯ ಭಾಗದಲ್ಲಿ ಕುಳಿತಿರುತ್ತವೆ ಮತ್ತು ಓಡಾಡುತ್ತಿರುತ್ತವೆ. ತಿಲಕ್ ನಗರದ ಕೆಲವು ಮುಖ್ಯ ರಸ್ತೆಯಲ್ಲಿ ವಾಹನಗಳು ಮತ್ತು ಸ್ಥಳೀಯ ನಿವಾಸಿಗಳು, ಮಕ್ಕಳು, ವಯೋವೃದ್ಧರು ಅತೀ ಹೆಚ್ಚಾಗಿ ಓಡಾಡುವ ರಸ್ತೆಯಾಗಿರುತ್ತದೆ. ಹಸುವು ಈಗಾಗಲೇ ಒಂದು ಜೀವವನ್ನೇ ಬಲಿ ತೆಗೆದುಕೊಂಡಿದೆ. ಅಮೂಲ್ಯವಾದ ಆ ಜೀವಕ್ಕೆ ಯಾರು ಹೊಣೆ? ಇಂತಹ ಹಸುಗಳಿಂದ ಭವಿಷ್ಯದಲ್ಲಿ ಇನ್ನೇಷ್ಟು ಆಪಾಯ ಎದುರಿಸಬೇಕು. ಜೀವವನ್ನು ಬಲಿ ತೆಗೆದು ಕೊಂಡರೂ ಸಹ ನಗರ ಪಾಲಿಕೆಯವರಿಗೆ ಹಸುಗಳ ಬಗ್ಗೆ ಮೌಖಿಕವಾಗಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಈಗಲಾದರು ಮೈಸೂರು ಮಹಾನಗರ ಪಾಲಿಕೆಯವರು ಎಚ್ಚೆತ್ತುಕೊಂಡು ತಿಲಕ್ ನಗರದಲ್ಲಿ ಹಾಗೂ ಮೈಸೂರಿನ ಇತರೆ ಕಡೆ ಓಡಾಡುವ ಗೊಡ್ಡು ಹಸುಗಳ ಕಾಟ ತಪ್ಪಿಸಿ ಮಕ್ಕಳು, ವಯೋವೃದ್ಧರನ್ನು ರಕ್ಷಿಸಿ. ಮುಂದೆ ಅನಾಹುತವಾದರೆ ಮೈಸೂರು ಮಹಾನಗರ ಪಾಲಿಕೆಯವರೇ ನೇರ ಹೊಣೆಯಾಗಬೇಕಾದಿತು.


–ಎಂ.ಎನ್.ಧರಣಿ ವೆಂಕಟೇಶ್, ತಿಲಕ್ ನಗರ, ಮೈಸೂರು.

■ ಗ(ಗೌ)ರಿ!

ಮಾನ್ಯರೆ,

ದಿವ್ಯ ದಸರಾ ಸಿರಿ:
ಮತ್ತೊಮ್ಮೆ ಝಗಮಗಿಸಿತು ವಿಶ್ವಖ್ಯಾತ
ಮೈಸೂರು ನಗರಿ;
ಧರಿಸಿತು ಗರಿ–ಲೋಕೋತ್ತರ;
'ನವರಾತ್ರಿ' ಎಂದರೂ ಹಗಲಿನ
ಹೊಳೆಯುವ ಪರಿಯೇ ಸರಿ!
("ಕಾಯೌ ಶ್ರೀಗೌರಿ")

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.




ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಕರ್ನಾಟಕ ಭ್ರಷ್ಟಾಚಾರದ ಕೂಪವಾ...?



ಎಸ್.ನಿಜಲಿಂಗಪ್ಪ



ಶಾಂತವೇರಿ ಗೋಪಾಲಗೌಡ



ನ್ಯಾಯಮೂರ್ತಿ ಸಂತೋಷ್ ಹೆಗಡೆ



ಮುಖ್ಯಮಂತ್ರಿ ಸಿದ್ದರಾಮಯ್ಯ

ಇಂದಿನ ರಾಜಕಾರಣ ಕೊಚ್ಚೆ ಗುಂಡಿಯಾ? ಹಾಲಿವುಡ್ ಸೂಪರ್ ಸ್ಟಾರ್ ಅಮಿತಾಬ್ ಬಚ್ಚನ್ ಅವರ ಪ್ರಕಾರ ಹೌದು. ನಾನೂ ಹೇಳುವುದು ಭಾರತದಲ್ಲಿನ ರಾಜಕಾರಣ ನಿಜವಾಗಿಯೂ ಭ್ರಷ್ಟಾಚಾರದ ಕೂಪವೇ. ನಿಮಗೆ ಗೊತ್ತಿದೆಯಾ, ದಿವಂಗತ ಮಾಜಿ ಪ್ರಧಾನಿ ರಾಜೀವ್ ಗಾಂಧಿಯ ಆಪ್ತ ಮಿತ್ರರಾಗಿದ್ದ ಅಮಿತಾಬ್ ಬಚ್ಚನ್ ಕಾಂಗ್ರೆಸ್ ಸಂಸದರಾಗಿದ್ದ ಸಂದರ್ಭದಲ್ಲೇ ರಾಜಕೀಯವನ್ನು ತೊರೆದಿದ್ದರು.

ಇಂದಿನ ಸಂದರ್ಭದಲ್ಲಿ, ಕೇಂದ್ರದ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರಕಾರಕ್ಕೆ ಈ ಅಭಿಪ್ರಾಯ ಅನ್ವಯಿಸದೇ ಇರಬಹುದು. ಆದರೆ, 2004ರ ಮೇ ತಿಂಗಳಲ್ಲಿ ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಸ್ಥಾನದಿಂದ ಇಳಿದ ನಂತರ ಭ್ರಷ್ಟಾಚಾರದ ಕೂಪವಾಗಿರುವ ಕರ್ನಾಟಕ ರಾಜ್ಯಕ್ಕೆ ಅಮಿತಾಬ್ ಬಚ್ಚನ್ ಅವರ ಈ ಅಭಿಪ್ರಾಯ ಸಾರಾಸಗಟಾಗಿ ಅನ್ವಯಿಸುತ್ತದೆ.

ಎಸ್.ಎಂ.ಕೃಷ್ಣ ಅವರ ನಂತರ ಭಾರತೀಯ ಜನತಾ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂತು. ಆದರೆ, ಅದು ಭ್ರಷ್ಟತೆ ಜೊತೆಗೆ, ಒಳ್ಳೆಯ ಆಡಳಿತವನ್ನ ನೀಡುವಲ್ಲಿಯೂ ವಿಫಲವಾಯಿತು. ಅದರ ಫಲವಾಗಿ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂತು.

ಕರ್ನಾಟಕದ ರಾಜಕೀಯ ರಂಗದಲ್ಲಿ 'ಸಿದ್ದರಾಮಯ್ಯ' ಎಂಬ ಹೊಸ ತಾರೆಯ ಉದಯವಾಯಿತು. ಅವರು, 'ಅಹಿಂದ' (ಅಲ್ಪಸಂಖ್ಯಾತರು, ಹಿಂದುಳಿದವರು ದಲಿತರು) ಸಂಘಟನೆಯ ನಾಯಕತ್ವವನ್ನು ವಹಿಸಿದ್ದರು. ಕಾಂಗ್ರೆಸ್ ವರಿಷ್ಠ ಮಂಡಳಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಡಾ.ಜಿ.ಪರಮೇಶ್ವರ್ ಅವರ ಬದಲು ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಮಾಡಿತು. ಅದಕ್ಕೆ ಕಾರಣ ಡಾ.ಪರಮೇಶ್ವರ್ ವಿಧಾನ ಸಭಾ ಚುನಾವಣೆಯಲ್ಲಿ ಸೋತಿದ್ದು. ಅವರನ್ನು ಷಡ್ಯಂತರದಿಂದ ಅವರ ಪಕ್ಷದವರೇ ಸೋಲಿಸಿದರೂ ಎಂಬ ಸುದ್ದಿ ಕೂಡ ಹರಡಿತ್ತು. ಇರಲಿ, ಇದನ್ನೇ ಅಲ್ವಾ ಇತಿಹಾಸದ ಚಮತ್ಕಾರ ಅನ್ನೋದು!

ಈ ಒಂದು ಆಕಸ್ಮಿಕ ರಾಜಕೀಯ ತಿರುವಿನಿಂದಾಗಿ ನಂತರ ಜನರು ಸಿದ್ದರಾಮಯ್ಯ ಮೂಲ ಕಾಂಗ್ರೆಸಿಗರಲ್ಲ, ಕಾಂಗ್ರೆಸ್ ಪಕ್ಷಕ್ಕೆ ವಲಸೆ ಬಂದವರು ಎಂಬ ಸತ್ಯವನ್ನೇ ಮರೆತಿದ್ದಾರೆ. ಜಾತ್ಯಾತೀತ ಜನತಾದಳದಲ್ಲಿ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರ ಅಡಿಯಲ್ಲಿ ಹಲವಾರು ಪ್ರಮುಖ ಸ್ಥಾನಮಾನಗಳನ್ನು ಅನುಭವಿಸಿದ್ದ ಸಿದ್ದರಾಮಯ್ಯನವರನ್ನು ಪಕ್ಷದಲ್ಲಿ ಉಂಟಾದ ರಾಜಕೀಯ ಗೊಂದಲಗಳಿಂದಾಗಿ ಜೆಡಿಎಸ್ ನಿಂದ ಹೊರ ಹಾಕಲಾಯಿತು. **ಈ ಘಟನೆ ಕೂಡ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಒಂದು ಮಹತ್ತರ ರಾಜಕೀಯ ತಿರುವು ಎಂದು ಹೇಳಬಹುದು.**

ಸಿದ್ದರಾಮಯ್ಯನವರು ಮೊದಲ ಬಾರಿ ಮುಖ್ಯಮಂತ್ರಿಯಾಗಿ (13.05.2013– 17.05.2018) ಯಾವ ಅಡ್ಡಿ–ಆತಂಕವಿಲ್ಲದೆ ಹುಂಬುತನದಿಂದಲೇ ಆಡಳಿತ ನಡೆಸಿದರು. **ಈ ಹಿಂದೆ ಯಾವುದೇ ಕಾಂಗ್ರೆಸ್ ಮುಖ್ಯಮಂತ್ರಿಯೂ ಅನುಸರಿಸದೇ ಇದ್ದಂತಹ ಓಲೈಕೆ ರಾಜಕಾರಣ ಹಾಗೂ ಸ್ವಜನ ಪಕ್ಷಪಾತಿಯಾಗಿಯೂ ಬಿಂಬಿಸಿಕೊಂಡರು.**

ಟಿಪ್ಪು ಸುಲ್ತಾನ್ ಜಯಂತಿ ಆಚರಣೆ ಹಾಗೂ ಅದಕ್ಕೆ ರಜೆ ಘೋಷಣೆಯ ನಿರ್ಧಾರ ರಾಜ್ಯಾದ್ಯಂತ ಪ್ರತಿಭಟನೆ ಹಾಗೂ ಹಿಂಸಾಚಾರಕ್ಕೆ ನಾಂದಿ ಹಾಡಿತು. ಇದರ ಸಲುವಾಗಿಯೇ ಕೊಡಗಿನಲ್ಲಿ ಎರಡು ಸಾವು ಸಂಭವಿಸಿದವು. ಸೌಹಾರ್ದತೆಯಿಂದ ಬದುಕುತ್ತಿದ್ದ ರಾಜ್ಯದ ಜನರನ್ನು ಹಿಂದೂ– ಮುಸ್ಲಿಂ ಎಂದು ವಿಭಜಿಸಲಾಯಿತು. ಇದಕ್ಕೂ ಹಿಂದೆ ಕಾಂಗ್ರೆಸ್ ಮುಖ್ಯಮಂತ್ರಿಯಾಗಿದ್ದ ಡಾ.ಎಂ. ವೀರಪ್ಪ ಮೊಯಿಲಿಯವರ ಕಾಲದಲ್ಲಿ ದೂರದರ್ಶನದಲ್ಲಿ ಉರ್ದು ವಾರ್ತಾ ಪ್ರಸಾರದ ನಿರ್ಧಾರಕ್ಕಿಂತ ಇದು ಕೆಟ್ಟದಾಗಿತ್ತು. ಮೊಯಿಲಿ ಅವರ ನಿರ್ಧಾರದ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಗಳು ನಡೆದು, ಈ ವಿಚಾರ ಬಿಬಿಸಿ ಚಾನಲ್‌ನಲ್ಲೂ ಪ್ರಸಾರಗೊಂಡಿತ್ತು.

ಕಾನೂನು ಮತ್ತು ಸುವ್ಯವಸ್ಥೆ (Law and Order) ಸಮಸ್ಯೆ ಎಲ್ಲೆಡೆ ಕಾಣಿಸಿಕೊಳ್ಳುವುದನ್ನು ಜನರು ಒಪ್ಪಿಕೊಂಡ ಹಾಗೆ, ಭ್ರಷ್ಟಾಚಾರವನ್ನೂ ಕೂಡ ಜನರು ಸಹಜ ಮತ್ತು ಸ್ವಾಭಾವಿಕ ಎಂಬುವ ರೀತಿಯಲ್ಲಿ ಸ್ವೀಕರಿಸುವಂತಾಯಿತು. ಸಿದ್ದರಾಮಯ್ಯನವರ ನಂತರ ಅಧಿಕಾರಕ್ಕೆ ಬಂದ ಭಾರತೀಯ ಜನತಾ ಪಕ್ಷದ ಆಳ್ವಿಕೆಯಲ್ಲಿ ಬಿ.ಎಸ್. ಯಡಿಯೂರಪ್ಪ ನಂತರ ಬಸವರಾಜ ಬೊಮ್ಮಾಯಿ ಮುಖ್ಯ ಮಂತ್ರಿಯಾದರು. ಇವರ ಅವಧಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ (Law and Order) ಸುಧಾರಣೆ ಕಂಡರೂ, ಭ್ರಷ್ಟಾಚಾರದ ವಿಷಯದಲ್ಲಿ ಮಾತ್ರ ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಮೀರಿಸಿತು.

ಹಾಗಾಗಿ ಸ್ವಾಭಾವಿಕವಾಗಿಯೇ ಭಾರತೀಯ ಜನತಾ ಪಕ್ಷ 2023ರ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಕಂಡಿತು. ಹಾಗೂ 136 ಸ್ಥಾನಗಳನ್ನು ಗೆಲ್ಲುವ ಮೂಲಕ ಕಾಂಗ್ರೆಸ್ ನಿಚ್ಚಳ ಬಹು ಮತ ಪಡೆದು ಕರ್ನಾಟಕ ರಾಜ ಕಾರಣದ ನಾಯಕರಾಗಿ ಮತ್ತೆ ಸಿದ್ದರಾಮಯ್ಯ ಅಧಿಕಾರದ ಗದ್ದುಗೆ ಯನ್ನು ಏರಿದರು. ಡಿ.ಕೆ.ಶಿವಕುಮಾರ್ ಅವರನ್ನು ಉಪ ಮುಖ್ಯಮಂತ್ರಿಯ ನ್ನಾಗಿಯೂ, ಡಾ. ಜಿ.ಪರಮೇಶ್ವರ ಅವರನ್ನು ಗೃಹ ಸಚಿವರನ್ನಾಗಿ ಮಾಡುವ ಮೂಲಕ ಸಿದ್ದರಾಮಯ್ಯ ನವರ ರೆಕ್ಕೆ ಪುಕ್ಕ ಹಾಗೂ ಕೊಕ್ಕನ್ನು ಕಾಂಗ್ರೆಸ್ ವರಿಷ್ಠ ಮಂಡಳಿ ಸ್ವಲ್ಪಮಟ್ಟಿಗೆ ಕತ್ತರಿಸಿತು.

ಆದರೆ, ಅವರ ಅಧಿಕಾರದ ಮೇಲೆ ಇಷ್ಟೆಲ್ಲಾ ಅಂಕುಶವಿದ್ದರೂ, ಸಿದ್ದರಾಮಯ್ಯನವರು ರಾಜ್ಯದ ಅತ್ಯಂತ ಪ್ರಬಲ ಮುಖ್ಯಮಂತ್ರಿಯಾಗಿ ಹೊರ ಹೊಮ್ಮಲು ಕಾರಣವೆಂದರೆ, ಅವರಿಗೆ ಕಾಂಗ್ರೆಸ್ ವರಿಷ್ಠ ಮಂಡಳಿಯ ಶ್ರೀರಕ್ಷೆ. ಜೊತೆಗೆ, ಹಣಕಾಸು, ಸಂಸದೀಯ ವ್ಯವಹಾರ (Cabinet Affairs) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಗುಪ್ತಚರ, ವಾರ್ತಾ, ಯುವ ಜನ ಸೇವೆ ಮತ್ತು ಕ್ರೀಡಾ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಯಾವ ಸಚಿವರಿಗೂ ನಿಯೋಜನೆಯಾಗದ ಇತರ ಎಲ್ಲಾ ಇಲಾಖೆಗಳು ಅವರ ಕಾರ್ಯ ವ್ಯಾಪ್ತಿಯಲ್ಲೇ ಇವೆ. ಆದರೆ, ಒಂದು ಸಣ್ಣ ಅಚ್ಚರಿಯೆಂದರೆ, ಡಾ.ಜಿ.ಪರಮೇಶ್ವರ್ ಅವರು ಗೃಹ ಸಚಿವರಾದರೂ, ಗುಪ್ತಚರ ವಿಭಾಗವನ್ನು (Intelligence) ಅವರ ಅಧಿಕಾರ ವ್ಯಾಪ್ತಿಯಿಂದ ಹೊರಗಿಡಲಾಗಿರುವುದು!

> **“ ಓರ್ವ ಪ್ರಾಮಾಣಿಕ ಹಾಗೂ ಕಾನೂನನ್ನು ಗೌರವಿಸುವ ನಾಗರಿಕನಲ್ಲಿರುವ ಒಂದು ವಿಷಾದಕರ ಸಂಗತಿ ಎಂದರೆ, ನ್ಯಾಯಮೂರ್ತಿ ಎನ್.ಸಂತೋಷ ಹೆಗಡೆ ಹೇಳಿರುವ ಹಾಗೆ, ಭ್ರಷ್ಟ ವ್ಯಕ್ತಿ ಇಲ್ಲವೆ ಅಪರಾಧಿಯಲ್ಲಿ ಇರಬೇಕಾದ ಕಳಂಕ ಭಾವನೆ ಈಗ ಇಲ್ಲವಾಗಿದೆ. ಇಂತಹ ಅಪರಾಧಿಗಳು ಜೈಲಿನಿಂದ ಹೊರಗೆ ಬರುವ ಸಂದರ್ಭದಲ್ಲಿ ಅವರ ಹಿಂಬಾಲಕರು ಹಾಗೂ ಅಭಿಮಾನಿಗಳು ಅವರಿಗೆ ಹಾರ ಹಾಕಿ, ಜೈಕಾರ ಕೂಗುತ್ತಾ ಬರಮಾಡಿ ಕೊಂಡು, ಮೆರವಣಿಗೆಯಲ್ಲಿ ಕರೆದೊಯ್ಯುತ್ತಾರೆ.**

ಹಾಗಾಗಿ ತಮ್ಮ ಸಹಚರರು ಇಲ್ಲವೆ ಸಚಿವರ ವಿರುದ್ಧ ಕೇಳಿಬರುವ ಭ್ರಷ್ಟಾಚಾರದ ಆರೋಪಗಳಿಗೆ ಸಂಬಂಧಿಸಿದಂತೆ ತದ್ವಿರುದ್ಧ ಎನಿಸುವ ರೀತಿಯಲ್ಲಿ ಸಿದ್ದರಾಮಯ್ಯ ನವರು ವರ್ತಿಸುತ್ತಿರುವುದರಲ್ಲಿ ಆಶ್ಚರ್ಯವೇನು ಇಲ್ಲ.!

ಮುಖ್ಯಮಂತ್ರಿಯಾದಾಗ ಮೊದಲನೆಯ ಬಾರಿ ತಮ್ಮ ವಿರುದ್ಧ ಹಲವು ಪ್ರಕರಣಗಳನ್ನು ದಾಖಲಿಸಿದ ಲೋಕಾಯುಕ್ತವನ್ನೇ ರದ್ದುಗೊಳಿಸಿ, ಸರ್ಕಾರದ ಒಂದು ಅಧೀನ ತನಿಖಾ ಸಂಸ್ಥೆ 'ಭ್ರಷ್ಟಾಚಾರ ನಿಗ್ರಹ ದಳ' (Anti Corruption Bureau) ಅಸ್ತಿತ್ವಕ್ಕೆ ತಂದದ್ದು ಮತ್ತೊಂದು ಅಚ್ಚರಿಯಲ್ಲವೆ!?

ಇದರ ಫಲಿತಾಂಶ: ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರದ ವಿರುದ್ಧ ವ್ಯಾಪಕ ಭ್ರಷ್ಟಾಚಾರ ಆರೋಪಗಳು ಕೇಳಿ ಬಂದವು. ಇದರೊಂದಿಗೆ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಪಕ್ಷದ ವಿಶ್ವಾಸಾರ್ಹತೆ ನಾಶವಾಯಿತು. ಆದರೂ, ಕಾಂಗ್ರೆಸ್ ವರಿಷ್ಠ ಮಂಡಳಿ ಮೌನ ವಹಿಸಿದೆ. ಈ ಮೌನ ಭ್ರಷ್ಟಾಚಾರವನ್ನು ಒಪ್ಪಿ–ಅಪ್ಪಿಕೊಂಡಂತಿದೆ. ಈಗಿನ ಭ್ರಷ್ಟಾ ಚಾರ, ಸ್ವಜನ ಪಕ್ಷಪಾತ, ಮುಸ್ಲಿಮರ ಓಲೈಕೆಯ ಬಗ್ಗೆ ನಮಗೆ ಅರಿವಿರುವುದರಿಂದ ಅವುಗಳನ್ನು ಮತ್ತೆ ಇಲ್ಲಿ ಉಲ್ಲೇಖಿಸುವ ಅಗತ್ಯ ವಿಲ್ಲ. ಇನ್ನೂ ಅಧಿಕ ಪ್ರಕರಣಗಳು ಈ ಪಟ್ಟಿಗೆ ಸೇರ್ಪಡೆಯಾಗುತ್ತಿವೆ.

ಓರ್ವ ಪ್ರಾಮಾಣಿಕ ಹಾಗೂ ಕಾನೂನನ್ನು ಗೌರವಿಸುವ ನಾಗರಿಕನಲ್ಲಿರುವ ಒಂದು ವಿಷಾದಕರ ಸಂಗತಿ ಎಂದರೆ, ನ್ಯಾಯಮೂರ್ತಿ ಎನ್.ಸಂತೋಷ ಹೆಗಡೆ ಹೇಳಿರುವ ಹಾಗೆ, ಭ್ರಷ್ಟ ವ್ಯಕ್ತಿ ಇಲ್ಲವೆ ಅಪರಾಧಿಯಲ್ಲಿ ಇರಬೇಕಾದ ಕಳಂಕ ಭಾವನೆ ಈಗ ಇಲ್ಲವಾಗಿದೆ. ಇಂತಹ ಅಪರಾಧಿಗಳು ಜೈಲಿನಿಂದ ಹೊರಗೆ ಬರುವ ಸಂದರ್ಭದಲ್ಲಿ ಅವರ ಹಿಂಬಾಲಕರು ಹಾಗೂ ಅಭಿಮಾನಿಗಳು ಅವರಿಗೆ ಹಾರ ಹಾಕಿ, ಜೈಕಾರ ಕೂಗುತ್ತಾ ಬರ ಮಾಡಿಕೊಂಡು, ಮೆರವಣಿಗೆಯಲ್ಲಿ ಕರೆದೊಯ್ಯುತ್ತಾರೆ. ಕೋಟ್ಯಾಂತರ ರೂಪಾಯಿಗಳ ಮೌಲ್ಯದ ಆಸ್ತಿ ಪಾಸ್ತಿ ಲೂಟಿಯಾಗುತ್ತಿರುವುದು, ಅವುಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಪುರಾವೆಗಳು ಲಭ್ಯವಿದ್ದಾಗ್ಯೂ ಕಾಂಗ್ರೆಸ್ ನಾಯಕರು ಯಾವುದೇ ಅಕ್ರಮ ನಡೆದೇ ಇಲ್ಲವೇನೋ ಎಂಬ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಹಾಗೂ ಅದೇ ರೀತಿಯಲ್ಲಿ ಹಿಂದುಳಿದ ವರ್ಗಗಳ ಹಾಗೂ ದಲಿತರ ಕಲ್ಯಾಣಕ್ಕೆ ಮೀಸಲಿಟ್ಟಿದ್ದ ಹಣವನ್ನು ಅಕ್ರಮವಾಗಿ ನುಂಗಿ ನೀರು ಕುಡಿದಿದ್ದಾರೆ. ಆದರೆ, ಸರ್ಕಾರದ ಚಕ್ರವು ನಿಧಾನವಾಗಿ ಚಲಿಸುತ್ತದೆ ಎಂಬ ಮಾತಿದೆ. **ಈಗ ಜಾರಿ ನಿರ್ದೇಶನಾಲಯ (ಇಡಿ) ರಂಗಪ್ರವೇಶಿಸಿರುವುದರಿಂದ ಅಂತಿಮವಾಗಿ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆಯಾಗುತ್ತದೆಂದು ನಿರೀಕ್ಷಿಸೋಣ.**

ರಾಜ್ಯದ ಮಾಜಿ ಲೋಕಾಯುಕ್ತರಾದ **ನ್ಯಾಯಮೂರ್ತಿ ಎನ್.ಸಂತೋಷ್ ಹೆಗಡೆ**ಯವರು ಭ್ರಷ್ಟಾಚಾರಿಗಳು ಹಾಗೂ ಅಪರಾಧಿಗಳನ್ನು ಸನ್ಮಾನಿಸುವ ಹಾಗೂ ಅವರು ಮಾಡಿದಂತಹ ಅಪರಾಧವನ್ನು ಸಮರ್ಥಿಸಿಕೊಳ್ಳುತ್ತಿರುವ ಬಗ್ಗೆ ಆಡಿರುವ ಮಾತುಗಳನ್ನು ಕೇಳಿದ ನಂತರ, **ನನಗೆ ಹಳೆಯ ತಲೆಮಾರಿನ ಗಾಂಧಿವಾದಿ ರಾಜಕಾರಣಿಗಳ ಸಭ್ಯತೆ ಹಾಗೂ ಮೌಲ್ಯಗಳು ನನ್ನ ಸ್ಮರಣ ಫಲಕದಲ್ಲಿ ಹಾದು ಹೋದವು.** ಕ್ಷಮಿಸಿ, ನಾನು ಮಹಾತ್ಮ ಗಾಂಧಿಯವರನ್ನು ಉಲ್ಲೇಖಿಸಿ ಮಾತನಾಡುತ್ತಿದ್ದೇನೆ; ಇಂದಿನ ಗಾಂಧಿಗಳ ಬಗ್ಗೆ ಅಲ್ಲ.

ಅಂದಿನ ದಿನಗಳಲ್ಲಿ ಭ್ರಷ್ಟಾಚಾರ, ಹಿಂಸೆ ಇಲ್ಲವೆ ಕೊಲೆ ಇವುಗಳನ್ನು ಜನರು ಅತ್ಯಂತ ಹೇಯವಾದ ಕೃತ್ಯ, ಘೋರ ಅಪರಾಧ ಎಂದೇ ಪರಿಗಣಿಸುತ್ತಿದ್ದರು. ಬಹುತೇಕ ಪ್ರಕರಣಗಳಲ್ಲಿ ತಪ್ಪಿತಸ್ಥರು ತಾವು ಮಾಡಿದ ಘೋರ ಅಪರಾಧಕ್ಕಾಗಿ ಪಶ್ಚಾತ್ತಾಪಪಡುತ್ತಿದ್ದರು ಹಾಗೂ ತೀವ್ರ ಮುಜುಗರಕ್ಕೀಡಾಗುತ್ತಿದ್ದರು.

ಸಾಮಾಜಿಕ ಬಹಿಷ್ಕಾರ ಮತ್ತು ಕಳಂಕವನ್ನು ಸಹಿಸಲು ಸಾಧ್ಯವಾಗದೆ ಕೆಲವರು ಆತ್ಮಹತ್ಯೆಗೂ ಶರಣಾಗುತ್ತಿದ್ದರು. ಆದರೆ ಈಗ **ನ್ಯಾಯಮೂರ್ತಿ ಎನ್.ಸಂತೋಷ್ ಹೆಗಡೆ**ಯವರು ಹೇಳುವ ಹಾಗೆ **ನಮ್ಮ ರಾಜಕಾರಣಿಗಳಲ್ಲಿ ಲಜ್ಜೆ ಎಂಬ ಪ್ರಜ್ಞೆಯೇ ಕಾಣದಾಗಿದೆ.**

ನಾನು ಕೇಳಲ್ಪಟ್ಟಂತೆ ಕರ್ನಾಟಕದ ವಿಧಾನಸೌಧದಲ್ಲಿ ನಡೆದಂತಹ ಪ್ರಸಂಗವಿದು; ಒಮ್ಮೆ ಹಿರಿಯ ಸಮಾಜವಾದಿ ನಾಯಕ ಹಾಗೂ ಅಂದಿನ ವಿರೋಧ ಪಕ್ಷದ ನಾಯಕರಾದ **ಶಾಂತವೇರಿ ಗೋಪಾಲ ಗೌಡರು,** ವಿಧಾನ ಸಭೆಯಲ್ಲಿ 'ಶರಾವತಿ ಹಗರಣ'ದ ಬಗ್ಗೆ ಮಾತನಾಡುತ್ತಿದ್ದರಂತೆ. ಅವರು ನಿರರ್ಗಳ ಹಾಗೂ ಸತ್ವಶಾಲಿ ಭಾಷಣಕಾರರಾಗಿದ್ದರು. ಈ ವೇಳೆ ಅವರು ಅಂದಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರನ್ನು ಬಂದೂಕದಿಂದ ಒಂದೇ ಸಮನೆ ಗುಂಡು ಹಾರಿಸುವ ಹಾಗೆ ತಮ್ಮ ತೀಕ್ಷ್ಣ ಮಾತಿನ ವರಸೆ ಮೂಲಕ ತರಾಟೆಗೆ ತೆಗೆದುಕೊಂಡಿದ್ದರು. **ಮುಖ್ಯಮಂತ್ರಿಗಳನ್ನು ಉದ್ದೇಶಿಸಿ ಗೌಡರು, "ನನ್ನ ಜೀವನದಲ್ಲಿ ಇಂತಹ ಭ್ರಷ್ಟ ಮುಖ್ಯಮಂತ್ರಿಯನ್ನ ನೋಡಿಯೇ ಇಲ್ಲ" ಎಂಬ ಕಟು ಮಾತುಗಳನ್ನು ಆಡಿದ್ದರು.**

ಅರ್ಥಾತ್ ಜೂಲಿಯಸ್ ಸೀಸರ್ ರೀತಿ ಗೋಪಾಲಗೌಡರು ಮಾತನಾಡಿದ್ದರು ಅನ್ನಿ. ಅವರ ಈ ಮಾತಿನಿಂದ ವಿಧಾನಸಭೆಯಲ್ಲಿ ಗದ್ದಲ, ಕೋಲಾಹಲವೇ ಉಂಟಾಯಿತು. ಕೊನೆಗೆ ಅನಿವಾರ್ಯವಾಗಿ ವಿಧಾನಸಭೆಯ ಕಲಾಪವನ್ನು ಮುಂದೂಡಲಾಯಿತು.

ತಕ್ಷಣ ಮುಖ್ಯಮಂತ್ರಿ ನಿಜಲಿಂಗಪ್ಪನವರು ತಮ್ಮ ಆಸನದಿಂದ ಮೇಲೆದ್ದು, ವಿಧಾನಸೌಧದ ಎರಡನೇ ಮಹಡಿಯಲ್ಲಿದ್ದ ತಮ್ಮ ಕಚೇರಿಗೆ ಹೋದರು. ಹಾಗೂ ದ್ವಾರಪಾಲಕ ನಿಗೆ ಯಾರನ್ನೂ ಒಳಗೆ ಬಿಡಬೇಡ ಎಂದು ಕಟ್ಟಾಜ್ಞೆ ಮಾಡಿದ್ದರು.

ಇತ್ತ ಗೋಪಾಲಗೌಡರು, ತಾವು ಸದನದಲ್ಲಿ ಆಡಿದ ಕಟು ನುಡಿಗಳಿ ಗಾಗಿ ಪಶ್ಚಾತ್ತಾಪಪಟ್ಟು, ಮುಖ್ಯ ಮಂತ್ರಿಗಳನ್ನು ಕಾಣಲು ಅವರ ಕಚೇರಿಗೆ ಬಂದರು. ಆದರೆ ದ್ವಾರಪಾಲಕ, ಗೋಪಾಲಗೌಡರನ್ನು ಮುಖ್ಯಮಂತ್ರಿ ಕಚೇರಿಯೊಳಗೆ ಬಿಡಲಿಲ್ಲ. ಆದರೂ, ಗೋಪಾಲ ಗೌಡರು, ದ್ವಾರಪಾಲಕನ ಮೇಲೂ ಕೋಪದಿಂದ ಕೂಗಾಡಿ, ಬಳಿಕ ಮುಖ್ಯಮಂತ್ರಿಗಳ ಕಚೇರಿ ಯೊಳಗೆ ನುಗ್ಗಿದರು. ಅಲ್ಲಿ ಗೋಪಾಲಗೌಡರಿಗೆ ಒಂದು ಅನಿರೀಕ್ಷಿತ ಅಚ್ಚರಿ ಸಂಗತಿ ಕಾದಿತ್ತು

ನಿಜಲಿಂಗಪ್ಪನವರು ಮೇಜಿನ ಮೇಲಿದ್ದ ತಮ್ಮ ಕೈಗಳ ಮೇಲೆ ತಲೆ ಇಟ್ಟು ಕುಳಿತಿದ್ದರು. **ಗೋಪಾಲ ಗೌಡರು ಹೋದವರೇ, ನಿಜಲಿಂಗಪ್ಪನವರನ್ನು ಸಂತೈಸಲು ಮುಂದಾದಾಗ, ನಿಜಲಿಂಗಪ್ಪನವರು ಕೂಡಲೇ ಕಣ್ಣೀರಾಕುತ್ತಾ ರೋಧಿಸಲು ಪ್ರಾರಂಭಿಸಿದರು.**

ನೀವೇಕೆ ರೋಧಿಸುತ್ತಿದ್ದೀರಿ? ಏನಾಯಿತು? ಎಂದು ಗೋಪಾಲ ಗೌಡರು ನಿಜಲಿಂಗಪ್ಪನವರನ್ನು ಕೇಳಿದರು.

"ಗೌಡರೇ, ನೀವು ನನ್ನನ್ನು ಭ್ರಷ್ಟಾಚಾರಿ ಎಂದು ಕಿಕ್ಕಿರಿದ ವಿಧಾನಸಭೆಯಲ್ಲಿ ಕರೆದಿದ್ದೀರಿ. ನಾನು ನಿಜವಾಗಿಯೂ ಭ್ರಷ್ಟಾಚಾರಿಯೇ? ನಾನು ಭ್ರಷ್ಟಾಚಾರಿ ಎಂಬುದನ್ನು ನೀವು ನಿಜವಾಗಿಯೂ ನಂಬುತ್ತೀರಾ? ನಿಮ್ಮ ಆತ್ಮಸಾಕ್ಷಿಗೂ ಹಾಗೆ ಅನ್ನಿಸುತ್ತದೆಯೇ ಹೇಳಿ?" ಎಂದು ಕಣ್ಣೀರಾಕಿದರು.

ಗೋಪಾಲಗೌಡರು ತಕ್ಷಣ ವಾಸ್ತವತೆಗೆ ಮರಳಿ, ಹೇಳಿದರು; "ಓ ದೇವರೇ ನನ್ನ ಮಾತಿನ ಭರದಲ್ಲಿ ಕೋಪೋದ್ರೇಕನಾಗಿ ಅಂತಹ ಮಾತುಗಳನ್ನು ಆಡಿಬಿಟ್ಟೆ. ಸದನಕ್ಕೆ ಬನ್ನಿ. ನಾನು ಅಂತಹ ದೋಷಪೂರಿತ ಮಾತುಗಳನ್ನು ಸದನದಲ್ಲೇ ವಾಪಸ್ ಪಡೆಯುತ್ತೇನೆ. ಹಾಗೆಯೇ, ಅದಕ್ಕಾಗಿ ಕ್ಷಮೆಯಾಚಿಸಿ, ಈ ಮಾತುಗಳನ್ನು ಕಡತದಿಂದ ತೆಗೆಸುವಂತೆ ಮಾನ್ಯ ಸಭಾಧ್ಯಕ್ಷರಲ್ಲಿ ಮನವಿ ಮಾಡುತ್ತೇನೆ" ಎಂದು ಹೇಳುತ್ತಾ ಪ್ರಕರಣಕ್ಕೆ ತೆರೆ ಎಳೆದರು.

ಇದು ನಮ್ಮ ಹಿಂದಿನ ತಲೆಮಾರಿನ ರಾಜಕಾರಣಿಗಳ ಘನತೆ ಮತ್ತು ಗಾಂಭೀರ್ಯಕ್ಕೆ ಒಂದು ಉದಾಹರಣೆಯಾಗ ಬಹುದು. ಆದರೆ ಇಂದೇನಾಗಿದೆ? **ಎಲ್ಲಿಯ ನಿಜಲಿಂಗಪ್ಪ ಎಲ್ಲಿಯ** ..... ನೀವೇ ಊಹಿಸಿ.

ಓ ದೇವರೆ ಕರ್ನಾಟಕವನ್ನು ರಕ್ಷಿಸು.

email:
voice@starofmysore.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಸುತ್ತೂರು ಕ್ಷೇತ್ರದಲ್ಲಿ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು

ಮೈಸೂರು,ಅ.30–ಶ್ರೀ ಸುತ್ತೂರು ಕ್ಷೇತ್ರದಲ್ಲಿ ಕಾರ್ತಿಕಮಾಸದ ಪ್ರಯುಕ್ತ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ ಮತ್ತು ಶ್ರೀ ವೀರಭದ್ರೇಶ್ವರ ದೇವಸ್ಥಾನಗಳಲ್ಲಿ ನವೆಂಬರ್ 2ರಿಂದ ಡಿಸೆಂಬರ್ 1ರವರೆಗೆ ಪ್ರತಿದಿನ ಪ್ರಾತಃಕಾಲ ಮಹಾರುದ್ರಾಭಿಷೇಕ, ಸಹಸ್ರನಾಮ ಹಾಗೂ ಅಷ್ಟೋತ್ತರ ಬಿಲ್ವಾರ್ಚನೆ ಮತ್ತು ಮಹಾಮಂಗಳಾರತಿ ಹಾಗೂ ಪ್ರತಿ ಸೋಮವಾರ ಸಂಜೆ ದೀಪೋತ್ಸವ ಏರ್ಪಡಿಸಲಾಗಿದೆ. ಭಕ್ತಾದಿಗಳು, ಸಾರ್ವಜನಿಕರು ಈ ಎಲ್ಲ



ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀಗುರುಕೃಪೆಗೆ ಪಾತ್ರರಾಗಬೇಕಾಗಿ ಕೋರಲಾಗಿದೆ. ಸೇವಾರ್ಥ ಸಲ್ಲಿಸಲು ಅಪೇಕ್ಷಿಸುವ ಭಕ್ತಾದಿಗಳು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಅಥವಾ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯಾಲಯದಲ್ಲಿ ನೇರವಾಗಿ ಅಥವಾ (ಮಾಹಿತಿ ಕೇಂದ್ರ) 8896964242, 08221–232223, 0821 – 2548212 ದೂರವಾಣಿಗಳ ಮೂಲಕ ಸಂಪರ್ಕಿಸಬಹುದು.

ವಿದ್ಯಾರ್ಥಿನಿಲಯಕ್ಕೆ ನೆರವಿಗೆ ಮನವಿ



ನಂಜನಗೂಡಿನ ಶ್ರೀ ಜಗನ್ಮಾತೆ ಅಕ್ಕಮಹಾದೇವಿ ಮಹಿಳಾ ವಿದ್ಯಾರ್ಥಿನಿಲಯದ ವಿದ್ಯಾರ್ಥಿನಿಯರು ಕೇಂದ್ರ ಸಚಿವ ವಿ.ಸೋಮಣ್ಣ ಅವರನ್ನು ಮೈಸೂರಿನಲ್ಲಿ ಭೇಟಿ ಮಾಡಿ, ವಿದ್ಯಾರ್ಥಿನಿಲಯಕ್ಕೆ ನೆರವು ನೀಡುವಂತೆ ಮನವಿ ಪತ್ರ ಸಲ್ಲಿಸಿದರು.

ಅಂತರ ಶಾಲಾ ಛದ್ಮವೇಷ ಸ್ಪರ್ಧೆ



ನರ್ಸರಿ ಶಾಲಾ ಮಕ್ಕಳಿಗೆ ಅಂತರ ಶಾಲಾ ಛದ್ಮವೇಷ ಸ್ಪರ್ಧೆ, ಭಾವಗೀತೆ, ಜನಪದಗೀತೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು,ಅ.30–ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ವಿದ್ಯಾಸಂಸ್ಥೆಯಲ್ಲಿ ಶ್ರೀ ಮಹದೇವಯ್ಯರವರ ಸ್ಮರಣಾರ್ಥ ನರ್ಸರಿ ಶಾಲಾ ಮಕ್ಕಳಿಗೆ ಅಂತರ ಶಾಲಾ ಛದ್ಮವೇಷ ಸ್ಪರ್ಧೆ ಮತ್ತು ಶ್ರೀಮತಿ ಲಕ್ಷ್ಮೀದೇವಮ್ಮನವರ ಸ್ಮರಣಾರ್ಥವಾಗಿ ಅಂತರಶಾಲಾ ಮಟ್ಟದ ಭಾವಗೀತೆ ಮತ್ತು ಜನಪದಗೀತೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಈ ಸ್ಪರ್ಧೆಯಲ್ಲಿ ಹಲವಾರು ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದು, ವಿಜೇತರಿಗೆ ಪಾರಿತೋಷಕ ಮತ್ತು ನಗದು ಬಹುಮಾನ ವಿತರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶಾಲಾ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕಿ ಶ್ರೀಮತಿ ಮಂಜುಳ ಮಿರ್ಲೆ ಆಗಮಿಸಿದ್ದರು. ಎಂ.ಎಸ್. ಸುಹಾಸ್‌ಪ್ರಭು ಪ್ರಶಸ್ತಿ ವಿತರಿಸಿದರು. ಆಡಳಿತ ಮಂಡಳಿಯ ಸದಸ್ಯೆ ಆರ್.ಕೆ. ರಾಜು ಅಧ್ಯಕ್ಷತೆ ವಹಿಸಿದ್ದರು.

ಕಾರ್ಯದರ್ಶಿ ಎಂ.ಎನ್.ಮಹೇಂದ್ರ, ವಿಶ್ವಪ್ರಜ್ಞ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಎ.ಆರ್.ದೇವರಾಜು, ಎಸ್.ವೈ.ಹೊಂಬಾಳ್, ಕಾರ್ಯಾಧ್ಯಕ್ಷ ಎಂ.ಎನ್.ಕೃಷ್ಣಸ್ವಾಮಿ, ಮುಖ್ಯೋಪಾಧ್ಯಾಯಿನಿ ಜಿ.ಎನ್ ಸುಧಾ ಹಾಗೂ ತೀರ್ಪುಗಾರರಾಗಿ ಆರ್.ಸಿ.ರಾಜಲಕ್ಷ್ಮಿ, ರಾಜೇಶ್ ಪತಂಗೆ, ಪಲ್ಲವಿ ಹಾಗೂ ಶ್ವೇತ ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

ಪರಿಸರ ಸ್ನೇಹಿ ದೀಪಾವಳಿ ಆಚರಿಸಿ



ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲೆಯ ಪಂಚತ್ಸರಣ ಸ್ಕೌಟ್ ಟ್ರೂಪ್‌ನಿಂದ ಪರಿಸರ ಸ್ನೇಹಿ ದೀಪಾವಳಿ ಆಚರಣೆ ಜಾಗೃತಿ ನಡೆಸಲಾಯಿತು.

ಮೈಸೂರು,ಅ.30–ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲೆಯ ಪಂಚತ್ಸರಣ ಸ್ಕೌಟ್ ಟ್ರೂಪ್ ವತಿಯಿಂದ ಪರಿಸರ ಸ್ನೇಹಿ ದೀಪಾವಳಿಯನ್ನು ಆಚರಿಸುವ ಮೂಲಕ ಶಬ್ದಮಾಲಿನ್ಯ ಹಾಗೂ ಪರಿಸರ ಮಾಲಿನ್ಯವನ್ನು ತಡೆಗಟ್ಟಬೇಕೆಂಬ ಸಂದೇಶ ಸಾರುವ ಕಾರ್ಯಕ್ರಮವನ್ನು ನಡೆಸಲಾಯಿತು.

ಸ್ಕೌಟ್‌ಗಳು ಸರಸ್ವತಿಪುರಂ ಬಡಾವಣೆಯ ಮನೆಗಳಿಗೆ ತೆರಳಿ ದೀಪಗಳನ್ನು ನೀಡಿ 'ದೀಪ ಬೆಳಗಿಸಿ ದೀಪಾವಳಿ ಆಚರಿಸಿ', 'ಪಟಾಕಿ ಸುಡುವುದನ್ನು ನಿಲ್ಲಿಸಿ ಪರಿಸರ ಉಳಿಸಿ' ಎಂಬ ಘೋಷಣೆಗಳಿರುವ ಭಿತ್ತಿಪತ್ರಗಳನ್ನು ಹಿಡಿದು ಜಾಗೃತಿ ಮೂಡಿಸಿದರು.

ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕವಿತ ಡಿ.ಆರ್. ಅವರು, ಪರಿಸರಸ್ನೇಹಿ ದೀಪಾವಳಿ ಆಚರಿಸುವುದರ ಮಹತ್ವ ಹಾಗೂ ಪಟಾಕಿ ಸಿಡಿಸುವುದರಿಂದ ಪರಿಸರದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿ, ದೀಪ ಬೆಳಗಿಸುವುದರ ಮೂಲಕ ಪರಿಸರ ಸ್ನೇಹಿ ದೀಪಾವಳಿ ಆಚರಿಸುವಂತೆ ಕರೆ ನೀಡಿದರು. ಎಲ್ಲಾ ಶಿಕ್ಷಕ ವೃಂದದವರು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಜರಿದ್ದರು.

ಯೋಗಾಸನ ಸ್ಪರ್ಧೆಯಲ್ಲಿ ಜಿ.ಅನುಪ್‌ಗೆ ಬೆಳ್ಳಿ ಪದಕ



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಕ್ರೀಡಾ ವಿಭಾಗ ಮತ್ತು ಟೆರಿಷಿಯನ್ ಕಾಲೇಜು ಸಂಯುಕ್ತಾಶ್ರಯದಲ್ಲಿ ಟೆರಿಷಿಯನ್ ಕಾಲೇಜಿನಲ್ಲಿ ನಡೆದ ಅಂತರ ಕಾಲೇಜುಗಳ ಯೋಗಾಸನ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಎನ್‌ಐಇ ಪ್ರಥಮ ದರ್ಜೆ ಕಾಲೇಜಿನ ತೃತೀಯ ಬಿಬಿಎ ವಿದ್ಯಾರ್ಥಿ ಅನೂಪ್ .ಜಿ, ಬೆಳ್ಳಿ ಪದಕ ಪಡೆದಿದ್ದಾರೆ. ಇವರನ್ನು ಕಾಲೇಜಿನ ಪ್ರಾಂಶುಪಾಲ ಡಾ.ಆರ್. ಗೋಪಾಲಕೃಷ್ಣ ಅರಸ್, ಕಾಲೇಜು ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುಮಾ, ದೈಹಿಕ ಶಿಕ್ಷಣ ನಿರ್ದೇಶಕ ಕೆ.ಎಸ್.ರವಿನಂದನ್ ಅಭಿನಂದಿಸಿದರು.

ಶಕ್ತಿ ಯೋಜನೆ ಬಗ್ಗೆ ಮರುಚಿಂತನೆ ನಡೆಸಲು ಮಹಿಳೆಯರಿಂದಲೇ ಒತ್ತಡ

ಬೆಂಗಳೂರಲ್ಲಿ ಐರಾವತ ಕ್ಲಬ್ ಕ್ಲಾಸ್ 2.0 ನೂತನ ಬಸ್ಸುಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ಅ.30– ಅನೇಕ ಮಂದಿ ಹೆಣ್ಣು ಮಕ್ಕಳು ನಮಗೆ ಟಿಕೆಟ್ ತೆಗೆದುಕೊಳ್ಳುವ ಶಕ್ತಿಯಿದೆ. ಉಚಿತ ಪ್ರಯಾಣ ಬೇಡ ಎಂದು ಟ್ವೀಟ್ ಹಾಗೂ ಇ–ಮೇಲ್ ಮೂಲಕ ವಿಚಾರ ತಿಳಿಸುತ್ತಿದ್ದಾರೆ. ಈ ಬಗ್ಗೆ ನಾವು ಚರ್ಚೆ ಮಾಡುತ್ತೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಸೌಧದ ಮುಂಭಾಗ ಬುಧವಾರ ಐರಾವತ ಕ್ಲಬ್ ಕ್ಲಾಸ್ 2.0 ನೂತನ ಬಸ್ಸುಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ಹಣ ಕೊಡಲು ಮುಂದಾದರೂ, ಕಂಡಕ್ಟರ್ ಅವರು ಹಣ ತೆಗೆದುಕೊಳ್ಳುತ್ತಿಲ್ಲ ಎಂದು ಅನುಕೂಲ ಸ್ಥಿತಿಯಲ್ಲಿರುವ ಶೇ.5ರಿಂದ 10 ರಷ್ಟು ಹೆಣ್ಣು ಮಕ್ಕಳು ಹೇಳುತ್ತಿದ್ದಾರೆ. ಶೀಘ್ರದಲ್ಲಿ ಇದರ ಬಗ್ಗೆ ನಾನು ರಾಮಲಿಂಗಾರೆಡ್ಡಿ ಅವರ ಜತೆ ಪ್ರತ್ಯೇಕವಾಗಿ ಸಭೆ ನಡೆಸಿ ಚರ್ಚೆ ನಡೆಸುತ್ತೇವೆ ಎಂದರು.



ಬೆಂಗಳೂರಲ್ಲಿ ಬುಧವಾರ ಐರಾವತ ಕ್ಲಬ್ ಕ್ಲಾಸ್ 2.0 ನೂತನ ಬಸ್ಸುಗಳ ಲೋಕಾರ್ಪಣೆಗೊಳಿಸಲಾಯಿತು.

ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಕೆಎಸ್ ಆರ್‌ಟಿಸಿ ಸಂಸ್ಥೆ ಹೆಸರು ಮಾಡಿದೆ. ಕಳೆದ ಒಂದು ವರ್ಷದಲ್ಲಿ 112 ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಈ ಸಾಧನೆಗೆ ಸಂಸ್ಥೆಯ ನೌಕರರ ಶ್ರಮ ಕಾರಣ ಎಂದರು. ಐರಾವತ ಎಂದರೆ ಇಂದ್ರನ ವಾಹನ, ಆನೆ ಎಂದು ಅರ್ಥ. ಆನೆಯಂತೆ ಬಲಶಾಲಿ ಎಂದು ಅರ್ಥ. ವೋಲ್ವೋ ಸಂಸ್ಥೆಯ ಈ ಬಸ್ಸಿಗೆ 1.60 ಕೋಟಿ ಎಂದು ಸಂಸ್ಥೆಯವರು ಹೇಳಿದ್ದಾರೆ. ಇತ್ತೀಚೆಗೆ ನಾವು ಒಂದು ಕಾರು ತೆಗೆದುಕೊಳ್ಳಬೇಕು ಎಂದರೆ ಒಂದು ಕೋಟಿ ಮೀರುತ್ತದೆ ಎಂದರು.

ಕೆಎಸ್‌ಆರ್‌ಟಿಸಿ ಪ್ರಾರಂಭವಾದಾಗ ಕೇವಲ 120 ಬಸ್‌ಗಳು ಇದ್ದವು, ಇಂದು 24,282 ಬಸ್‌ಗಳು ಇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 6,200 ಬಸ್‌ಗಳ ಖರೀದಿಗೆ ಮುಂದಾಗಿದೆ. ಇದರಲ್ಲಿ 3,400 ಬಸ್‌ಗಳನ್ನು ಖರೀದಿ ಮಾಡಲಾಗಿದೆ. ಸುಮಾರು 9 ಸಾವಿರ ಡ್ರೈವರ್ ಹಾಗೂ ಕಂಡಕ್ಟರ್‌ಗಳ ನೇಮಕಾತಿಗೆ ಚಾಲನೆ ನೀಡಲಾಗಿದೆ. ಅನುಕಂಪದ ಆಧಾರದ ಮೇಲೆ ಒಂದು ಸಾವಿರಕ್ಕೂ ಹೆಚ್ಚು ನೌಕರರ ಕುಟುಂಬಸ್ಥರಿಗೆ ಉದ್ಯೋಗ ನೀಡಲಾಗಿದೆ. ಅಪಘಾತದಲ್ಲಿ ಸಾವನ್ನಪ್ಪಿದ ನೌಕರರ ಕುಟುಂಬದವರಿಗೆ ಒಂದು ಕೋಟಿ ರೂ. ಪರಿಹಾರ ನೀಡಲಾಗಿದೆ. ಇಡೀ ಭಾರತದಲ್ಲಿಯೇ ಇಲ್ಲದ ಅತ್ಯುತ್ತಮವಾದ ವ್ಯವಸ್ಥೆ ನಮ್ಮಲ್ಲಿದೆ ಎಂದು ಹೇಳಿದರು.

ಕರ್ನಾಟಕ ಸಾರಿಗೆ ಸಂಸ್ಥೆಯನ್ನು ವ್ಯವಹಾರಕ್ಕಾಗಿ ಹುಟ್ಟಿಹಾಕಿಲ್ಲ. ನಾಗರಿಕರ ಸೇವೆಗಾಗಿ ಇದನ್ನು ಮೀಸಲಿಡಲಾಗಿದೆ. ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ, ಇಂಧನ ಬೆಲೆ ಹೆಚ್ಚಾದ ತಕ್ಷಣ ಟಿಕೆಟ್ ದರವೂ ಹೆಚ್ಚಾಗಬೇಕು ಎನ್ನುವ ನಿಯಮ ಮಾಡಲಾಗಿತ್ತು ಎಂದರು. ಸಂಸ್ಥೆಯಲ್ಲಿ ಈಗ ಶಿಸ್ತು ಬಂದಿದೆ. ಚಾಲಕರು ನಿಯಮಕ್ಕೆ ಅನುಸಾರವಾಗಿ ನಡೆದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಸುಮಾರು 1.80 ಕೋಟಿ ಜನರು ಪ್ರಯಾಣ ಮಾಡುತ್ತಿದ್ದಾರೆ ಎಂದರು.

ಎಚ್‌ಎಂಟಿ ಭೂಮಿಗೆ ಅರಣ್ಯ ಸಚಿವ ಖಂಡ್ರೆ ಅತಿಕ್ರಮ ಪ್ರವೇಶ ಮಾಡಿದ್ದಾರೆ

ರಾಮನಗರ, ಅ.30– ಭಾರೀ ಕೈಗಾರಿಕೆಗಳ ಸಚಿವಾಲಯದ ಅಧೀನದಲ್ಲಿರುವ ಕೇಂದ್ರ ಸಾರ್ವಜನಿಕ ವಲಯದ ಎಚ್‌ಎಂಟಿಗೆ ಸೇರಿದ ಭೂಮಿಗೆ ಕರ್ನಾಟಕದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅತಿಕ್ರಮ ಪ್ರವೇಶ ಮಾಡಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಯಶ್ ನಟನೆಯ 'ಟಾಕ್ಸಿಕ್' ಚಿತ್ರದ ಚಿತ್ರೀಕರಣಕ್ಕೆ ಸೆಟ್ ಹಾಕಲು ಅರಣ್ಯ ಭೂಮಿಯಲ್ಲಿ ಮರಗಳನ್ನು ಕಡಿಯಲು ಅನುಮತಿ ನೀಡಿದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಖಂಡ್ರೆ ನಿನ್ನೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ನಿನ್ನೆ ಈಶ್ವರ್ ಖಂಡ್ರೆ ಸ್ಥಳ ಪರಿಶೀಲನೆ ನಡೆಸಿದ್ದರು. ಈಶ್ವರ್ ಖಂಡ್ರೆ ಎಚ್‌ಎಂಟಿ ಜಮೀನಿನಲ್ಲಿ ಅತಿಕ್ರಮಣ ಪ್ರವೇಶ ಮಾಡಿದ್ದಾರೆ. ನಾವು ಅದಕ್ಕೆ ಸಂಬಂಧಿಸಿದ ಮೊಕದ್ದಮೆಯನ್ನು



ಸಲ್ಲಿಸಿದ್ದೇವೆ. ನಾವು ನ್ಯಾಯಾಲಯದ ನಿರ್ದೇಶನಕ್ಕಾಗಿ ಕಾಯುತ್ತಿದ್ದೇವೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ನಾವು ಕಾನೂನಾತ್ಮಕವಾಗಿ ಹೋರಾಟ ಮಾಡುತ್ತೇವೆ. ಆದರೆ ಪ್ರಚಾರಕ್ಕಾಗಿ ಈ ವಿಷಯ ಪ್ರಸ್ತಾಪಿಸುವುದಿಲ್ಲ ಎಂದು ತಿಳಿಸಿದರು.

ಬೆಂಗಳೂರಿನ ಪೀಣ್ಯ ಪ್ಲಾಂಟೇಶನ್–1 ಮತ್ತು ಪ್ಲಾಂಟೇಶನ್–2ರಲ್ಲಿ ಒಟ್ಟು 599 ಎಕರೆ ಮೀಸಲು ಅರಣ್ಯವನ್ನು ಗೆಜೆಟ್ ಮಾಡಲಾಗಿದೆ. 1960ರ ದಶಕದಲ್ಲಿ ಡಿ–ನೋಟಿಫಿಕೇಶನ್ ಇಲ್ಲದೆ. ಇದನ್ನು ಅಕ್ರಮವಾಗಿ ಎಚ್‌ಎಂಟಿಗೆ ಹಸ್ತಾಂತರಿಸಲಾಗಿದೆ ಎಂದು ನಿನ್ನೆ ಅರಣ್ಯ, ಪರಿಸರ ಮತ್ತು ಪರಿಸರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಈಶ್ವರ ಖಂಡ್ರೆ ಪತ್ರ ಬರೆದಿದ್ದರು. ಎಚ್‌ಎಂಟಿ ಜಮೀನಿಗೆ ಸಂಬಂಧಿಸಿದಂತೆ ಅರಣ್ಯ ಸಚಿವರು ಅನಗತ್ಯವಾಗಿ ಗೊಂದಲ ಸೃಷ್ಟಿಸುವ ಯತ್ನದ ವಿರುದ್ಧ ಇನ್ನೆರಡು ದಿನದಲ್ಲಿ ಸುದ್ದಿಗೋಷ್ಠಿ ನಡೆಸುತ್ತೇನೆ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಅರಣ್ಯ ಭೂಮಿ ಒತ್ತುವರಿಯಾಗಿದೆ ಎಂದು ಕುಮಾರಸ್ವಾಮಿ ಆರೋಪಿಸಿದ್ದಾರೆ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ 120 ಎಕರೆ ಅರಣ್ಯ ಭೂಮಿಯನ್ನು ಸಾರ್ವಜನಿಕ ಪ್ರತಿನಿಧಿಯೊಬ್ಬರು ಒತ್ತುವರಿ ಮಾಡಿಕೊಂಡಿದ್ದಾರೆ. ಆತನಿಂದ 61 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳುವಂತೆ ನ್ಯಾಯಾಲಯ ನಿರ್ದೇಶನ ನೀಡಿದೆ. ಗಡುವು ನಿಗದಿ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕುಮಾರಸ್ವಾಮಿ ಆರೋಪಿಸಿದರು.

ಹಾಸನಾಂಬೆ ದರ್ಶನಕ್ಕೆ ಹೊರಟಿದ್ದ ದಂಪತಿಯ ಕಾರು ಕೆರೆಗೆ ಪಲ್ಟಿ; ಪತ್ನಿ ಸಾವು



ಹಾಸನಾಂಬೆ ದರ್ಶನಕ್ಕೆ ಹೊರಟಿದ್ದ ದಂಪತಿ ಕಾರು ಚಾಲಕನ ನಿಯಂತ್ರಣ ತಪ್ಪಿ ಕೆರೆಗೆ ಪಲ್ಟಿಯಾಗಿ ಪತ್ನಿ ಸಾವನ್ನಪ್ಪಿರುವುದು.

ಬೇಲೂರು, ಅ.30– ಹಾಸನಾಂಬೆ ದರ್ಶನಕ್ಕೆ ಹೊರಟಿದ್ದ ದಂಪತಿಯ ಕಾರು ಚಾಲಕನ ನಿಯಂತ್ರಣ ತಪ್ಪಿ ಕೆರೆಗೆ ಪಲ್ಟಿಯಾಗಿ ಪತ್ನಿ ಸಾವನ್ನಪ್ಪಿರುವ ಘಟನೆ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಕಲ್ಕೆರೆ ಗ್ರಾಮದಲ್ಲಿ ನಡೆದಿದೆ.

ಮೃತ ಮಹಿಳೆಯನ್ನು ಚಿಕ್ಕಮಗಳೂರು ತಾಲೂಕಿನ ಗವನಹಳ್ಳಿ ಗ್ರಾಮದ ನಿವಾಸಿ ವನಿತಾ (38) ಎಂದು ಗುರುತಿಸಲಾಗಿದೆ. ಪತಿ ಮಂಜು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇಂದು (ಅ.30) ಬೆಳಗಿನ ಜಾವ ನಾಲ್ಕು ಗಂಟೆಗೆ ಚಿಕ್ಕಮಗಳೂರಿನಿಂದ ಹಾಸನದ ಹಾಸನಾಂಬೆ ದೇವಿ ದರ್ಶನಕ್ಕೆ ಹೊರಟಿದ್ದ ಮಂಜು–ವನಿತಾ ದಂಪತಿ ಇದ್ದ ಕಾರು ಬೇಲೂರು ತಾಲೂಕಿನ ಕಲ್ಕೆರೆ ಗ್ರಾಮದ ಬಳಿ ಚಾಲಕನ ನಿಯಂತ್ರಣ ತಪ್ಪಿ ಕೆರೆಗೆ ಪಲ್ಟಿಯಾಗಿದೆ.

ಕೂಡಲೇ ಗ್ರಾಮಸ್ಥರು ಇಬ್ಬರನ್ನು ಬದುಕಿಸಲು ಹರ ಸಾಹಸಪಟ್ಟಿದ್ದಾರೆ. ಬೆಳಗಿನ ಜಾವದ ಕತ್ತಲಲ್ಲೂ ಕಲ್ಕೆರೆ ಗ್ರಾಮಸ್ಥರು ಕೆರೆಗೆ ಇಳಿದು ಕಾರಿಗೆ ಹಗ್ಗ ಕಟ್ಟಿ ಎಳೆದಿದ್ದಾರೆ. ಕಾರಿನ ಚಾಲಕ ಮಂಜು ಪ್ರಾಣಾಪಾಯದಿಂದ ಪಾರಾಗಿದ್ದು, ಅವರ ಪತ್ನಿ ವನಿತಾ ಸಾವನ್ನಪ್ಪಿದ್ದಾರೆ.

ಬೇಲೂರು ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾನನಷ್ಟ ಮೊಕದ್ದಮೆ

ಬೆಂಗಳೂರು: ತಮ್ಮನ್ನು ಬ್ಲ್ಯಾಕ್‌ಮೇಲರ್ ಎಂದು ಕರೆದಿದ್ದಕ್ಕೆ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಾಹಂ, ಸಿಎಂ ಸಿದ್ದರಾಮಯ್ಯ ವಿರುದ್ಧ ವಿಶೇಷ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಗರಣದಲ್ಲಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬೇಕು ಎಂದು ರಾಜ್ಯಪಾಲರಿಗೆ ಮನವಿ ಮಾಡಿದ್ದ ಅರ್ಜಿದಾರರ ಪೈಕಿ ಟಿ.ಜೆ.ಅಬ್ರಾಹಂ ಸಹ ಒಬ್ಬರಾಗಿದ್ದಾರೆ. ನನ್ನ ವಿರುದ್ಧ ಸೇಡು ತೀರಿಸಿಕೊಳ್ಳುವ ಉತ್ಸಾಹದಲ್ಲಿ ಸಿದ್ದರಾಮಯ್ಯ ಕೆಲವು ಬಹಿರಂಗ ಹೇಳಿಕೆಗಳನ್ನು ನೀಡಿದ್ದಾರೆ. ಅವರು ನನ್ನನ್ನು ಬ್ಲ್ಯಾಕ್‌ಮೇಲರ್ ಮತ್ತು ಕೆಟ್ಟ ಪೂರ್ವಾಪರ ಹೊಂದಿರುವ ವ್ಯಕ್ತಿ ಎಂದು ಕರೆದಿದ್ದಾರೆ ಎಂದು ಅಬ್ರಹಾಂ ಆರೋಪಿಸಿದ್ದಾರೆ. ನೀವು (ಸಿದ್ದರಾಮಯ್ಯ) ನಕಲಿ ಮತ್ತು ಅಕ್ರಮ ಹಕ್ಕು ಸೃಷ್ಟಿಸಿ 14 ಸೈಟ್‌ಗಳನ್ನು ತೆಗೆದುಕೊಂಡಿದ್ದೀರಿ ಮತ್ತು ನೀವು ನನ್ನನ್ನು ಬ್ಲ್ಯಾಕ್‌ಮೇಲರ್ ಎಂದು ಕರೆಯುತ್ತೀರಿ. ನಿಮ್ಮ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದೇನೆ. ನೀವು ಹೇಗೆ ತಪ್ಪಿಸಿಕೊಳ್ಳುತ್ತೀರಿ ಎಂದು ನಾವು ನೋಡುತ್ತೇವೆ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಪತ್ನಿಗೆ ಮೈಸೂರಿನ ಮೇಲ್ಮಟ್ಟದ ಪ್ರದೇಶದಲ್ಲಿ ಮುಡಾ ಸ್ವಾಧೀನಪಡಿಸಿಕೊಂಡಿರುವ ಭೂಮಿಗಿಂತ ಹೆಚ್ಚಿನ ಆಸ್ತಿ ಮೌಲ್ಯ ಹೊಂದಿರುವ ಪರಿಹಾರದ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ರೋಟರಿ ಇಂಟರಾಕ್ಟ್ ಕ್ಲಬ್‌ನ ಪದವಿ ಪ್ರದಾನ



ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ವತಿಯಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯಲ್ಲಿ ಹೊಸ ಇಂಟರಾಕ್ಟ್ ಕ್ಲಬ್‌ನ ಪದವಿ ಪ್ರದಾನ ಸಮಾರಂಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಅ.30– ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ವತಿಯಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯಲ್ಲಿ ಹೊಸ ಇಂಟರಾಕ್ಟ್ ಕ್ಲಬ್‌ನ ಪದವಿ ಪ್ರದಾನ ಸಮಾರಂಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಅಧ್ಯಕ್ಷ ರೊ.ಆರ್.ರಾಜೇಶ್ ಮಾತನಾಡಿ, ಮಕ್ಕಳು, ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬಹು ಮುಖ್ಯವಾಗಿದೆ. ಉನ್ನತ ವಿದ್ಯಾಭ್ಯಾಸದತ್ತ ಗಮಹರಿಸಿ, ಮುಂದಿನ ದಿನಗಳಲ್ಲಿ ಸಮಾಜಕ್ಕೆ ಉಪಯೋಗವಾಗುವಂತಹ ಉತ್ತಮ ಕೆಲಸಗಳನ್ನು ಮಾಡಬೇಕೆಂದು ಸಲಹೆ ನೀಡಿದರಲ್ಲದೇ, ಈಗಿನಿಂದಲೇ ಸಹಾಯ ಹಾಗೂ ಸೇವಾ ಮನೋಭಾವನೆ ಬೆಳೆಸಿಕೊಂಡು ಹೆತ್ತವರಿಗೂ ಮತ್ತು ಸಮಾಜಕ್ಕೂ ಕೊಡುಗೆ ನೀಡಬೇಕೆಂದು ಕಿವಿಮಾತು ಹೇಳಿದರು.

ಅನುಸ್ಥಾಪನ ಅಧಿಕಾರಿಯಾಗಿ ರೋಟರಿ ಕ್ಲಬ್ ಮೈಸೂರು ಸೆಂಟ್ರಲ್ ಕ್ಲಬ್‌ನ ಸದಸ್ಯ ರೊ.ಜಯಪ್ರಕಾಶ್ ಮಾತನಾಡಿ, ಶಾಲೆಯ ವಿದ್ಯಾರ್ಥಿಗಳಿಗೆ ಇಂಟರಾಕ್ಟ್ ಕ್ಲಬ್‌ನ ಮಾಹಿತಿ, ಉದ್ದೇಶವನ್ನು ಅಚ್ಚುಕಟ್ಟಾಗಿ ತಿಳಿಸುವ ಮೂಲಕ ಪದವಿ ಪ್ರದಾನ ಮಾಡಿದರು. ಪದವಿ ಸ್ವೀಕರಿಸಿದ ವಿದ್ಯಾರ್ಥಿ ಪ್ರೀತಮ್ ಇಂಟರಾಕ್ಟ್ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಮತ್ತು ಕಾರ್ಯದರ್ಶಿಯಾಗಿ ಧನುಷ್ ಆಯ್ಕೆಯಾದರು. ಇನ್ನುಳಿದ ವಿದ್ಯಾರ್ಥಿಗಳು ಬಾಕಿ ಇರುವ ಎಲ್ಲ ಹುದ್ದೆಗಳನ್ನು ಅಲಂಕರಿಸಿದರು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಆಫ್ ಹೆರಿಟೇಜ್‌ನ ಹಿರಿಯ ಸದಸ್ಯರಾದ ರೊ.ಗಜಾನನ ಶಂಭು ಹೆಗ್ಡೆ, ರೊ.ನಾರಾಯಣ ನಾಯಕ್, ಹಿಂದಿನ ಸಾಲಿನ ಕಾರ್ಯದರ್ಶಿ ರೊ.ಗೋಪಾಲಕೃಷ್ಣ ಮತ್ತು ಕ್ಲಬ್ ಸೇವೆ ನಿರ್ದೇಶಕ ರೊ.ಸುಧೀಂದ್ರ ಮಿಂಚು ಭಾಗಿಯಾಗಿದ್ದರು. ಮತ್ತು ಶಾಲೆಯ ವಿಜ್ಞಾನ ಶಿಕ್ಷಕ ರವಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮತ್ತು ಎಲ್ಲರಿಗೂ ಕ್ಲಬ್‌ನ ಸರ್ವ ಸದಸ್ಯರ ಪರವಾಗಿ ಧನ್ಯವಾದಗಳನ್ನು ತಿಳಿಸುವುದಾಗಿ ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಅಧ್ಯಕ್ಷ ರಾಜೇಶ್.ಆರ್ ತಿಳಿಸಿದರು.

ಮೂಲಸೌಕರ್ಯ ಒದಗಿಸದೇ ರಾಜರಾಜೇಶ್ವರಿನಗರ ನಿರ್ಲಕ್ಷ್ಯ

ನಿವಾಸಿಗಳಿಂದ ಪ್ರತಿಭಟನೆ ಎಚ್ಚರಿಕೆ

ಮೈಸೂರು, ಅ.30(ಎಂಟಿವೈ)– ಮೈಸೂರಿನ ರಾಜರಾಜೇಶ್ವರಿ ನಗರದ ಬಡಾವಣೆಗೆ ಹಾಗೂ ಮೂಲ ಸೌಲಭ್ಯ ಕಲ್ಪಿಸದೇ ನಿರ್ಲಕ್ಷಿಸಲಾಗುತ್ತಿದ್ದು, ಶೀಘ್ರವೇ ಸ್ಥಳೀಯರ ಸಮಸ್ಯೆಗಳಿಗೆ ಪರಿಹಾರ ಒದಗಿಸದಿದ್ದರೆ ಪ್ರತಿಭಟನೆ ನಡೆಸಲಾಗುವುದು ಎಂದು ರಾಜರಾಜೇಶ್ವರಿ ನಗರ ನಾಗರಿಕ ವೇದಿಕೆ ಅಧ್ಯಕ್ಷ ಎನ್.ಕೆ. ಗೋಪಾಲಯ್ಯ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜರಾಜೇಶ್ವರಿನಗರದಲ್ಲಿ ಕಳೆದ 15 ವರ್ಷಗಳಿಂದ ವಾಸಿಸುತ್ತಿರುವ ಜನರಿಗೆ ಮುಡಾ ಅಥವಾ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಮೂಲ ಸೌಲಭ್ಯ ಕಲ್ಪಿಸಲು ವಿಫಲವಾಗಿವೆ. ಬಿಇಎಂಎಲ್ ನೌಕರರ ಗೃಹ ನಿರ್ಮಾಣ ಸಹಕಾರಿ ಸಂಘವು 105 ಎಕರೆ ಪ್ರದೇಶದಲ್ಲಿ 1992ರಲ್ಲಿ ರಾಜರಾಜೇಶ್ವರಿ ನಗರ ಬಡಾವಣೆಯನ್ನು ಅಭಿವೃದ್ಧಿಪಡಿಸಿದೆ. 2015ರವರೆಗೂ ನಿವಾಸಿಗಳಿಗೆ ನಕ್ಷೆ ಅನುಮೋದನೆ, ಸಿ.ಆರ್. ನೀಡುವುದು, ಕಂದಾಯವನ್ನು ಮುಡಾ ನಿಗದಿ ಮಾಡುತ್ತಿತ್ತು. ಆನಂತರ, ಸಂಘದೊಂದಿಗೆ ಜಮೀನು ವ್ಯಾಜ್ಯವಿದೆ ಎಂದು ಈ ಸೌಲಭ್ಯ ನೀಡುವುದನ್ನು ನಿಲ್ಲಿಸಿದೆ. ಮೂಲಸೌಕರ್ಯವೂ ಒದಗಿಸುತ್ತಿಲ್ಲ ಎಂದು ಆರೋಪಿಸಿದರು.

ಮಾಹಿತಿ ಹಕ್ಕು ಕಾಯ್ದೆ ಅಡಿ ಪ್ರಶ್ನಿಸಿದಾಗ ಬಡಾವಣೆಗೆ ಸಂಬಂಧಿಸಿದ ಯಾವುದೇ ವ್ಯಾಜ್ಯವಿಲ್ಲವೆಂದು ತಿಳಿದುಬಂದಿದೆ. ಆದರೂ ಮುಡಾ ಅಧಿಕಾರಿಗಳು ಸುಳ್ಳು ಹೇಳಿ ಬಡಾವಣೆಯ ನಿವಾಸಿಗಳಿಗೆ ಯಾವುದೇ ಸೌಲಭ್ಯ ನೀಡುತ್ತಿಲ್ಲ. ಕೂಡಲೇ ಸರ್ಕಾರ ಈ ಸಮಸ್ಯೆಯನ್ನು ಬಗೆಹರಿಸಲು ಮುಂದಾಗಬೇಕು. ಗೃಹ ನಿರ್ಮಾಣ ಸಂಘವೂ ಸಮಸ್ಯೆ ಬಗೆಹರಿಸಲು ಸಹಕರಿಸಬೇಕು. ಇಲ್ಲದಿದ್ದರೆ ಕಚೇರಿ ಎದುರು ಪ್ರತಿಭಟನೆ ಮಾಡುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವೇದಿಕೆ ಉಪಾಧ್ಯಕ್ಷ ಮೋಹನ ಕೃಷ್ಣ, ಸಹಕಾರ್ಯದರ್ಶಿ ಎ.ವಿ.ಶಶಿಧರ್, ಖಜಾಂಚಿ ಕೆ.ಶ್ರೀನಿವಾಸನ್ ಇದ್ದರು.

ನ.3, ಜೀವನ್ ಪ್ರಮಾಣ ಪತ್ರ ಸಲ್ಲಿಸುವ ಶಿಬಿರ

ಮೈಸೂರು, ಅ. 30– ಮೈಸೂರಿನ ಕೇಂದ್ರ ಸರ್ಕಾರಿ ಪಿಂಚಣಿದಾರರ ಸಂಘವು ಪ್ರತಿ ವರ್ಷ ಕೇಂದ್ರ ಸರ್ಕಾರಿ ಪಿಂಚಣಿದಾರರ ಜೀವನ್ ಪ್ರಮಾಣ ಪತ್ರ ಸಲ್ಲಿಸಬೇಕಾದ ನಿಯಮದ ಪ್ರಯುಕ್ತ ನ.3ರಂದು ಬೆಳಗ್ಗೆ 9.30ರಿಂದ ಸಂಜೆ 4 ಗಂಟೆಯವರೆಗೆ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಶಾಲೆಯಲ್ಲಿ ಉಚಿತ ಜೀವನ್ ಪ್ರಮಾಣ ಪತ್ರ ಸಲ್ಲಿಸುವ ಶಿಬಿರ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಎಲ್ಲಾ ಕೇಂದ್ರ ಸರ್ಕಾರಿ ಪಿಂಚಣಿದಾರರು ಈ ಶಿಬಿರದ ಪ್ರಯೋಜನ ಪಡೆದುಕೊಳ್ಳಬೇಕಾಗಿ ಸಂಘದ ಅಧ್ಯಕ್ಷ ಪಿ.ಎಂ.ಪರಮೇಶ್ವರಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ವಿಶ್ವ ಆಸ್ಟಿಯೊಪೊರೋಸಿಸ್ ದಿನಾಚರಣೆ

ಮೈಸೂರು, ಅ.30(ಎಂಟಿವೈ)– ಯಾವುದೇ ರೋಗ ಲಕ್ಷಣ ಹಾಗೂ ಮುನ್ಸೂಚನೆ ಇಲ್ಲದಿದ್ದರೂ ಆಸ್ಟಿಯೊಪೊರೋಸಿಸ್ ಕಾಯಿಲೆ ಹಠಾತ್ತನೇ ಕಾಣಿಸಿಕೊಳ್ಳಲಿದ್ದು, ಜನ ಸಕಾಲಿಕ ತಪಾಸಣೆ ಹಾಗೂ ವೈದ್ಯಕೀಯ ಸಲಹೆ ಪಡೆದುಕೊಳ್ಳುವಂತೆ ತಜ್ಞ ವೈದ್ಯ ಡಾ.ಪ್ರೇಮನಾಥ್ ಸಲಹೆ ನೀಡಿದ್ದಾರೆ.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ 'ವಿಶ್ವ ಆಸ್ಟಿಯೊಪೊರೋಸಿಸ್ ದಿನಾಚರಣೆ' ಕಾರ್ಯಕ್ರಮವನ್ನು ತಜ್ಞ ವೈದ್ಯ ಡಾ.ಪ್ರೇಮನಾಥ್ ಉದ್ಘಾಟಿಸಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಬುಧವಾರ ನಡೆದ 'ವಿಶ್ವ ಆಸ್ಟಿಯೊಪೊರೋಸಿಸ್ ದಿನಾಚರಣೆ'ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಆಸ್ಟಿಯೊಪೊರೋಸಿಸ್ (ಅಸ್ಥಿ ಶಿಥಿಲತೆ) ಅನ್ನು ಸಾಮಾನ್ಯವಾಗಿ ನಿಶ್ಶಬ್ದ ಕಾಯಿಲೆ ಎಂದು ಕರೆಯಲಾಗುತ್ತದೆ. ಇದು ಸಾಮಾನ್ಯವಾಗಿ ಸೊಂಟ ಅಥವಾ ಬೆನ್ನು ಮೂಳೆಯಲ್ಲಿ ಮುರಿತ ಸಂಭವಿಸುವವರೆಗೂ ಮೇಲ್ನೋಟಕ್ಕೆ ರೋಗ ಲಕ್ಷಣಗಳೇ ಗೋಚರವಾಗುವುದಿಲ್ಲ. ಆದ್ದರಿಂದ ವಯಸ್ಸಾದವರು ಆಗಾಗ್ಗೆ ವೈದ್ಯಕೀಯ ತಪಾಸಣೆಗೆ ಒಳಗಾದರೇ ಈ ಕಾಯಿಲೆಯನ್ನು ಪ್ರಾಥಮಿಕ ಹಂತದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ನೀಡಬಹುದು. ಮೂಳೆ ಮುರಿತವನ್ನು ತಡೆಗಟ್ಟಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಮೂಳೆ ಸಾಂದ್ರತೆಯನ್ನು ಕಾಪಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುವ ಈಸ್ಟ್ರೋಜೆನ್ ಅನ್ನು ಕಡಿಮೆ ಪ್ರಮಾಣದಲ್ಲಿ ಹೊಂದಿರುವ ವೃದ್ಧಾಪ್ಯದ ಹತ್ತಿರದಲ್ಲಿರುವ ವ್ಯಕ್ತಿಗಳಲ್ಲಿ ಹಾಗೂ ಋತುಬಂಧಕ್ಕೊಳಗಾದ ಮಹಿಳೆಯರ ಮೇಲೆ ಆಸ್ಟಿಯೊಪೊರೋಸಿಸ್ ಕಾಯಿಲೆ ಹೆಚ್ಚು ಪರಿಣಾಮ ಬೀರುತ್ತದೆ. ಅಲ್ಲದೇ ಅನುವಂಶೀಯ ಇತಿಹಾಸ, ದೇಹದ ತೂಕ ಕಡಿಮೆ ಇರುವುದು, ಕೆಲವು ಔಷಧಿಗಳನ್ನು ದೀರ್ಘಾವಧಿಯಾಗಿ ಬಳಕೆ ಮಾಡುವುದು, ಸಂಧಿವಾತ, ಥೈರಾಯ್ಡ್‌ನಂತಹ ಕಾಯಿಲೆ ಇರುವವರು ಆಸ್ಟಿಯೊಪೊರೋಸಿಸ್ ಕುರಿತು ಅರಿವು ಪಡೆದುಕೊಳ್ಳಬೇಕು. ಪ್ರಸ್ತುತ ದಿನಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಆಗಿರುವ ತಂತ್ರಜ್ಞಾನಗಳ ಅಳವಡಿಕೆಯಿಂದ ಆಸ್ಟಿಯೊಪೊರೋಸಿಸ್ ಕಾಯಿಲೆಯನ್ನು ಉಪಶಮನ ಮಾಡಬಹುದು. 60 ವರ್ಷದ ದಾಟಿದ ಪುರುಷರು ಹಾಗೂ ಮಹಿಳೆಯರು ಮೂಳೆ ಖನಿಜ ಸಾಂದ್ರತೆ ಪರೀಕ್ಷೆಯನ್ನು ನಿಯಮಿತವಾಗಿ ಮಾಡಿಸಿಕೊಂಡರೆ ಚಿಕಿತ್ಸೆ ಸುಲಭವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಎಸ್.ಪಿ.ಮಧು, ಜೀರಿಯಾಟ್ರಿಕ್ಸ್ ವಿಭಾಗದ ಮುಖ್ಯಸ್ಥೆ ಡಾ.ಪ್ರತಿಭಾ ಪೆರೇರಾ, ಡಾ.ಕ್ಷಮಾ ಮತ್ತಿತರರು ಉಪಸ್ಥಿತರಿದ್ದರು.

ಎಸ್.ಎಂ.ಕೃಷ್ಣಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿ

ದಿನೇಶ್ ಗೂಳಿಗೌಡ, ಸ್ಟಾರ್ ಚಂದ್ರುರಿಂದ ಸಿಎಂ, ಸಚಿವರಿಗೆ ಮನವಿ, ಕಡತ ಮಂಡಿಸಲು ಇಲಾಖೆ ಕಾರ್ಯದರ್ಶಿಗೆ ಸಚಿವ ಶಿವರಾಜ್ ತಂಗಡಗಿ ಸೂಚನೆ


ಎಸ್.ಎಂ.ಕೃಷ್ಣ

ಮಂಡ್ಯ: ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ರಾಜ್ಯ ಸರ್ಕಾರದಿಂದ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಬೇಕು ಎಂದು ಶಾಸಕ ದಿನೇಶ್ ಗೂಳಿಗೌಡ ಹಾಗೂ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಉಪಾಧ್ಯಕ್ಷ ಸ್ಟಾರ್ ಚಂದ್ರು (ವೆಂಕಟರ ಮಣೇಗೌಡ) ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರಿಗೆ ಮನವಿ ಮಾಡಿದ್ದಾರೆ.

ಇದಕ್ಕೆ ಸ್ಪಂದಿಸಿರುವ ಸಚಿವರಾದ ಶಿವರಾಜ್ ತಂಗಡಗಿ, ಕಡತ ಮಂಡಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಮನವಿ ಪತ್ರದಲ್ಲೇನಿದೆ: ನಾಡಿನ ಹಿರಿಯ ರಾಜಕೀಯ ನಾಯಕರು, ನಾಲ್ಕು ಸದನಗಳನ್ನು ಪ್ರತಿನಿಧಿಸಿ ಹಲವು ಸಾಂವಿಧಾನಿಕ ಹುದ್ದೆಗಳನ್ನು ಅಲಂಕರಿಸಿ ಸರ್ವ ಹುದ್ದೆಗಳಿಗೂ ಭೂಷಣರಾಗಿ ದೇಶಕ್ಕೆ ಅದರಲ್ಲೂ ಕನ್ನಡ ನಾಡಿಗೆ ಹೆಮ್ಮೆಯ ಕಳಶಪ್ರಾಯರಾಗಿರುವ ಎಸ್.ಎಂ.ಕೃಷ್ಣ ಅವರಿಗೆ ಕರ್ನಾಟಕ ರಾಜ್ಯ ನಾಮಾಂಕಿತವಾಗಿ ಐವತ್ತು ವಸಂತಗಳನ್ನು ಪೂರೈಸಿ ಸುವರ್ಣ ಸಂಭ್ರಮದಲ್ಲಿರುವ ಶುಭ ಸಂದರ್ಭದಲ್ಲಿ ರಾಜ್ಯದ ಅತ್ಯುನ್ನತ ಗೌರವವಾದ ಕರ್ನಾಟಕ ರತ್ನ ಪ್ರಶಸ್ತಿ ನೀಡುವ ಮೂಲಕ ರಾಜ್ಯದ ಜನರ ಪರವಾಗಿ ಗೌರವಿಸುವಂತೆ ಕೋರುತ್ತೇವೆ ಎಂದು ಮನವಿ ಮಾಡಿದ್ದಾರೆ.

ಮಂಡ್ಯ ಜಿಲ್ಲೆಯ ಪ್ರತಿನಿಧಿಯಾಗಿ ರಾಜ್ಯ ಹಾಗೂ ರಾಷ್ಟ್ರದ ಸರ್ಕಾರಗಳಲ್ಲಿ ಮಂತ್ರಿಯಾಗಿ, ನಾಡಿನ ಮುಖ್ಯಮಂತ್ರಿಯಾಗಿ, ರಾಜ್ಯಪಾಲರಾಗಿ ಹಲವು ಹುದ್ದೆಗಳನ್ನು ಅಲಂಕರಿಸಿದ ಎಸ್.ಎಂ.ಕೃಷ್ಣ ಅವರು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿ ಆ ನಂತರ ಅಮೇರಿಕಾದಲ್ಲಿ ವಿದ್ಯಾಭ್ಯಾಸ ನಡೆಸಿ ಕಾನೂನು ಪದವಿ ಪಡೆದು ಅಪಾರ ವಿದ್ವತ್ ಪಡೆದು ತಮ್ಮ ಅಪಾರ ಜ್ಞಾನ ಭಂಡಾರದ ಮೂಲಕ ಭವಿಷ್ಯದ ಕನ್ನಡ ನಾಡಿನ ಅಭಿವೃದ್ಧಿಗೆ ಭದ್ರ ಬುನಾದಿ ಕಲ್ಪಿಸಿ ಬೆಂಗಳೂರನ್ನು ಐಟಿ ಬಿಟಿ ರಾಜಧಾನಿಯಾಗಿಸಿ ನಾಡಿನ ಆರ್ಥಿಕ ಬೆಳವಣಿಗೆಗೆ ದಾರಿದೀಪವಾದವರು. ಎಸ್.ಎಂ.ಕೃಷ್ಣ ಅವರು ಆರು ದಶಕಗಳ ಸುದೀರ್ಘ ಅವಧಿಗೆ ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿದ್ದವರು. ತಾವು ಅಲಂಕರಿಸಿದ ಹುದ್ದೆಗಳಿಗೆ ಅವರು ನ್ಯಾಯ ಒದಗಿಸಿಕೊಟ್ಟ ಒಬ್ಬ ಶ್ರೇಷ್ಠ ರಾಜಕಾರಣಿ.



ದಿನೇಶ್ ಗೂಳಿಗೌಡ ಸ್ಟಾರ್ ಚಂದ್ರು

ಅವರ ಸಾಧನೆಯನ್ನು ಪರಿಗಣಿಸಿ ಭಾರತ ಸರ್ಕಾರವು ಈಚೆಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತ್ತು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಎಸ್.ಎಂ.ಕೃಷ್ಣ ಮೈಸೂರು ವಿಶ್ವವಿದ್ಯಾನಿಲಯದ ಕೀರ್ತಿ ಕಳಶರಾಗಿದ್ದಾರೆ. ತಾವು ರಾಜ್ಯದ ಕನ್ನಡ ನಾಡಿನ ಸುವರ್ಣ ಸಂಭ್ರಮದ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಹ ನಿಗದಿಯಾಗಿದೆ ಈ ಹಿನ್ನೆಲೆಯಲ್ಲಿ ಎಸ್.ಎಂ.ಕೃಷ್ಣ ನಾಡಿಗೆ ಸಲ್ಲಿಸಿದ ಕೀರ್ತಿಯನ್ನು ಪರಿಗಣಿಸಿ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡುವ ಮೂಲಕ ಅವರಿಗೆ ಕರ್ನಾಟಕಕ್ಕೆ ಅವರು ಸಲ್ಲಿಸಿದ ಸೇವೆಯನ್ನು ಸ್ಮರಿಸಬೇಕಿದೆ ತಮ್ಮ ಅವಧಿಯಲ್ಲಿ ಎಸ್.ಎಂ. ಕೃಷ್ಣ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡಿದರೆ ಆ ಪ್ರಶಸ್ತಿಯ ಮೌಲ್ಯವೂ ಮತ್ತಷ್ಟು ಹೆಚ್ಚಾಗಲಿದ್ದು ದಯಮಾಡಿ ನನ್ನ ಮನವಿಯನ್ನು ಪರಿಗಣಿಸುವಂತೆ ಕೋರುತ್ತೇವೆ ಎಂದು ಮನವಿ ಮಾಡಿದ್ದಾರೆ.

ಮಂಡ್ಯದ ಮೂವರು ಸಾಧಕರಿಗೆ ಸುವರ್ಣ ಮಹೋತ್ಸವ ಪ್ರಶಸ್ತಿ


ಮೀರಾಶಿವಲಿಂಗಯ್ಯ


ಡಿ.ಎಂ.ಲಕ್ಷ್ಮಯ್ಯ


ರಾಜು ಮಳವಳ್ಳಿ

ಮಂಡ್ಯ: ಕರ್ನಾಟಕ ಸಂಭ್ರಮ–50 ಅಭಿಯಾನದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ 50 ಜನ ಮಹಿಳಾ ಸಾಧಕರು ಮತ್ತು 50 ಜನ ಪುರುಷ ಸಾಧಕರಿಗೆ 2024ನೇ ಸಾಲಿನಲ್ಲಿ ಸುವರ್ಣ ಮಹೋತ್ಸವ ಪ್ರಶಸ್ತಿ ನೀಡಿ ಸರ್ಕಾರ ಗೌರವಿಸಲಾಗುತ್ತಿದ್ದು, ಅದರಂತೆ ಮಂಡ್ಯದ ಮೂವರು ಸಾಧಕರಿಗೆ ಸುವರ್ಣ ಮಹೋತ್ಸವ ಪ್ರಶಸ್ತಿ ಒಲಿದು ಬಂದಿದೆ.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಜಿಲ್ಲಾ ಸಂಚಾಲಕಿ ಮೀರಾ ಶಿವಲಿಂಗಯ್ಯ, ನಾಟಕಕಾರ, ರಂಗಭೂಮಿ ಕಲಾವಿದರಾದ ಡಿ.ಎಂ.ಲಕ್ಷ್ಮಯ್ಯ ಹಾಗೂ ಪತ್ರಕರ್ತರ, ಅಂಕಣಕಾರ ರಾಜು ಮಳವಳ್ಳಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಶ್ರೀಮತಿ ಮೀರಾಶಿವಲಿಂಗಯ್ಯ ಅವರು ಎಸ್.ಬಿ.ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿಯಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲೂ ತೊಡಗಿಕೊಂಡಿದ್ದಾರೆ. ಸಾಹಿತ್ಯ ಪರಿಷತ್ತಿನ ಮಹಿಳಾ ಅಧ್ಯಕ್ಷೆಯಾಗಿದ್ದರು. ಅಲ್ಲದೆ, ಪ್ರಸ್ತುತ ನಡೆಯುತ್ತಿರುವ ಸಾಹಿತ್ಯ ಸಮ್ಮೇಳನದ ಸಂಚಾಲಕರಾಗಿದ್ದಾರೆ.

ಮಂಡ್ಯದ ಗಾಂಧಿನಗರದ 6ನೇ ಕ್ರಾಸ್ ನಿವಾಸಿಯಾಗಿರುವ ಡಿ.ಎಂ.ಲಕ್ಷ್ಮಯ್ಯ ಅವರು ನಾಟಕಕಾರರಾಗಿ ಗುರುತಿಸಿಕೊಂಡಿದ್ದಾರೆ. ನಾಟಕ, ರಂಗಭೂಮಿಯಲ್ಲಿ ಗುರುತಿಸಿಕೊಂಡಿರುವ ಅವರು, ಅನೇಕ ನಾಟಕ ಪ್ರದರ್ಶನ ನೀಡಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿಗಳು ಒಲಿದು ಬಂದಿವೆ.

ಕನ್ನಡ ಪತ್ರಿಕೋದ್ಯಮದ ಪ್ರಸಕ್ತ ಕಾಲಘಟ್ಟದ ಚಿರಪರಿಚಿತ ಹೆಸರಲ್ಲಿ ರಾಜು ಮಳವಳ್ಳಿ ಸಹ ಒಬ್ಬರು. ಎರಡೂವರೆ ದಶಕದಿಂದಲೂ ಪತ್ರಿಕಾವೃತ್ತಿಯಲ್ಲಿ ತೊಡಗಿರುವ ರಾಜು ಮಳವಳ್ಳಿ ಸಕ್ಕರೆ ನಾಡಿನ ಪ್ರತಿಭೆ. ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ನೆಲಮಾಕನಹಳ್ಳಿ ಹುಟ್ಟೂರು. ತಂದೆ ಡಿ.ಎಸ್. ಸಿದ್ದಯ್ಯ, ತಾಯಿ ಲಿಂಗಮ್ಮ. ಬದುಕಿಗೆ ಬರಹವೇ ಆಸರೆ, ಉಪಸಂಪಾದಕ, ವರದಿಗಾರ, ಪುರವಣಿ ಸಂಪಾದಕ, ಅಂಕಣಕಾರ, ಮುಖ್ಯ ಉಪ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ.

ಸಾಹಿತ್ಯ–ಸಾಂಸ್ಕೃತಿಕ ಪರಿಚಾರಿಕೆ, ವಸ್ತುನಿಷ್ಠ ಬರವಣಿಗೆ, ನಿಷ್ಠುರ ನಡವಳಿಕೆ, ರಂಗಭೂಮಿ ಸೇರಿದಂತೆ ಸಾಂಸ್ಕೃತಿಕ ಲೋಕದ ಚಿಂತನೆಯಿಂದ ಗಮನಸೆಳೆದಿರುವ ರಾಜು ಮಳವಳ್ಳಿ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಸದ್ಗುರು ಪ್ರಶಸ್ತಿ ಮುಂತಾದ ಹತ್ತಾರು ಗೌರವ, ನೂರಾರು ಸನ್ಮಾನಗಳು ಸಂದಿವೆ.

ಮಂಡ್ಯದ ನಾದಸ್ವರ ಕಲಾವಿದ ವಿದ್ವಾನ್ ರಾಜಗೋಪಾಲ್‌ಗೆ ರಾಜ್ಯೋತ್ಸವ ಪ್ರಶಸ್ತಿ



ಶ್ರೀರಂಗಪಟ್ಟಣ: ಪಟ್ಟಣದ ಪ್ರಸಿದ್ಧ ನಾದಸ್ವರ ವಿದ್ವಾನ್ ಪಿ. ರಾಜಗೋಪಾಲ್ ಅವರನ್ನು ಕರ್ನಾಟಕ ಸರ್ಕಾರ ಸಂಗೀತ ಕ್ಷೇತ್ರದ ಸಾಧನೆಗಾಗಿ 2024ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಪಟ್ಟಣದ ಚಾಮುಂಡೇಶ್ವರಿ ಬೀದಿಯ ನಿವಾಸಿ, 76 ವರ್ಷದ ಪಿ.ರಾಜಗೋಪಾಲ್ ಕರ್ನಾಟಕ ಶಾಸ್ತ್ರೀಯ ಸಂಗೀತ (ನಾದಸ್ವರ) ಕ್ಷೇತ್ರದ ಸಾಧನೆಗಾಗಿ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ತಂದೆ ಪಲ್ಲವಿ ಬಿ. ಪಾಪಣ್ಣ ಅವರಿಂದ ಬಾಲಕನಾಗಿದ್ದಾಗಲೇ ನಾದಸ್ವರ ಅಭ್ಯಾಸ ಆರಂಭಿಸಿದ ರಾಜಗೋಪಾಲ್ ನಂತರ ವಿದ್ವಾನ್ ಬಿ. ದೇವೇಂದ್ರಪ್ಪ ವಿದ್ವಾನ್ ಎ.ವಿ. ನಾರಾಯಣಪ್ಪ ಮತ್ತು ವಿದ್ವಾನ್ ಧರುಮೈ ಎ.ಗೋವಿಂದರಾಜನ್ ಅವರಲ್ಲಿ ಹೆಚ್ಚಿನ ಸಾಧನೆ ಮಾಡಿದ್ದಾರೆ. ಮೈಸೂರು ಆಕಾಶವಾಣಿಯ 'ಎ' ದರ್ಜೆ ನಾದಸ್ವರ ಕಲಾವಿದರಾಗಿರುವ ಪಿ. ರಾಜಗೋಪಾಲ್ ದೂರದರ್ಶನದ ಚಂದನ ವಾಹಿನಿ ಮತ್ತು ಹೊರರಾಜ್ಯಗಳಲ್ಲೂ ಕಾರ್ಯಕ್ರಮ ನೀಡಿದ್ದಾರೆ.

ಪ್ರಶಸ್ತಿಗಳು: ಪಿ.ರಾಜಗೋಪಾಲ್ ಅವರ ಸಂಗೀತ ಕ್ಷೇತ್ರದ ಸಾಧನೆಗೆ 'ಕರ್ನಾಟಕ ಸವಿತಾ ರತ್ನ', 'ಕರ್ನಾಟಕ ಇಸೈಜ್ಞಾನ ಕಲೈಮಾಮಣಿ', 'ಗಾನಕಲಾ ಕಸ್ತೂರಿ', 'ನಾಗಸ್ವರ ಶಿಖಾಮಣಿ', 'ಲಲಿತಕಲಾ ಸುಮ', 'ಗಾನ ಚೇತನ', 'ಶೃತಿ ಜ್ಞಾನ ಪ್ರವೀಣ', 'ತ್ಯಾಗರಾಜ ಶ್ರೀ'ಯಂತಹ ಪ್ರಶಸ್ತಿಗಳು ಲಭಿಸಿವೆ.

'ಕರ್ನಾಟಕ ಸರ್ಕಾರ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಗೆ ನನ್ನನ್ನು ಆಯ್ಕೆ ಮಾಡಿರುವುದು ಸಂತಸ ಉಂಟು ಮಾಡಿದೆ. ಇದು ಸಮಸ್ತ ನಾದಸ್ವರ ವಿದ್ವಾಂಶರು ಮತ್ತು ಕಲಾವಿದರಿಗೆ ಸಂದ ಪ್ರಶಸ್ತಿ' ಎಂದು ಪಿ. ರಾಜಗೋಪಾಲ್ ಹೇಳಿದ್ದಾರೆ.

ಗ್ರಾಮ ಪಂಚಾಯಿತಿ ಉಪ ಚುನಾವಣೆ ವೇಳಾಪಟ್ಟಿ ಪ್ರಕಟ

ಮಂಡ್ಯ,ಅ.30– ಮಂಡ್ಯ ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳನ್ನು ಭರ್ತಿಮಾಡಲು ಉಪ ಚುನಾವಣೆ ನಡೆಸಲು ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದ್ದಾರೆ.

ನ.6ರಂದು ಚುನಾವಣಾ ಅಧಿಸೂಚನೆ ಹೊರಡಿಸಲಾಗುವುದು. ನಾಮಪತ್ರ ಸಲ್ಲಿಸಲು ನ.12 ಕೊನೆಯ ದಿನಾಂಕವಾಗಿದೆ. ನ.13 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನ.15ರಂದು ಉಮೇದುವಾರಿಕೆ ಹಿಂಪಡೆಯಲು ಕೊನೆಯ ದಿನಾಂಕವಾಗಿದೆ.

ಮತದಾನದ ಅವಶ್ಯವಿದ್ದರೆ ನ.23 ರಂದು ಬೆಳಿಗ್ಗೆ 7 ಗಂಟೆಯಿಂದ ಸಂಜೆ 5 ಗಂಟೆವರೆಗೆ ಮತದಾನ ನಡೆಸಲಾಗುವುದು. ಮತ ಎಣಿಕೆ ನ.26 ರಂದು ಬೆಳಿಗ್ಗೆ 8 ಗಂಟೆಯಿಂದ ಆಯಾ ತಾಲೂಕು ಕೇಂದ್ರಗಳಲ್ಲಿ ನಡೆಯಲಿದೆ.

ಗ್ರಾಮ ಪಂಚಾಯಿತಿ ಹಾಗೂ ಕ್ಷೇತ್ರದ ಸಂಖ್ಯೆಯ ವಿವರ ಇಂತಿದೆಸ

ಮಂಡ್ಯ ತಾಲೂಕಿನ 3–ಕೆರಗೋಡು–3, 5–ಕೀಲಾರ–5, 1–ಹುಲಿವಾನ–1, 1–ಯಲಿಯೂರು–1, ಮದ್ದೂರು ತಾಲೂಕಿನ 5–ಅಡಗನಹಳ್ಳಿ–1, 5–ಅಡಗನಹಳ್ಳಿ–1, 6–ಅಡಗನಹಳ್ಳಿ–2, 1–ವಳಗೆರೆಹಳ್ಳಿ–1, 3–ವಳಗೆರೆಹಳ್ಳಿ–3, 5–ತೈಲೂರು–1, 5–ತೈಲೂರು–1, 2–ಗೊರವನಹಳ್ಳಿ–2, 3–ಶಿಂಘಟಗೆರೆ, 2–ಕೆ.ಶೆಟ್ಟಿಹಳ್ಳಿ–2, ಮಳವಳ್ಳಿ ತಾಲೂಕಿನಲ್ಲಿ 5–ಅಂಕನಹಳ್ಳಿ, 3–ಹೊಸಹಳ್ಳಿ–3, 5–ರಾಮನಾಥ ಮೋಳೆ, 4–ಬೆಳಕವಾಡಿ–4 ಸ್ಥಾನಗಳಲ್ಲಿ ಚುನಾವಣೆ ನಡೆಯುತ್ತದೆ.

ಪಾಂಡವಪುರ ತಾಲೂಕಿನಲ್ಲಿ 3–ಬೆಳ್ಳಾಳೆ, 2–ವಳಗೆರೆದೇವರಹಳ್ಳಿ, 3–ಹೊಸಹಳ್ಳಿ, 5–ಕುರಹಟ್ಟಿ, 3–ಬಸವನಗುಡಿಕೊಪ್ಪಲು, 6–ಹೊಸಸಾಯಪ್ಪನಹಳ್ಳಿ, ಶ್ರೀರಂಗಪಟ್ಟಣ ತಾಲೂಕಿನಲ್ಲಿ 4–ಬೆಳಗೊಳ–4, 2–ಗಾಮನಹಳ್ಳಿ, 4–ನೀಲನಕೊಪ್ಪಲು, 6–ಮರಳಗಾಲ, ನಾಗಮಂಗಲ ತಾಲೂಕಿನಲ್ಲಿ 5–ಹೊನ್ನೇನಹಳ್ಳಿ, 4–ಶಿಖರನಹಳ್ಳಿ, 8–ಅಲ್ಪಹಳ್ಳಿ, ಕೆಆರ್.ಪೇಟೆ ತಾಲೂಕಿನ 7–ಚಿಕ್ಕೋನಹಳ್ಳಿ, 05–ಕಾಮನಹಳ್ಳಿ, 10–ಪೂವನಹಳ್ಳಿ, 2–ಪುರ ಜಿಲ್ಲೆಯಲ್ಲಿ ಒಟ್ಟು 35 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಚುನಾವಣೆ ನಡೆಸಲು 30 ಚುನಾವಣಾಧಿಕಾರಿಗಳು ಹಾಗೂ 30 ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಚುನಾವಣಾ ನೀತಿ ಸಂಹಿತೆಯು ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನ6 ರಿಂದ 26 ವರೆಗೆ ಜಾರಿಯಲ್ಲಿರುತ್ತದೆ. ಗ್ರಾಮ ಪಂಚಾಯಿತಿಯ ಎಲ್ಲಾ ಸ್ಥಾನಗಳಿಗೆ ಚುನಾವಣೆ ನಡೆಯದ ಸಂದರ್ಭದಲ್ಲಿ ಅಥವಾ ಅವಿರೋಧ ಆಯ್ಕೆಯಾಗಿ ಚುನಾವಣಾಧಿಕಾರಿಗಳು ಫಲಿತಾಂಶ ಘೋಷಿಸಿದಲ್ಲಿ ನೀತಿ ಸಂಹಿತೆ ಜಾರಿಯಲ್ಲಿರುವುದು ನಿಂತುಹೋಗುತ್ತದೆ.

ಅರ್ಥಶಾಸ್ತ್ರ ವಿಭಾಗದ ನಿವೃತ್ತ ಮುಖ್ಯಸ್ಥ ಎಂ.ಪುಟ್ಟಸ್ವಾಮಿಗೌಡರಿಗೆ ಬೀಳ್ಕೊಡುಗೆ



ಇತ್ತೀಚೆಗೆ ನಿವೃತ್ತರಾದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಎಂ.ಪುಟ್ಟಸ್ವಾಮಿ ಗೌಡರನ್ನು ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಅಭಿನಂದಿಸಿ ಬೀಳ್ಕೊಡಲಾಯಿತು. ಈ ವೇಳೆ ಕಾಲೇಜಿನ ಪ್ರಿನ್ಸಿಪಾಲ್, ಸಿಬ್ಬಂದಿ ಉಪಸ್ಥಿತರಿದ್ದರು

ಲಾಟರಿ ಮೂಲಕ ಒಲಿದ ಗ್ರಾಪಂ ಅಧ್ಯಕ್ಷ ಸ್ಥಾನ



ಕಿಕ್ಕೇರಿ: ಹೋಬಳಿಯ ಲಕ್ಷ್ಮೀಪುರ ಗ್ರಾಪಂ ಅಧ್ಯಕ್ಷರಾಗಿ ನೇತ್ರಾವತಿ ಚಂದ್ರೇಗೌಡ ಲಾಟರಿ ಮೂಲಕ ಆಯ್ಕೆಯಾಗಿದ್ದಾರೆ. ಈ ಹಿಂದೆ ಅಧ್ಯಕ್ಷರಾಗಿದ್ದ ಕನಕಾ ರಾಜೇಶ್ ಅಧ್ಯಕ್ಷ ಸ್ಥಾನದ ಒಡಂಬಡಿಕೆ ಸೂತ್ರದಂತೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 16 ಸದಸ್ಯರಿರುವ ಗ್ರಾಪಂ.ನಲ್ಲಿ ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ತುಳಸಿ ಗ್ರಾಮದ ನೇತ್ರಾವತಿ ಚಂದ್ರೇಗೌಡ ಹಾಗೂ ಲಕ್ಷ್ಮೀಪುರ ಗ್ರಾಮದ ಅನಿತಾ ಬಬ್ರುವಾಹನ ಸ್ಪರ್ಧಿಸಿದ್ದರು. ಇಬ್ಬರು ಸ್ಪರ್ಧಿಗಳು ತಲಾ 8ಮತಗಳು ಪಡೆದು ಸಮಬಲ ಸಾಧಿಸಿದರು. ಅಂತಿಮವಾಗಿ ಅಧ್ಯಕ್ಷರ ಆಯ್ಕೆಯನ್ನು ಲಾಟರಿ ಮೂಲಕ ಮಾಡಲಾಯಿತು. ಲಾಟರಿಯಲ್ಲಿ ತುಳಸಿ ಗ್ರಾಮದ ನೇತ್ರಾವತಿ ಚಂದ್ರೇಗೌಡ ಆಯ್ಕೆಯಾದರು.

69 ಮಂದಿಗೆ ಮೈಸೂರು ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ

ಮೈಸೂರು, ಅ.30(ಎಸ್‌ಪಿಎನ್)– ಸಾಹಿತ್ಯ, ವೈದ್ಯಕೀಯ, ಸಮಾಜ ಸೇವೆ, ಕ್ರೀಡೆ ಹಾಗೂ ಮಾಧ್ಯಮ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ 69 ಸಾಧಕರು 2024ರ ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರಕ್ಕೆ ಆಯ್ಕೆಯಾಗಿದ್ದು, ಜಿಲ್ಲಾಡಳಿತ ಈ ಪಟ್ಟಿಯನ್ನು ಬುಧವಾರ ಬಿಡುಗಡೆಗೊಳಿಸಿದೆ.

ಕನ್ನಡ ಪರ ಹೋರಾಟ ಕ್ಷೇತ್ರದಿಂದ ಕೆ.ತೇಜೋವತಿ, ಕಾಳಪ್ಪ, ಸಿ.ಜೆ.ಲೋಕೇಶ್, ಎನ್.ಜಿ.ಗಿರೀಶ್, ಡೈರಿ ವೆಂಕಟೇಶ್, ಸಮಾಜ ಸೇವಾ ವಿಭಾಗದಿಂದ ಎನ್.ಭಾಸ್ಕರ್, ಹರೀಶ್, ಕೆ.ಜಯಪ್ರಕಾಶ್ ರಾವ್, ಎಸ್.ವಿ. ರಾಘವೇಂದ್ರ, ಡಾ.ಟಿ.ತ್ಯಾಗರಾಜು, ಎಸ್. ರಂಗನಾಥ್, ಮಾಲಿನಿ ಆರ್.ಪಾಲಾಕ್ಷ, ಟಿ.ಸಿ.ರಾಜೇಶ್‌ಗೌಡ, ಎಂ.ಎಸ್.ಸುಷ್ಮಾ, ಎಂ.ಎಂ.ನಿಖಿಲೇಶ್, ದೇವಗಳ್ಳಿ ಸೋಮಶೇಖರ್, ಟಿ.ಸುರೇಶ್, ಎಚ್.ಆರ್.ನಾಗೇಂದ್ರ ರಾವ್, ಯೋಗ ಮತ್ತು ಕ್ರೀಡಾ ಕ್ಷೇತ್ರದಿಂದ ಡಾ.ಎಂ.ಎಲ್.ರಾಜೇಂದ್ರ ಪ್ರಸಾದ್, ಆಕಾಶ್ ಆರಾಧ್ಯ, ಡಾ.ಬಿ.ಪಿ.ಮೂರ್ತಿ, ಎಂ.ಸಿದ್ದರಾಜು, ಬಿ.ಆರ್.ಪರಂಜ್ಯೋತಿ, ಫಲ್ಕಿಯಾ ಖಾನ್, ಆರ್.ಗೋವಿಂದ ರಾಜು ಅವರನ್ನು ಆಯ್ಕೆ ಮಾಡಲಾಗಿದೆ.

ಶಿಕ್ಷಣ ಕ್ಷೇತ್ರದಿಂದ ಡಾ.ಪಿ.ಎನ್.ಹೇಮಚಂದ್ರ, ಎನ್.ಸುರೇಶ್. ಜಿ.ರವಿಶಂಕರ್, ಡಾ.ವಿ.ಜಿ.ಸಿದ್ದರಾಜು, ಜಾನಪದ ಕ್ಷೇತ್ರದಿಂದ ಚಿಕ್ಕತಾಯಮ್ಮ, ಎಂ.ಮಹಾಲಿಂಗ, ಎನ್.ಮಲ್ಲೇಶಯ್ಯ, ತಿರುಮಲೇಗೌಡ, ಮಾಧ್ಯಮ ಕ್ಷೇತ್ರದಿಂದ ಕೆ.ಶಶಿಕುಮಾರ್, ಜೆ.ನವೀನ್‌ಕುಮಾರ್, ಎಂ.ಸುಬ್ರಹ್ಮಣ್ಯ, ಎಂ.ಟಿ. ಮಹದೇವ, ಹನಗೋಡು ನಟರಾಜು, ಸಿ.ಕೆ.ಮಹೇಂದ್ರ, ಗವಿಮಠ ರವಿ ಅವರಿಗೆ, ರಂಗಭೂಮಿ ಕ್ಷೇತ್ರದಿಂದ ಕುಮಾರ ಅರಸೇಗೌಡ, ಪ್ರಸಾದ್ ಕುಂದೂರ್, ತುಷಾರ್ ಎನ್.ಭಾರದ್ವಾಜ್ ಅವರು ಆಯ್ಕೆಯಾಗಿದ್ದಾರೆ.

ಸಾಹಿತ್ಯ ಕ್ಷೇತ್ರದಿಂದ ಕೆ.ಕೆಂಪಣ್ಣ, ಡಾ. ಎಸ್.ಪುಟ್ಟಪ್ಪ ಮುಡಿಗುಂಡ, ಸಿದ್ದಸ್ವಾಮಿ, ಮ.ನ.ಲತಾಮೋಹನ್, ಡಾ.ಪುಷ್ಪಾ ಅಯ್ಯಂಗಾರ್, ಸಂಗೀತ ಕ್ಷೇತ್ರದಿಂದ ಎಚ್.ಎಂ.ಮಹದೇವ, ಎಂ.ಎಸ್.ಜಾನಕಿರಾವ್, ಆರ್.ಕೆ.ಪದ್ಮನಾಭ, ಪಿ.ಜವರನಾಯಕ, ವೈದ್ಯಕೀಯ ಕ್ಷೇತ್ರದಿಂದ ಡಾ. ರಘುನಾಥ ಆಲದಕಟ್ಟೆ, ಡಾ.ಎಸ್.ರಂಗನಾಥಯ್ಯ, ಡಾ.ಶೋಭಾ, ಡಾ.ಉಷಾ ಹೆಗಡೆ, ಇತರೆ ಕ್ಷೇತ್ರದಿಂದ ಗಜಾನನ ಟಿ.ಭಟ್, ಎಚ್.ಎಸ್. ನಂಜುಂಡಸ್ವಾಮಿ, ನಾಗರಾಜು ಎಂ.ತಗಡೂರು, ಪಿ.ಎ.ರಾಧಾ, ಎಚ್.ಎನ್.ಶ್ರೀಕಾಂತ ಕಶ್ಯಪ, ಡಾ.ಚಕ್ರಪಾಣಿ, ಪ್ರಶಾಂತ ಆರ್ಯ, ಆಮೀನಾ ಬೇಗಂ ಎಂ.ಕಾಲೇಖಾನ್, ಪಾರ್ವತಿ ರಾಮಕೃಷ್ಣಯ್ಯ ಸೇರಿ 69 ಮಂದಿಗೆ ನ.1ರಂದು ಬೆಳಗ್ಗೆ 9 ಗಂಟೆಗೆ ಓವಲ್ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಾಧಕರಿಗೆ ರಾಜ್ಯೋತ್ಸವ ಪುರಸ್ಕಾರ ನೀಡಿ ಗೌರವಿಸಲಿದ್ದಾರೆ.

ಕರ್ನಾಟಕ ಸಂಭ್ರಮ–50 ಅಭಿಯಾನದ

ಅಂಗವಾಗಿ 100 ಮಂದಿಗೆ ಸುವರ್ಣ ರಾಜ್ಯೋತ್ಸವ ಪ್ರಶಸ್ತಿ ಪ್ರಕಟ

ಇವರಲ್ಲಿ 50 ಪುರುಷರು; 50 ಮಂದಿ ಮಹಿಳೆಯರಿದ್ದಾರೆ

ಬೆಂಗಳೂರು, ಅ.30– ಕರ್ನಾಟಕ ಸಂಭ್ರಮ–50ರ ಅಭಿಯಾನದ ಅಂಗವಾಗಿ 50 ಪುರುಷರು ಹಾಗೂ 50 ಮಹಿಳಾ ಸಾಧಕರು ಸೇರಿದಂತೆ 100 ಮಂದಿಗೆ ಕರ್ನಾಟಕ ಸರ್ಕಾರದಿಂದ ಸುವರ್ಣ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಗೌರವಿಸಲಾಗುತ್ತದೆ. ನವೆಂಬರ್ 1ರಂದು ಸಂಜೆ ಕಲಾಮಂದಿರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಣ್ಯರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಮೈಸೂರಿನ ಕೆಂಚಯ್ಯ (ಜನಪದ), ಫಜ್ಲು ರೆಹಮಾನ್ ಖಾನ್ (ಚಿತ್ರಕಲೆ), ಶ್ರೀಮತಿ ಮಾಲತಿಶ್ರೀ (ರಂಗಭೂಮಿ), ಡಾ. ರತಿರಾವ್ (ವಿಜ್ಞಾನ–ತಂತ್ರಜ್ಞಾನ), ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ (ಸಮಾಜಸೇವೆ), ಮಂಡ್ಯದ ಡಾ.ಮೀರಾ ಶಿವಲಿಂಗಯ್ಯ (ಸಂಕೀರ್ಣ), ಲಕ್ಷ್ಮಯ್ಯ (ರಂಗಭೂಮಿ), ರಾಜು ಮಳವಳ್ಳಿ (ರಂಗಭೂಮಿ), ಚಾಮರಾಜನಗರದ ಎಂ.ಪಿ. ರಾಜಣ್ಣ (ರಂಗಭೂಮಿ), ಶ್ರೀಮತಿ ಪ್ರೇಮಲತಾ ಕೃಷ್ಣಸ್ವಾಮಿ (ಸಮಾಜಸೇವೆ), ಕೊಡಗಿನ ಜಿಮ್ಮಿ ಅಣ್ಣಯ್ಯ (ಕ್ರೀಡೆ), ಶ್ರೀಮತಿ ನಂದಿನಿ ಬಸಪ್ಪ (ಕ್ರೀಡೆ), ಹಾಸನದ ಮದನಗೌಡ (ಮಾಧ್ಯಮ) ಅವರು ಸೇರಿದಂತೆ ಒಟ್ಟು 100 ಮಂದಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಉಳಿದಂತೆ;

ಜಾನಪದ: ಸಿ.ವಿ. ವೀರಣ್ಣ, ಪ್ರೊ. ಹಿ.ಚಿ. ಬೋರಲಿಂಗಯ್ಯ, ತಂಬೂರಿ ಉಮಾನಾಯಕ, ಗೊಂದಳಿ ರಾಮಪ್ಪ, ಸುರೇಶ್ ಕಾತಾರಪ್ಪ ಲಮಾಣಿ, ಶ್ರೀಮತಿ ಜಯಲಕ್ಷ್ಮಮ್ಮ, ಶ್ರೀಮತಿ ಲಕ್ಷ್ಮಮ್ಮ, ಶ್ರೀಮತಿ ಬುರ್ರಾಕಥಾ, ಐಯ್ಯಮ್ಮ ಎಡವಲ್, ಶ್ರೀಮತಿ ಲಕ್ಷ್ಮೀಬಾಯಿ ಹರಿಜನ, ಶ್ರೀಮತಿ ಭಾಗ್ಯಮ್ಮ, ಶ್ರೀಮತಿ ಚಂದ್ರಕಲಾ ಹರಕುಡೆ.

ವೈದ್ಯಕೀಯ: ಡಾ. ಚಂದ್ರಪ್ಪ, ಡಾ. ಅಲೆಕ್ಸ್ ಥಾಮಸ್, ಡಾ. ಕೃಷ್ಣಪ್ಪ, ಡಾ. ಶಿವಲಿಂಗಯ್ಯ, ಡಾ. ಎಸ್.ಎಸ್. ಗುಬ್ಬಿ, ಡಾ. ಅಕ್ಕಾಮಹಾದೇವಿ.

ಮಾಧ್ಯಮ: ವಿಶ್ವನಾಥ ಸುವರ್ಣ, ಲಕ್ಷ್ಮೀ ನರಸಪ್ಪ ರುದ್ರಪ್ಪ ಅಸಂಗಿ, ಎಂ. ಸಿದ್ದರಾಜು, ಮದನಗೌಡ, ಮಲ್ಲಿಕಾರ್ಜುನ ಹೆಗ್ಗಳಗಿ, ಮಂಜುನಾಥ ಅದ್ದೆ, ಶ್ರೀಮತಿ ಭಾರತಿ ಹೆಗ್ಡೆ, ಶ್ರೀಮತಿ ಕೆ. ಶಾಂತಕುಮಾರಿ.

ಪರಿಸರ: ಎಸ್.ಎಂ. ಭಲವಾದಿ, ಹೆಚ್.ಆರ್. ಜಯರಾಂ.

ಯಕ್ಷಗಾನ/ಬಯಲಾಟ: ಪೇತ್ರಿ ಮಂಜುನಾಥ ಪ್ರಭು, ಶ್ರೀಮತಿ ಯಮುನಾ ಬಾಯಿ ಕಲಾಚಂದ್ರ, ಶ್ರೀಮತಿ ಹುಲಿಗೆಮ್ಮ.

ರಂಗಭೂಮಿ: ಲಕ್ಷ್ಮಯ್ಯ, ರಾಜು ಮಳವಳ್ಳಿ, ಎಂ.ಪಿ. ರಾಜಣ್ಣ, ಶ್ರೀಮತಿ ಮಾಲತಿಶ್ರೀ, ಶ್ರೀಮತಿ ಸುನಂದಾ ಎಸ್. ಕಂದಗಲ್ಲ, ಶ್ರೀಮತಿ ಶಾಂತಾಬಾಯಿ ಜೋಶಿ, ಶ್ರೀಮತಿ ಕಲಾವತಿ, ಶ್ರೀಮತಿ ರಾಧಿಕಾ ಬೇವಿನಕಟ್ಟೆ, ಶ್ರೀಮತಿ ಸಾವಿತ್ರಿ ರಿತ್ತಿ.

ಶಿಲ್ಪಕಲೆ, ಚಿತ್ರಕಲೆ: ಟಿ. ಸೋಮೇಶ್, ಫಜ್ಲು ರೆಹಮಾನ್ ಖಾನ್, ಶ್ರೀಕಾಂತ ಬಿರಾದಾರ, ಡಾ. ರೇಣುಕಾ ಮಾರ್ಕಂಡೆ, ಶ್ರೀಮತಿ ಸುರೇಖಾ, ಶ್ರೀಮತಿ ರುಕ್ಮಿಣಿ ಬಾಯಿ, ಶ್ರೀಮತಿ ಶಕುಂತಲಾ ಎಂ. ಬಡಿಗೇರಾ.

ಛಾಯಾಚಿತ್ರ: ಶ್ರೀವತ್ಸ ಶಾಂಡಿಲ್ಯ.

ಸಂಗೀತ: ಆಮಯ್ಯ ಲಿಂಗಯ್ಯ ಮಠ, ನಿರ್ಮಲಪ್ಪ ಭಜಂತ್ರಿ, ಶ್ರೀಮತಿ ಲತಾ ಜಹಂಗೀರದಾರ್.

ಸಂಕೀರ್ಣ: ಆರ್.ಜಿ. ಹಳ್ಳಿ ನಾಗರಾಜ್, ಆರ್.ವೆಂಕಟರಮಣಪ್ಪ, ಬಾಬು ಕಿಲಾರ್, ದ್ವಾರಕಾನಾಥ್, ಡಾ.ಮೀರಾ ಶಿವಲಿಂಗಯ್ಯ.

ಸಮಾಜ ಸೇವೆ: ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ, ದಾಸೋಹ ರತ್ನ ಚಕ್ರವರ್ತಿ, ಅನ್ನದಾನೇಶ್ವರ ಅಪ್ಪಾಜಿ, ಬಸವಗೋಪಾಲ ನೀಲಮಾಣಿಕ್ಯ ಮಠ, ಎಸ್.ಆರ್. ಜೋಳದ್, ಡಾ. ದು. ಸರಸ್ವತಿ, ಡಾ. ರುಕ್ಮಿಣಿ ಕೃಷ್ಣಸ್ವಾಮಿ, ಶ್ರೀಮತಿ ಲೂಸಿ ಸಲ್ಡಾನಾ, ಶ್ರೀಮತಿ ಚೆನ್ನಬಸಮ್ಮ ಸೂಲಗಿತ್ತಿ, ಶ್ರೀಮತಿ ರಾವಣ್ಣಮ್ಮ, ಶ್ರೀಮತಿ ರೀಟಾ ನರ್‍ರೋನ, ಶ್ರೀಮತಿ ಶಂಕರಮ್ಮ, ಶ್ರೀಮತಿ ಪ್ರೇಮಲತಾ ಕೃಷ್ಣಸ್ವಾಮಿ, ಶ್ರೀಮತಿ ಎಂ. ಪದ್ಮಾ.

ಸಾಹಿತ್ಯ: ನೀಲಕಂಠ ಮ. ಕಾಳಗಿ, ಸಿದ್ದಪ್ಪ ತಿಮ್ಮಪ್ಪ ಮಾದಾರ, ಪ್ರೊ. ಜಿ. ಶರಣಪ್ಪ, ಅಮರೇಶ್ ನುಗಡೋಣಿ, ಡಾ. ಬಿ.ವಿ. ಶಿರೂರು, ಡಾ. ರಾಧಾ ಕುಲಕರ್ಣಿ, ಡಾ. ಎಂ. ಗಾಯತ್ರಿ, ಶ್ರೀಮತಿ ಲಲಿತಾ ಹೊಸಪ್ಯಾಟಿ, ಶ್ರೀಮತಿ ಸಂಕವ್ವ ಸಂಕಣ್ಣನವರ, ಶ್ರೀಮತಿ ಭಾನು ಮುಷ್ತಾಕ್.

ಶಿಕ್ಷಣ: ಟಿ.ಎಂ. ಚಂದ್ರಶೇಖರಯ್ಯ, ಶ್ರೀಮತಿ ಮುಕ್ತಾ, ಶ್ರೀಮತಿ ಭಾಗ್ಯಲಕ್ಷ್ಮಿ, ಶ್ರೀಮತಿ ನಂದಿನಿ ಬಸಪ್ಪ, ಶ್ರೀಮತಿ ಸುಶ್ಮಿತಾ ಪವಾರ್, ಶ್ರೀಮತಿ ನೊಮಿಟೋ ಕಾಮದಾರ್, ಶ್ರೀಮತಿ ನಂದಿನಿ ಎನ್.ಎಸ್.,

ಕ್ರೀಡೆ: ಜಿಮ್ಮಿ ಅಣ್ಣಯ್ಯ, ಎಂ. ಗಿರೀಶ್ ಕುಮಾರ್, **ಕೃಷಿ:** ಜಿ.ಎನ್. ನಾರಾಯಣ ಸ್ವಾಮಿ, ಕೇದಾರಲಿಂಗಯ್ಯ ಹಿರೇಮಠ್, ಶ್ರೀಮತಿ ನಾಗಮ್ಮಜ್ಜಿ, ಶ್ರೀಮತಿ ಶಾಂಭವಿ.

ಕಿರುತೆರೆ: ಸಿಹಿಕಹಿ ಚಂದ್ರು, **ಹೊರನಾಡು:** ದಯಾಶಂಕರ ಅಡಪ, ಸದಾಶಿವ ಶೆಟ್ಟಿ ಕನ್ಯಾನ, ಶ್ರೀಮತಿ ಎಸ್.ಎ.ಲಲಿತಾ, **ವಿಜ್ಞಾನ–ತಂತ್ರಜ್ಞಾನ:** ರತಿರಾವ್, **ಆಡಳಿತ:** ಶ್ರೀಮತಿ ಜೀಜಾ ಹರಿಸಿಂಗ್, **ನೃತ್ಯ:** ಶ್ರೀಮತಿ ಮಿನಲ್ ಪ್ರಭು, **ಸ್ವಾತಂತ್ರ್ಯ ಹೋರಾಟಗಾರರು:** ಶ್ರೀಮತಿ ಮಲ್ಲಮ್ಮ ಯಳವಾರ.

ಮುರಳಿಜೈಪ್ರಕಾಶ್ ಪಿಎಚ್.ಡಿ



ಮೈಸೂರು: ಡಾ. ಪ್ರೀತಿ ಶ್ರೀಮಂಧರ್‌ಕುಮಾರ್ ಅವರ ಮಾರ್ಗದರ್ಶನದಲ್ಲಿ ಮುರಳಿಜೈಪ್ರಕಾಶ್ ಸಂಶೋಧನೆ ನಡೆಸಿ ಸಾದರಪಡಿಸಿದ 'ಕನ್ನಡದಲ್ಲಿ ದಲಿತ ಸ್ತ್ರೀವಾದಿ ಚಿಂತನೆ (ಪ್ರಾತಿನಿಧಿಕ ಕಾದಂಬರಿಗಳನ್ನು ಅನುಲಕ್ಷಿಸಿ) ಮಹಾಪ್ರಬಂಧವನ್ನು ಮೈವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರಿನಲ್ಲಿ ಅದ್ಧೂರಿ ಕನಕ ಜಯಂತಿ ಆಚರಣೆ



ಜಯಂತ್ಯುತ್ಸವ ಸಮಿತಿ ತೀರ್ಮಾನ

ಮೈಸೂರು, ಅ.30– ನಗರ ಮತ್ತು ಜಿಲ್ಲೆಯನ್ನೊಳಗೊಂಡ ಶ್ರೀ ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತ್ಯುತ್ಸವ ಸಮಿತಿ(ರಿ.) ಹಾಗೂ ಜಿಲ್ಲಾಡಳಿತದ ವತಿಯಿಂದ ಮೈಸೂರಿನಲ್ಲಿ ನವೆಂಬರ್ 18ರಂದು ಜರುಗಲಿರುವ ಭಕ್ತ ಕನಕದಾಸರ ಜಯಂತ್ಯುತ್ಸವದ ಹಿನ್ನೆಲೆಯಲ್ಲಿ ಸಮಿತಿಯ ಪದಾಧಿಕಾರಿಗಳ ಸಭೆ ನಾರಾಯಣ ಶಾಸ್ತ್ರಿ ರಸ್ತೆಯ ಶ್ರೀ ಕೊಲ್ಲಾಪುರದಮ್ಮ ದೇವಸ್ಥಾನದ ಆವರಣದಲ್ಲಿ ಜರುಗಿತು.

ಸಮಿತಿಯ ಅಧ್ಯಕ್ಷ ಎಂ.ಕೆ.ಸೋಮಶೇಖರ್, ಸಂಚಾಲಕ ಎಂ.ಶಿವಣ್ಣ, ಉಪಾಧ್ಯಕ್ಷ ಜೆ.ಮಹದೇವಪ್ಪ, ಸಹ ಕಾರ್ಯದರ್ಶಿ ಸಿದ್ದನಾಗೇಂದ್ರ, ಅಪ್ಪುಗೌಡ, ಖಜಾಂಚಿ ಎಂ.ನಾಗರಾಜು, ಪ್ರಧಾನ ಕಾರ್ಯದರ್ಶಿ ಎಂ.ಮಹದೇವೇಗೌಡ, ಕಾರ್ಯದರ್ಶಿಗಳಾದ ಎಂ.ಕೆ.ಶಂಕರ್, ವಿಶ್ವನಾಥ್, ಎಂ.ಸಿ.ದೀಪಕ್ ನಿರ್ದೇಶಕರಾದ ಜಿ.ಸೋಮಶೇಖರ್, ಗೋಕುಲಂ ರಾಮು, ಸೋಮು, ಧನಂಜಯ, ರವಿಕುಮಾರ್, ಪ್ರಕಾಶ್, ಧರ್ಮೇಂದ್ರ, ರಮೇಶ್ ರಾಮಪ್ಪ, ಅಮೃತ್ ಕೃಷ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದ ಮುಖ್ಯಮಂತ್ರಿಗಳು ಮೈಸೂರಿನವರೇ ಆಗಿರುವುದರಿಂದ ಈ ಬಾರಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಗಿದ್ದು, 30ಕ್ಕೂ ಹೆಚ್ಚು ವಿಶಿಷ್ಟ ಆಕರ್ಷಣೆಯುಳ್ಳ ಕಲಾತಂಡಗಳು ಭಾಗವಹಿಸಲಿವೆ.

ಮೈಸೂರು ದಸರಾ ಮಾದರಿಯಲ್ಲಿ ಸಾಮಾಜಿಕ ಸಂದೇಶ ಸಾರುವ ಸ್ತಬ್ಧ ಚಿತ್ರಗಳು, ಮೈಸೂರಿನ ನಗರ, ಗ್ರಾಮಾಂತರ ಭಾಗದಿಂದ ಬರುವಂತಹ ವಿವಿಧ ತಂಡಗಳು, ಸಂಘ, ಸಂಸ್ಥೆಗಳು, ಸಾಂಸ್ಕೃತಿಕ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ. ಕಾಲೇಜಿನ ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಈ ಬಾರಿ ಹೆಚ್ಚು ಜನ ಪಾಲ್ಗೊಳ್ಳುವ ನಿರೀಕ್ಷೆ ಇದ್ದು ಜಿಲ್ಲಾಡಳಿತ ಮತ್ತು ಜಯಂತ್ಯುತ್ಸವ ಸಮಿತಿಯ ಸಮನ್ವಯದೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಿದ್ದು, ಕಲಾಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದ್ದು ಮಠಾಧೀಶರು, ಜನಪ್ರತಿನಿಧಿಗಳು ಭಾಗವಹಿಸುವರು ಎಂದು ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಿತು.

ರೋಗಗಳ ಉತ್ಪತ್ತಿಯಲ್ಲಿ ಆಧುನಿಕ ವೈದ್ಯ ಪದ್ಧತಿಯ ಪಾಲುಗಾರಿಕೆ

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಗಜಾನನ ಹೆಗಡೆ ವಿಷಾದ



ಆಯುರ್ವೇದ ದಿನಾಚರಣೆ ಕಾರ್ಯಕ್ರಮವನ್ನು ಡಾ. ಗಜಾನನ ಹೆಗಡೆ ಉದ್ಘಾಟಿಸಿದರು.

ಮೈಸೂರು: ರೋಗಗಳ ಉತ್ಪತ್ತಿಯಲ್ಲಿ ಆಧುನಿಕ ವೈದ್ಯಕೀಯ ಕ್ಷೇತ್ರದ ಪಾಲುಗಾರಿಕೆ ತುಂಬಾ ಇದೆ ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಗಜಾನನ ಹೆಗಡೆ ವಿಷಾದ ವ್ಯಕ್ತಪಡಿಸಿದರು.

ಅವರು ಉತ್ತಿಷ್ಠ ಭಾರತ ಪ್ರತಿಷ್ಠಾನ ಮತ್ತು ಪರಮಹಂಸ ಯೋಗ ಮಹಾವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ರಾಮಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಇಂದು ನಡೆದ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವೈದ್ಯಕೀಯ ಕಂಪನಿಗಳು ರೋಗವನ್ನು ಹೆಚ್ಚು ಸೃಷ್ಟಿಸುತ್ತಿದ್ದು, ಇದರ ಹಿನ್ನೆಲೆಯಲ್ಲಿ ಔಷಧಗಳ ಮಾಫಿಯಾ ಇರುವುದು ಕಾಣುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಆಯುರ್ವೇದದ ಮಹತ್ವ ಕುರಿತು ಉಪನ್ಯಾಸ ನೀಡಿದ ಹಿರಿಯ ಸಂಸ್ಕೃತ ವಿದುಷಿ ಡಾ.ಕೆ ಲೀಲಾ ಪ್ರಕಾಶ್, ಆಯುರ್ವೇದಕ್ಕೆ 2000 ವರ್ಷಗಳ ಇತಿಹಾಸವಿದ್ದು, ಅಥರ್ವಣ ವೇದದಲ್ಲಿ ಆಯುರ್ವೇದದ ಪ್ರಸ್ತಾಪವಿದೆ ಎಂದರಲ್ಲದೆ, ಅಂದಿನಿಂದ ಇಂದಿನವರೆಗೂ ಆಯುರ್ವೇದದ ವಿಚಾರಗಳಲ್ಲಿ, ಪರಿಣಾಮಗಳಲ್ಲಿ ಯಾವುದೇ ವ್ಯತ್ಯಾಸವಾಗದೆ ಸಾರ್ವಕಾಲಿಕ ಮಹತ್ವವನ್ನು ಪಡೆದಿದೆ ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಹಿರಿಯ ಆಯುರ್ವೇದ ತಜ್ಞ ವೈದ್ಯ ಡಾ. ಎ.ಎಸ್.ಚಂದ್ರಶೇಖರ್, ಧನ್ವಂತರಿಯ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿರಿಯ ಸಮಾಜ ಸೇವಕ ಡಾ. ಕೆ ರಘುರಾಮ್ ವಾಜಪೇಯಿ, 84 ಲಕ್ಷ ಜೀವರಾಶಿಗಳಲ್ಲಿ ಪ್ರಕೃತಿಯು ಕೂಡ ನಮ್ಮ ಪೂರ್ವಿಕರ ಪ್ರತೀಕವಾಗಿದೆ. ಪ್ರಕೃತಿಯ ಗಿಡಮೂಲಿಕೆಗಳುಳ್ಳ ಆಯುರ್ವೇದ ಇಂದು ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪರಮಹಂಸ ಯೋಗ ಮಹಾವಿದ್ಯಾಲಯದ ನಿರ್ದೇಶಕರಾದ ಶಿವಪ್ರಕಾಶ್ ಗುರೂಜಿ, ಉತ್ತಿಷ್ಠ ಭಾರತ ಪ್ರತಿಷ್ಠಾನದ ಕಾರ್ಯದರ್ಶಿ ಎಂ.ವಿ. ನಾಗೇಂದ್ರ ಬಾಬು ಹಾಗೂ ಸಂಚಾಲಕ ಎನ್.ಅನಂತ ಉಪಸ್ಥಿತರಿದ್ದರು.

ನಾಳೆಯಿಂದ ಮಲೆಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ



ಫೈಲ್ ಚಿತ್ರ

ಮೈಸೂರು, ಅ.30(ಎಂಟಿವೈ)- ಮೈಸೂರಿನ ಲಷ್ಕರ್ ಮೊಹಲ್ಲಾದಲ್ಲಿರುವ ಮಲೆ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ನ.1ರಿಂದ 11ರವರೆಗೆ 47ನೇ ವರ್ಷದ ಕಾರ್ತಿಕ ಮಾಸದ ಮಲೆ ಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, 26ನೇ ವರ್ಷದ ಮಹಾ ಕುಂಭಾಭಿಷೇಕ ಮತ್ತು 10ನೇ ವರ್ಷದ ಹಾಲರವಿ ಸೇವೆ ನಡೆಯಲಿದೆ ಎಂದು ಮಲೆ ಮಹದೇಶ್ವರ ಸ್ವಾಮಿ ದೇವಾಲಯದ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಸುರೇಶ್ ಬಾಬು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ನ.1ರಂದು ಬೆಳಗ್ಗೆ 6 ಗಂಟೆಯಿಂದಲೇ ದೇವಾಲಯದಲ್ಲಿ ಮಲೆ ಮಹದೇಶ್ವರರಿಗೆ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಮಂಗಳಾರತಿ ನೆರವೇರಲಿದೆ. ಬೆಳಗ್ಗೆ 9ಕ್ಕೆ ದೇವಾಲಯದ ಗೋಪುರದ ಮೇಲೆ ಧ್ವಜಾರೋಹಣ ಮಾಡಿ ಉತ್ಸವಕ್ಕೆ ಚಾಲನೆ ನೀಡಲಾಗುವುದು. ನ.4ರಿಂದ 7ರವರೆಗೆ ಸಂಜೆ 6 ಗಂಟೆಗೆ ವಿವಿಧ ತಂಡಗಳಿಂದ ಭಜನಾ ಕಾರ್ಯಕ್ರಮ ನೆರವೇರಲಿದೆ. ಅಲ್ಲದೆ, ನ.4ರಂದು ಗಂಗಾಪೂಜೆ, ಹಾಲರವಿ ಕಳಶ, ಸಂಜೆ ದೀಪೋತ್ಸವ ನೆರವೇರಲಿದೆ.

ನ.8ರಂದು ಬೆಳಗ್ಗೆ 10ಕ್ಕೆ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆ ಶಿಬಿರ ಆಯೋಜಿಸಿದ್ದು, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರು. ಸಂಸದ ಸುನೀಲ್ ಬೋಸ್, ಶಾಸಕರಾದ ಕೆ.ಹರೀಶ್ ಗೌಡ, ತನ್ವೀರ್ ಸೇಠ್ ಭಾಗವಹಿಸುವರು. ಅಂದು ಮಧ್ಯಾಹ್ನ 1ಕ್ಕೆ ಮಹಾ ಅನ್ನ ಸಂತರ್ಪಣೆಯೂ ನಡೆಯಲಿದೆ ಎಂದು ತಿಳಿಸಿದರು.

ನ.9ರಂದು ಚಿಣ್ಣರ ಚಿತ್ರಕಲಾ ಮತ್ತು ಆಟೋಟ ಸ್ಪರ್ಧೆ, ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ನ.10ಮತ್ತು 11ರಂದು ವಿವಿಧ ಭಜನೆ ಹಾಗೂ ಗಾಯನ ಕಾರ್ಯಕ್ರಮ, ನ.18 ಮತ್ತು 25ರಂದು ಕಾರ್ತಿಕ ಸೋಮವಾರದ ಅಂಗವಾಗಿ ವಿಶೇಷ ಪೂಜಾ ಮಹೋತ್ಸವ ಏರ್ಪಡಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಹಾಗೂ ದೇವಸ್ಥಾನದ ಗುಡ್ಡಪ್ಪ ಎಂ.ಎಸ್.ರವಿಕುಮಾರ್, ಖಜಾಂಚಿ ಮಹದೇವ್, ಮಹಾಪೋಷಕರಾದ ವೆಂಕಟ ದಾಸಾಚಾರ್, ಚೆಲುವಯ್ಯ, ಎಸ್.ಜಗನ್ನಾಥ್ ಇದ್ದರು.

ಪದವಿ ಪರೀಕ್ಷೆ ಮುಂದೂಡಲು ಆಗ್ರಹಿಸಿ ಪ್ರತಿಭಟನೆ



ಪದವಿ ಪರೀಕ್ಷೆ ಮುಂದೂಡುವಂತೆ ಆಗ್ರಹಿಸಿ ಬುಧವಾರ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮುಂಭಾಗ ಭಾರತ ವಿದ್ಯಾರ್ಥಿ ಫೆಡರೇಷನ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಅ.30(ಎಂಟಿವೈ)- ಪದವಿ ಪರೀಕ್ಷೆಗೆ ಶುಲ್ಕ ಪಾವತಿ ಅವಧಿಯನ್ನು ವಿಸ್ತರಿಸಿ, ಪರೀಕ್ಷೆಯನ್ನು ಮುಂದೂಡುವಂತೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್ ಮುಂಭಾಗದಲ್ಲಿ ಬುಧವಾರ ಬೆಳಗ್ಗೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ, ಪದವಿ ಪರೀಕ್ಷೆಗೆ ಶುಲ್ಕ ಕಟ್ಟಲು ಅವಧಿ ವಿಸ್ತರಿಸಬೇಕು. ಅಲ್ಲದೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷಾ ದಿನಾಂಕವನ್ನು ಮುಂದೂಡಬೇಕು. ಶುಲ್ಕ ಭರಿಸಲು ಅನೇಕ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಈ ಹಿನ್ನೆಲೆಯಲ್ಲಿ ನೂರಾರು ವಿದ್ಯಾರ್ಥಿಗಳು ಪರೀಕ್ಷೆಯಿಂದ ವಂಚಿತರಾಗುವ ಸಾಧ್ಯತೆ ಇದೆ. ಇದನ್ನು ಮನಗಂಡು ಪರೀಕ್ಷೆ ಮುಂದೂಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಟಿ.ಪ್ರಜ್ವಲ್ ಮಾತನಾಡಿ, ತರಗತಿ ಆರಂಭವಾಗಿ 2 ತಿಂಗಳ ನಂತರ ಅತಿಥಿ ಉಪನ್ಯಾಸಕರನ್ನು ಸರ್ಕಾರ ನೇಮಿಸಿದೆ. ಶೇ.70ರಷ್ಟು ಅತಿಥಿ ಉಪನ್ಯಾಸಕರು ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಹೀಗಾಗಿ ಪದವಿ ಕಾಲೇಜುಗಳಲ್ಲಿ ಶೇ.25ರಿಂದ 30ರಷ್ಟು ಮಾತ್ರ ಪಾಠ-ಪ್ರವಚನಗಳು ನಡೆದಿವೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ತಯಾರಾಗಲು ಕಷ್ಟವಾಗಿದೆ. ಸಾಲು ಸಾಲು ರಜೆಗಳಿಂದಾಗಿ ಪರೀಕ್ಷಾ ಶುಲ್ಕವನ್ನು ಪಾವತಿಸಲು ಕೆಲವು ವಿದ್ಯಾರ್ಥಿಗಳಿಗೆ ಸಾಧ್ಯವಾಗಿಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪದವಿ ಪರೀಕ್ಷಾ ಶುಲ್ಕ ಪಾವತಿಯ ಅವಧಿಯನ್ನು ವಿಸ್ತರಿಸಿ, ಪರೀಕ್ಷೆಗಳನ್ನು ಮುಂದೂಡುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಅಧ್ಯಕ್ಷ ಚಿರಾಗ್ ಎಸ್.ಕೆ.ಮೂರ್ತಿ, ಕಾರ್ಯದರ್ಶಿ ಸಂತೋಷ್ ಜಾಧವ್ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪಟಾಕಿ ಮಾರಾಟ ಮಳಿಗೆಗಳಲ್ಲಿ ಬಾಲ ಕಾರ್ಮಿಕ ಮಕ್ಕಳ ಬಳಕೆ ನಿಷೇಧ

ಮೈಸೂರು,ಅ.30- ಮೈಸೂರು ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಪಟಾಕಿ ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗಿದ್ದು, ಪಟಾಕಿ ತಯಾರಿಕೆ, ಪಟಾಕಿ ಮಾರಾಟ ಹಾಗೂ ಇತರೆ ಪ್ರಕ್ರಿಯೆಗಳು ಅಪಾಯಕಾರಿ ಉದ್ದಿಮೆಗಳ ಪಟ್ಟಿಗೆ ಬರುವುದರಿಂದ ಅಂಗಡಿಗಳಲ್ಲಿ 18 ವರ್ಷದ ಒಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಮಕ್ಕಳ ಬಳಕೆ ಕಂಡುಬಂದಲ್ಲಿ ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ ಕಾಯ್ದೆ) ಅನ್ವಯ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮೈಸೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಒಳ ಮೀಸಲಾತಿ ಕುರಿತು ವಿಚಾರ ಸಂಕಿರಣ

ಮೈಸೂರು, ಅ.30(ಎಂಟಿವೈ)- ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ನವೆಂಬರ್ 1ರಂದು ಸಂಜೆ 4.30ಕ್ಕೆ ಸುಪ್ರೀಂಕೋರ್ಟ್ ಒಳಮೀಸಲಾತಿ ತೀರ್ಪು ಮತ್ತು ಜಾರಿ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಚೈತನ್ಯ ಫೌಂಡೇಶನ್ ಹಾಗೂ ಜಿಲ್ಲಾ ಒಳಮೀಸಲಾತಿ ಜಾರಿ ಹೋರಾಟ ಸಮಿತಿಯಿಂದ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಚಿಂತಕ ಪ್ರೊ.ಎಚ್.ಗೋವಿಂದಯ್ಯ ವಿಚಾರ ಸಂಕಿರಣಕ್ಕೆ ಚಾಲನೆ ನೀಡುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ವಹಿಸಲಿದ್ದಾರೆ. ಅತಿಥಿಗಳಾಗಿ ಮಾಜಿ ಮೇಯರ್ ನಾರಾಯಣ, ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ರಾಜ್ಯ ಅಧ್ಯಕ್ಷ ಎಸ್.ಅರುಣ್‌ಕುಮಾರ್, ಮೈಸೂರು ವಿಶ್ವವಿದ್ಯಾಲಯದ ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಆರ್.ಮಹೇಶ್, ಮಾತಂಗ ಮಹಾಪರಿಷತ್ ರಾಜ್ಯಾಧ್ಯಕ್ಷ ಆರಕಲವಾಡಿ ನಾಗೇಂದ್ರ, ಆದಿಜಾಂಬವ ಮಹಾಸಭಾ ಅಧ್ಯಕ್ಷ ರೈಲ್ವೆ ಗಂಗಯ್ಯ, ವಕೀಲರಾದ ದಾಸಯ್ಯ, ಮಾಳಪ್ಪ ಕುರ್ಕಿ ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜ್ಯ ಸರ್ಕಾರವು ಒಳಮೀಸಲಾತಿ ಕುರಿತು ಸಂಪುಟದಲ್ಲಿ ತೆಗೆದುಕೊಂಡ ನಿರ್ಧಾರದ ಕುರಿತು ಚರ್ಚಿಸಲಾಗುವುದು. ಈಗಾಗಲೇ ಸದಾಶಿವ ಆಯೋಗದ ವರದಿಯಿದ್ದರೂ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ವರದಿ ಸಿದ್ಧಪಡಿಸಲು ಆಯೋಗ ರಚಿಸಿರುವುದು ಗೊಂದಲವೆನಿಸಿದೆ. ಆದರೂ ವಿಳಂಬ ಮಾಡದೆ ವರದಿ ಸಿದ್ಧಪಡಿಸುವ ಕಾರ್ಯ ಪೂರ್ಣಗೊಳಿಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ವರದಿ ಬರುವವರೆಗೂ ಹೊಸ ನೇಮಕಾತಿ ತಡೆಹಿಡಿರುವುದು ಸ್ವಾಗತಾರ್ಹ ಎಂದು ಅಭಿಪ್ರಾಯಪಟ್ಟರು. ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ನ್ಯಾಯಪರ ವೇದಿಕೆಯ ಮರಡಿಪುರ ರವಿ ಕುಮಾರ್, ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ಜಿ.ಶ್ರೀನಿವಾಸ್, ಜಿಲ್ಲಾ ಕೊಳಚೆ ನಿವಾಸಿಗಳ ಒಕ್ಕೂಟದ ಗೌರವಾಧ್ಯಕ್ಷ ಯತಿರಾಜ್, ಜೈ ಭುವನೇಶ್ವರಿ ಟ್ರಸ್ಟ್ ಅಧ್ಯಕ್ಷ ತಿಪ್ಪಯ್ಯ ಇದ್ದರು.

ಸ್ತನ ಕ್ಯಾನ್ಸರ್‌ಗೆ ತುತ್ತಾಗುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚಳ

ತಪಾಸಣೆ ಮಾಡಿಸಿಕೊಳ್ಳಲು ಡಾ.ಎಂ.ವಿಜಯಕುಮಾರ್ ಸಲಹೆ

ಮೈಸೂರು, ಅ.30(ಎಂಟಿವೈ)- ದೇಶದಲ್ಲಿ ಸ್ತನ ಕ್ಯಾನ್ಸರ್‌ಗೆ ತುತ್ತಾಗುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದ್ದು, ಮಹಿಳೆಯರು ತಪಾಸಣೆ ಮಾಡಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳುವಂತೆ ಭಾರತ್ ಕ್ಯಾನ್ಸರ್ ಆಸ್ಪತ್ರೆ ತಜ್ಞ ವೈದ್ಯ ಡಾ.ಎಂ. ವಿಜಯಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಯಾನ್ಸರ್ ಪೀಡಿತ ಭಾರತೀಯ ಮಹಿಳೆಯರಲ್ಲಿ ಶೇ.30ರಷ್ಟು ಮಂದಿ ಸ್ತನ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಆರೋಗ್ಯ ತಪಾಸಣೆ ಮಾಡಿಸಿಕೊಂಡು ಕ್ಯಾನ್ಸರ್ ಲಕ್ಷಣಗಳನ್ನು ಆರಂಭದಲ್ಲಿಯೇ ಗುರುತಿಸಿದರೆ, ಸೂಕ್ತ ಚಿಕಿತ್ಸೆ ಪಡೆದುಕೊಂಡು ಆರೋಗ್ಯ ಕಾಪಾಡಿಕೊಳ್ಳಬಹುದು. ಆ ನಿಟ್ಟಿನಲ್ಲಿ ಮಹಿಳೆಯರು ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಲು ಗಮನಹರಿಸಬೇಕು ಎಂದರು.

ಕುಟುಂಬದ ಹಿನ್ನೆಲೆ ಮತ್ತು ಅನುವಂಶಿಕ ಪ್ರವೃತ್ತಿಗಳು ಹಾಗೂ ಬದಲಾದ ಜೀವನ ಶೈಲಿಯಿಂದಾಗಿ ಸ್ತನ ಕ್ಯಾನ್ಸರ್ ಕಾಣಿಸಿಕೊಳ್ಳಬಹುದಾಗಿದೆ. ಸ್ಥೂಲಕಾಯ, ತಡವಾಗಿ ಮಗು ಜನಿಸುವುದು, ಕಡಿಮೆ ಹಾಲುಣಿಸುವಿಕೆ, ಬದಲಾದ ಆಹಾರ ಪದ್ಧತಿಗಳು ಸ್ತನ ಕ್ಯಾನ್ಸರ್‌ಗೆ ಕಾರಣವಾಗಬಹುದಾಗಿವೆ. ಮಹಿಳೆಯರು ಸ್ತನದಲ್ಲಿ ಗಂಟು ಕಾಣಿಸಿಕೊಂಡಾಗ ಹಾಲುಗಂಟು ಎಂದು ನಿರ್ಲಕ್ಷಿಸುವುದು ಬೇಡ, ಸ್ಕ್ಯಾನಿಂಗ್ ಮೊದಲಾದ ತಪಾಸಣೆಗೆ ಒಳಗಾಗುವುದು ಸೂಕ್ತ. ಜೊತೆಗೆ, ವೈದ್ಯಕೀಯ ಪದ್ಧತಿ ಸಾಕಷ್ಟು ಅಭಿವೃದ್ಧಿ ಹೊಂದಿದ್ದು, ಕಡಿಮೆ ವೆಚ್ಚದಲ್ಲಿಯೇ ತಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸಾ ಸೌಲಭ್ಯವಿದೆ. ಹೀಗಾಗಿ ಪ್ರಯೋಜನ ಪಡೆದುಕೊಳ್ಳಬೇಕೆಂದು ಕೋರಿದರು. ಗೋಷ್ಠಿಯಲ್ಲಿ ಭಾರತ್ ಕ್ಯಾನ್ಸರ್ ಆಸ್ಪತ್ರೆ ವೈದ್ಯರಾದ ಡಾ.ಕೆ.ಜಿ.ಶ್ರೀನಿವಾಸ್, ಆನಂದ್, ಗೌತಮ್ ದಮರ್ಲಾ ಇದ್ದರು.

ನ.15, 16, ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ

ಮೈಸೂರು,ಅ.30-ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಜೀವ ವಿಜ್ಞಾನ ಶಾಲೆಯ, ಮೈಕ್ರೋಬಯಾಲಜಿ ವಿಭಾಗದ ವತಿಯಿಂದ ನ.15 ಮತ್ತು 16ರಂದು ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಮೈಕ್ರೋಕೋಸ್ಮ್ 1.0-'ಸುಸ್ಥಿರ ಭವಿಷ್ಯದ ಕಡೆಗೆ ಸೂಕ್ಷ್ಮ ಜೀವಿಯ ಪರಿಹಾರಗಳನ್ನು ನವೀನಗೊಳಿಸುವುದು' ನಡೆಯಲಿದ್ದು, ಇದು ಹೈಬ್ರಿಡ್ ಮೋಡ್‌ನಲ್ಲಿಯೂ ನಡೆಯಲಿದೆ.

PHFI/IPHS ವಿಶ್ವವಿದ್ಯಾನಿಲಯ ಮತ್ತು ಅದರ ನಿರ್ದೇಶಕರು ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್, ಹೈದರಾಬಾದ್‌ನ ಉಪಕುಲಪತಿ ಪ್ರೊ.ಅನಿಲ್ ಕೌಲ್ ಸಮ್ಮೇಳನವನ್ನು ನ.15ರಂದು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಉದ್ಘಾಟನಾ ಭಾಷಣ ಮಾಡಲಿದ್ದಾರೆ. ಕೇಂದ್ರ ನೀತಿ ಆಯೋಗ್‌ನ ವಿಜ್ಞಾನ ಮತ್ತು ತಂತ್ರಜ್ಞಾನದ ಉಪ ಸಲಹೆಗಾರ ಡಾ. ತ್ಯಾಗರಾಜು ಬಿ.ಎಂ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು JSS AHERನ ಸಮ ಕುಲಾಧಿಪತಿ ಡಾ.ಬಿ.ಸುರೇಶ್ ವಹಿಸಲಿದ್ದಾರೆ.

ಸಮ್ಮೇಳನದ ಮೊದಲ ದಿನ ನ.15 ರಂದು ಬೆಳಗ್ಗೆ ಪರ್ಡ್ಯೂ ವಿಶ್ವವಿದ್ಯಾಲಯದ ಮಾಲಿಕ್ಯುಲರ್ ಫುಡ್ ಮೈಕ್ರೋಬಯಾಲಜಿ ವಿಭಾಗದ ಪ್ರೊ.ಅರುಣ್ ಭುನಿಯಾ ಉಪನ್ಯಾಸ ನೀಡಲಿದ್ದು, ಸಮ್ಮೇಳನದಲ್ಲಿ SLSMನ ಮುಖ್ಯಸ್ಥ ಡಾ.ರವೀಶ ಕೆ.ಎ, ಮತ್ತು ಸಮ್ಮೇಳನದ ಸಂಯೋಜಕರಾದ ಡಾ.ಅಶ್ವಿನಿ, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಆನ್ ಕ್ಯಾಥರೀನ್ ಆರ್ಚರ್ ಉಪಸ್ಥಿತರಿರುವರು.

ಆಂಟಿಮೈಕ್ರೊಬಿಯಲ್ ಪ್ರತಿರೋಧ (ಎಎಂಆರ್) ಜಾಗತಿಕ ಬೆದರಿಕೆಯ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಸೂಪರ್‌ಬಗ್‌ಗಳ ವಿರುದ್ಧ ಸೂಪರ್ ಹೀರೋಸ್ ಕುರಿತು ಪೂರ್ವ ಸಮ್ಮೇಳನ ಕಾರ್ಯಾಗಾರವನ್ನು ಸಮ್ಮೇಳನದ ಮುನ್ನಾ ದಿನವಾದ ನ.14ರಂದು ಆಯೋಜಿಸಲಾಗಿದೆ. ಸುಮಾರು 60 ಮಂದಿ ಮಾತ್ರ ಈ ಕಾರ್ಯಕ್ರಮವು ಸೀಮಿತವಾಗಿದೆ.

ಸಮ್ಮೇಳನದಲ್ಲಿ ಸುಮಾರು 300 ವಿಜ್ಞಾನಿಗಳು, ತಜ್ಞರು, ವಿದ್ಯಾರ್ಥಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಜೊತೆಗೆ ಪ್ರಪಂಚದಾದ್ಯಂತ ಪ್ರತಿನಿಧಿಗಳು ಆನ್‌ಲೈನ್ ಮೋಡ್ ಮೂಲಕ ಭಾಗವಹಿಸುವ ಅವಕಾಶ ಕಲ್ಪಿಸಲಾಗಿದೆ. ಆಸಕ್ತಿಯುಳ್ಳವರು https://microcosm. azurewebsites.net.index.html ಈ ಅಂತರ್ಜಾಲ ಸಂಪರ್ಕ ಕೊಂಡಿಯನ್ನು ಬಳಸಿಕೊಂಡು ನ.9ರಂದು ಅಥವಾ ಅದಕ್ಕೂ ಮುನ್ನ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಮೊ. 9686991757 ಸಂಪರ್ಕಿಸಬಹುದು.

ದೀಪಾವಳಿ ಅಂಗವಾಗಿ ಲಕ್ಷ್ಮಿ ಪೂಜೆ



ಪೇರೆಂಟ್ಸ್ ಅಸೋಸಿಯೇಷನ್ ಆಫ್ ಢೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್ಸ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಶಾಲೆಯಲ್ಲಿ ದೀಪಾವಳಿ ಅಂಗವಾಗಿ ಲಕ್ಷ್ಮಿ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಂಸ್ಥೆಯ ದಾನಿಗಳೊಬ್ಬರಾದ ರಿಟೈರ್ಡ್ ಏರ್ ವೈಸ್ ಮಾರ್ಷಲ್ ರೌಟೇಲ ದಂಪತಿ ಪರವಾಗಿ ಶಾಲೆಯಲ್ಲಿ ಕಲಿಯುತ್ತಿರುವ ಶ್ರವಣ ದೋಷ ಮಕ್ಕಳಿಗೆ ಲೇಖನ ಸಾಮಗ್ರಿ ಹಾಗೂ ಸಿಹಿ ಹಂಚಲಾಯಿತು. ಉಪಾಧ್ಯಕ್ಷ ಗಿರೀಶ್, ಕಾರ್ಯಕಾರಿ ಸಮಿತಿ ಸದಸ್ಯ ಎ.ದಿನಕರಶೆಟ್ಟಿ, ಶಿಕ್ಷಕಿಯರಾದ ಪರಿಮಳ, ಅಶ್ವಿನಿ, ವಿಜಯ, ಸ್ವಾತಿ ಹಾಗೂ ವ್ಯವಸ್ಥಾಪಕ ರಘುವೀರ್ ಚಿತ್ರದಲ್ಲಿದ್ದಾರೆ.

ಬಾಲಕಾರ್ಮಿಕ ಮಕ್ಕಳ ಬಳಕೆ ಬಗ್ಗೆ ಮಾಹಿತಿ ನೀಡಲು ಸಹಾಯವಾಣಿ

ಮೈಸೂರು,ಅ.30-ಮೈಸೂರು ದಸರಾ ವಸ್ತು ಪ್ರದರ್ಶನದ ಆವರಣದಲ್ಲಿರುವ ಅಂಗಡಿ ಗಳಲ್ಲಿ ಹಾಗೂ ಮಳಿಗೆಗಳಲ್ಲಿ, ಹೋಟೆಲ್‌ಗಳಲ್ಲಿ, ಬಾಲಕಾರ್ಮಿಕರು ಹಾಗೂ ಕಿಶೋರ ಕಾರ್ಮಿಕರು ಮತ್ತು ಭಿಕ್ಷಾಟನೆ ಮಾಡುವ ಮಕ್ಕಳು ಹಾಗೂ ಪೆನ್ನು, ಪೆನ್ಸಿಲ್ ಮತ್ತು ಇತರೆ ವಸ್ತುಗಳನ್ನು ಮಾರಾಟ ಮಾಡುವ ಮಕ್ಕಳು ಕಂಡಬಂದಲ್ಲಿ ತಕ್ಷಣ ಮಕ್ಕಳ ಸಹಾಯವಾಣಿ 1098 ಸಂಪರ್ಕಿಸಿ ದೂರು ನೀಡಬಹುದು ಎಂದು ಮೈಸೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರೋಗ್ಯಯುತ ಜೀವನಕ್ಕೆ ಆಯುರ್ವೇದ ಅಗತ್ಯ

ಆಯುರ್ವೇದ ಹಿರಿಯ ವೈದ್ಯ ಡಾ.ಚಂದ್ರಶೇಖರ್ ಸಲಹೆ



ಅಪೂರ್ವ ಸ್ನೇಹ ಬಳಗದಿಂದ ಆಯುರ್ವೇದ ಗಿಡಗಳನ್ನು ವಿತರಿಸಲಾಯಿತು.

ಮೈಸೂರು,ಅ.30-ಒತ್ತಡದ ಜೀವನದಲ್ಲಿ ಆರೋಗ್ಯವನ್ನು ಕಾಪಾಡಿಕೊಳ್ಳಲು ಯೋಗ, ಧ್ಯಾನ, ಆಯುರ್ವೇದ ಆಹಾರ ಕ್ರಮಗಳು ಪ್ರಸ್ತುತ ದಿನಗಳಲ್ಲಿ ಅಗತ್ಯವಾಗಿವೆ ಎಂದು ಆಯುರ್ವೇದ ಹಿರಿಯ ವೈದ್ಯ ಡಾ.ಚಂದ್ರಶೇಖರ್ ಹೇಳಿದರು.

ಅಪೂರ್ವ ಸ್ನೇಹ ಬಳಗದ ವತಿಯಿಂದ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅಂಗವಾಗಿ ಸಾರ್ವಜನಿಕರಿಗೆ ಆಯುರ್ವೇದ ಗಿಡಗಳನ್ನು ವಿತರಿಸಿ ನಂತರ ಆಯುರ್ವೇದದಿಂದ ಆಗುವ ಉಪಯೋಗಗಳ ಬಗ್ಗೆ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆಯುರ್ವೇದ ವೈದ್ಯ ಪದ್ಧತಿ ಕಾಯಿಲೆ ಗುಣಪಡಿಸುವ ಜತೆಗೆ ಆರೋಗ್ಯಯುತ ಜೀವನ ನಡೆಸುವ ಕ್ರಮವನ್ನು ಕಲಿಸುತ್ತದೆ. ಆಯುರ್ವೇದದ ಬಗ್ಗೆ ಜನರಿಗೆ ತಿಳಿವಳಿಕೆ ಬರಲು ಹೆಚ್ಚಿನ ಪ್ರಚಾರದ ಅಗತ್ಯ ಇದೆ ಎಂದರು.

ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಮಾತನಾಡಿ, ಆರೋಗ್ಯಕ್ಕಾಗಿ ಆಸ್ಪತ್ರೆಗಳನ್ನು ಅವಲಂಬಿಸಬಾರದು. ಅಡುಗೆ ಮನೆಯ ಸಾಂಬಾರ ಬಟ್ಟಲಿನಲ್ಲಿ ಆರೋಗ್ಯ ಕಾಯುವ ಪದಾರ್ಥಗಳಿರುತ್ತವೆ. ಅವುಗಳ ಸರಿಯಾದ ಸೇವನೆಯ ಮಹತ್ವ ಅರಿಯಬೇಕು ಎಂದರು

ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್ ಮಾತನಾಡಿ, ಆಯುರ್ವೇದ ಸಸ್ಯಗಳ ಬಳಕೆ ಮೂಲಕ ದೀರ್ಘಾವಧಿ ಕಾಯಿಲೆಗಳಿಗೆ ತುತ್ತಾಗುವುದನ್ನು ತಡೆಯಬಹುದು. ಹೀಗಾಗಿ ಜನಸಾಮಾನ್ಯರಿಗೆ ದಿನನಿತ್ಯ ಉಪಯೋಗಕ್ಕೆ ಬರುವ ಗಿಡಮೂಲಿಕೆಗಳ ಬಗ್ಗೆ ಅರಿವು ಮೂಡಿಸಬೇಕಿದೆ. ಈ ನಿಟ್ಟಿನಲ್ಲಿ ಹೆಚ್ಚಿನ ಕಾರ್ಯಕ್ರಮಗಳು ಅಗತ್ಯ ಎಂದು ತಿಳಿಸಿದರು.

ಆಯುರ್ವೇದ ಸಸ್ಯಗಳಾದ ಅಮೃತಬಳ್ಳಿ, ಕೃಷ್ಣ ತುಳಸಿ, ರಾಮ ತುಳಸಿ, ಬೆಟ್ಟದ ನೆಲ್ಲಿಕಾಯಿ, ದೊಡ್ಡಿಪತ್ರೆ, ಅಗಸೆ ಗಿಡ, ನೇರಳೆ ಗಿಡ, ಬೇವಿನ ಗಿಡ, ಅರಿಶಿನ ಗಿಡ ಸೇರಿದಂತೆ ಇನ್ನಿತರ ಗಿಡಗಳನ್ನು ವಿತರಣೆ ಮಾಡಲಾಯಿತು.

ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಜಗದೀಶ್, ಅಲೋಕ್ ಆರ್ ಜೈನ್, ಅಜಯ್ ಶಾಸ್ತ್ರಿ, ಸಂದೀಪ್, ಚಕ್ರಪಾಣಿ, ಸಚಿಂದ್ರ, ಆದರ್ಶ್, ಮಹಾನ್ ಶ್ರೇಯಸ್, ಶಿವಲಿಂಗಸ್ವಾಮಿ, ಹಾಗೂ ಇನ್ನಿತರರು ಹಾಜರಿದ್ದರು.

ನ.4, 5 ರಾಜ್ಯ ಮಟ್ಟದ ಅಂಧರ ಟಿ-10 ಕ್ರಿಕೆಟ್ ಪಂದ್ಯಾವಳಿ



ಮೈಸೂರು,ಅ.30(ಎಂಟಿವೈ)- ಮೈಸೂರಿನ ಜೆಎಸ್‌ಎಸ್-ಕೆಎಸ್‌ಸಿಎ ಕ್ರಿಕೆಟ್ ಮೈದಾನ ಹಾಗೂ ರೈಲ್ವೆ ಕ್ರೀಡಾಂಗಣದಲ್ಲಿ ನ.4 ಮತ್ತು 5ರಂದು ರಾಜ್ಯ ಮಟ್ಟದ ಅಂಧರ ಟಿ-10 ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಸಮರ್ಥನಂ ಸಂಸ್ಥೆಯ ಕಾರ್ಯಕ್ರಮ ಮುಖ್ಯಸ್ಥ ಶಿವರಾಮ್ ದೇಶಪಾಂಡೆ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮರ್ಥನಂ ಅಂಗವಿಕಲರ ಸಂಸ್ಥೆ ಹಾಗೂ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಅಂಧರ ಟಿ-10 ಕ್ರಿಕೆಟ್ ಪಂದ್ಯಾವಳಿ ನಡೆಸಲಾಗುತ್ತಿದ್ದು, ನ.4ರಂದು ಬೆಳಗ್ಗೆ 7.30ಕ್ಕೆ ಜೆಎಸ್‌ಎಸ್-ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಭಾರತ ಅಂಧರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ಸಂಸ್ಥೆಯ ಛೇರ್ಮನ್ ಡಾ.ಜಿ.ಕೆ. ಮಹಾಂತೇಶ್, ಸಿಎಬಿಐ ಅಧ್ಯಕ್ಷ ಬಸವೇಗೌಡ, ಮೈಸೂರು ಕಲ್ಯಾಣ ಮಂಟಪಗಳ ಮಾಲೀಕರ ಸಂಘದ ಅಧ್ಯಕ್ಷ ಎಸ್.ಮೂರ್ತಿ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಪಂದ್ಯಾವಳಿಯಲ್ಲಿ 12 ತಂಡಗಳಲ್ಲಿ 180 ಮಂದಿ ಆಟಗಾರರು ಪಾಲ್ಗೊಳ್ಳಲಿದ್ದಾರೆ. ಒಟ್ಟು 15 ಪಂದ್ಯಗಳು ನಡೆಯಲಿವೆ. ಎರಡು ದಿನವೂ ಬೆಳಗ್ಗೆ 8ರಿಂದ ಸಂಜೆ 6ರವರೆಗೆ ಪಂದ್ಯಗಳು ನಡೆಯಲಿವೆ. ಈ ಪಂದ್ಯಾವಳಿಗಳು ಏಳನೇ ಆವೃತ್ತಿಯ ರಾಷ್ಟ್ರೀಯ ಮಟ್ಟದ ನಾಗೇಶ್ ಟ್ರೋಫಿ ಪಂದ್ಯಾವಳಿಯ ರಾಜ್ಯ ಮಟ್ಟದ ಆಯ್ಕೆ ಹಾಗೂ ಪಾಕಿಸ್ತಾನದಲ್ಲಿ ನಡೆಯಲಿರುವ ಅಂಧರ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಯ ರಾಷ್ಟ್ರೀಯ ತಂಡಕ್ಕೆ ಆಯ್ಕೆಗೆ ಅವಕಾಶ ಒದಗಿಸಲಿದೆ ಎಂದರು. ಗೋಷ್ಠಿಯಲ್ಲಿ ಮುಖಂಡರಾದ ಎಸ್.ಮೂರ್ತಿ, ಚಂದ್ರಕಾಂತ್ ಸಿಂಗ್, ಶ್ರೀನಿವಾಸ್, ಜಯಕುಮಾರ್ ಇದ್ದರು.


ವಿವಿಧ ಓಟದ ಸ್ಪರ್ಧೆಯಲ್ಲಿ ವಿಜೇತ



ಮೈಸೂರು,ಅ.30- ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಶಾಲಾ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮೈಸೂರಿನ ಐಡಿಯಲ್ ಜಾವಾ ರೋಟರಿ ಶಾಲಾ ವಿದ್ಯಾರ್ಥಿ ಓಟದ ಮೂರು ವಿಭಾಗದಲ್ಲಿ ಸ್ಪರ್ಧಿಸಿ, ಜಯಗಳಿಸಿದ್ದಾರೆ. ಶಾಲಾ ಶಿಕ್ಷಣ ಇಲಾಖೆ ದೈಹಿಕ ಶಿಕ್ಷಣ ವಿಭಾಗ, ಜಿಲ್ಲಾ ವಿದ್ಯಾರ್ಥಿ ಕ್ರೀಡಾನಿಧಿ ವತಿಯಿಂದ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಶಾಲಾ ಕ್ರೀಡಾ ಸ್ಪರ್ಧೆಯಾದ 200, 400 ಮತ್ತು 600 ಮೀ. ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಅಜಯ್ ಪೃಥ್ವಿರಾಜ್, ಮೂರು ವಿಭಾಗದಲ್ಲೂ ಜಯ ಗಳಿಸಿ, ಪದಕ ಪಡೆದಿದ್ದಾನೆ. ಈತ ಮೈಸೂರಿನ ಗಾಯತ್ರಿಪುರಂನ ನಿವಾಸಿ ಎಂ.ಲಿಂಗರಾಜು (ರಾಜ್ ಬ್ಯಾಗ್ಸ್, ಗಾಯತ್ರಿಪುರಂ) ಹಾಗೂ ಸಂಗೀತಾ ದಂಪತಿ ಪುತ್ರ.

ದೇಶ - ವಿದೇಶ

ಅಯೋಧ್ಯೆಯಲ್ಲಿ ದೀಪಾಲಂಕಾರಕ್ಕೆ ಚೈನೀಸ್ ವಸ್ತು ಬಳಸುವುದಿಲ್ಲ



ಅಯೋಧ್ಯೆ: ಉತ್ತರ ಪ್ರದೇಶದ ಅಯೋಧ್ಯೆಯ ರಾಮ ಮಂದಿರವನ್ನು ನಿರ್ವಹಿಸುತ್ತಿರುವ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್, ಸ್ಥಳೀಯ ಕರಕುಶಲತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಬಾರಿಯ ದೀಪಾವಳಿಯಂದು ನಗರದ ಅಲಂಕಾರಕ್ಕೆ ಚೀನಾ ನಿರ್ಮಿತ ವಸ್ತುಗಳನ್ನು ಬಳಸದಿರಲು ನಿರ್ಧರಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ದೀಪಾವಳಿಯ ಸಮಯದಲ್ಲಿ ಅಲಂಕಾರಕ್ಕಾಗಿ ಸ್ಥಳೀಯ ಕರಕುಶಲತೆ ಮತ್ತು ಸ್ವಾವಲಂಬನೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದ್ದು, 'ವೋಕಲ್ ಫಾರ್ ಲೋಕಲ್' (ಆತ್ಮನಿರ್ಭರ ಭಾರತ)ದ ಕನಸಿಗೆ ಮತ್ತಷ್ಟು ಬಲ ತುಂಬುತ್ತದೆ ಎಂದು ತಿಳಿಸಿದೆ.

ದೀಪೋತ್ಸವ ಕಾರ್ಯಕ್ರಮದ ಭದ್ರತೆ ಕುರಿತಾಗಿ ಮಾಹಿತಿ ನೀಡಿರುವ ಇಲ್ಲಿನ ಪೊಲೀಸ್ ಇಲಾಖೆ ಸುರಕ್ಷತೆ ಕಾಪಾಡಿಕೊಳ್ಳಲು ಸುಮಾರು 10,000 ಭದ್ರತಾ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನಿಯೋಜಿಸಲಾಗುವುದು ಮತ್ತು ಅವರಲ್ಲಿ ಅರ್ಧದಷ್ಟು ಅಧಿಕಾರಿಗಳು ಸಾಮಾನ್ಯ ಬಟ್ಟೆಯಲ್ಲಿರುತ್ತಾರೆ ಎಂದು ತಿಳಿಸಿದೆ.

ಹಿಜ್ಬುಲ್ಲಾ ಕಮಾಂಡರ್ ವಶಕ್ಕೆ ಪಡೆದ ಇಸ್ರೇಲ್ ಸೇನೆ

ಟೆಲ್ ಅವೀವ್: ದಕ್ಷಿಣ ಲೆಬನಾನ್‌ನಲ್ಲಿ ಹಿಜ್ಬುಲ್ಲಾ ವಿರುದ್ಧ ಕಾರ್ಯಾಚರಣೆ ಮುಂದುವರೆಸಿರುವ ಇಸ್ರೇಲ್ ಸೇನೆ ಬುಧವಾರ ಮಹತ್ವದ ಮುನ್ನಡೆ ಸಾಧಿಸಿದ್ದು, ಹಿಜ್ಬುಲ್ಲಾ ಕಮಾಂಡರ್‌ನನ್ನು ವಶಕ್ಕೆ ಪಡೆದಿದೆ. ಎರಡು ವಾರಗಳ ಹಿಂದೆ ದಕ್ಷಿಣ ಲೆಬನಾನ್‌ನಲ್ಲಿನ ಅಯ್ತಾ ಆಶ್-ಶಾಬ್‌ನಲ್ಲಿ ಸೇನಾ ಕಾರ್ಯಾಚರಣೆ ಆರಂಭಿಸಿದ್ದ ಇಸ್ರೇಲ್ ಸೇನೆ ಇದೀಗ ಹಿಜ್ಬುಲ್ಲಾದ ಕಮಾಂಡರ್ ಹಸನ್ ಅಕಿಲ್ ಜವಾದ್‌ನನ್ನು ವಶಕ್ಕೆ ಪಡೆದಿದೆ. ಅಂತೆಯೇ ಇದೇ ಸುರಂಗದಲ್ಲಿ ಹಸನ್ ಅಕಿಲ್ ಜವಾದ್‌ಗೆ ರಕ್ಷಣೆ ನೀಡುತ್ತಿದ್ದ ಬಂಡುಕೋರರನ್ನೂ ಇಸ್ರೇಲ್‌ನ ಗೋಲಾನಿ ಬ್ರಿಗೇಡ್ ಪಡೆಗಳು ವಶಪಡಿಸಿಕೊಂಡಿದೆ. ಗುಪ್ತಚರ ವರದಿಯನ್ನು ಅನುಸರಿಸಿ ಇಸ್ರೇಲ್ ಸೇನೆ ಈ ಕಾರ್ಯಾಚರಣೆ ನಡೆಸಿದ್ದು, ಸೈನಿಕರು ಜವಾದ್ ಮತ್ತು ಇತರ ಕಾರ್ಯಕರ್ತರನ್ನು ಹಿಜ್ಬುಲ್ಲಾ ಕಮಾಂಡ್ ಸೆಂಟರ್‌ನ ಸುರಂಗದಲ್ಲಿ ವಶಕ್ಕೆ ಪಡೆಯುತ್ತಿರುವ ವಿಡಿಯೋವನ್ನು ಅಪ್ಲೋಡ್ ಮಾಡಿದೆ. ಹಿಜ್ಬುಲ್ಲಾ ಆಪರೇಟಿವ್‌ಗಳು ಶರಣಾಗುತ್ತಿರುವುದು ವಿಡಿಯೋದಲ್ಲಿ ದಾಖಲಾಗಿದೆ. ಈ ವೇಳೆ ಗುಪ್ತಚರ ನಿರ್ದೇಶನಾಲಯದ ಘಟಕ 504ರಲ್ಲಿ ವಿಚಾರಣೆಗೊಳಪಡಿಸಿ ಹೆಚ್ಚಿನ ವಿಚಾರಣೆಗಾಗಿ ಇಸ್ರೇಲ್‌ಗೆ ಕರೆತರಲಾಯಿತು. ಅಂತೆಯೇ ದಕ್ಷಿಣ ಲೆಬನಾನ್‌ನಲ್ಲಿ ಇತ್ತೀಚಿನ ಕಾರ್ಯಾಚರಣೆಗಳಲ್ಲಿ ಹಲವಾರು ಇತರ ಹಿಜ್ಬುಲ್ಲಾ ಕಾರ್ಯಕರ್ತರನ್ನು ಸಹ ಬಂಧಿಸಲಾಗಿದೆ.

ದೀಪಾವಳಿ: ಇಂದು ತಿರುಪತಿ ತಿಮ್ಮಪ್ಪನ ದರ್ಶನ ರದ್ದು



ತಿರುಪತಿ: ತಿರುಮಲ ಶ್ರೀವಾರಿ ಭಕ್ತರಿಗೆ ಟಿಟಿಡಿ ಅಲರ್ಟ್ ನೀಡಿದೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ನಾಳೆ 'ದೀಪಾವಳಿ ಆಸ್ಥಾನ' ಆಯೋಜಿಸಲಾಗಿದೆ.

ಈ ಕುರಿತು ತಿರುಮಲ ತಿರುಪತಿ ದೇವಸ್ಥಾನಂ ಪ್ರಕಟಣೆ ಹೊರಡಿಸಿದೆ. ಸುವರ್ಣ ಮುಖಮಂಟಪದ ಮುಂಭಾಗದಲ್ಲಿರುವ ಘಂಟಾ ಮಂಟಪದಲ್ಲಿ ಬೆಳಗ್ಗೆ 7ರಿಂದ 9ರವರೆಗೆ ದೀಪಾವಳಿ ಆಸ್ಥಾನ ನಡೆಯಲಿದೆ. ನಾಳೆ (ಅ.31)ದೀಪಾವಳಿ ಆಸ್ಥಾನದ ಸಮಯದಲ್ಲಿ ತಿರುಮಲ ಬಾಲಾಜಿ ದೇವಸ್ಥಾನಕ್ಕೆ ವೈಯಕ್ತಿಕವಾಗಿ ಬರುವ ಪ್ರೋಟೋಕಾಲ್ ಗಣ್ಯರನ್ನು ಹೊರತುಪಡಿಸಿ ವಿಐಪಿ ಬ್ರೇಕ್ ದರ್ಶನವನ್ನು ಟಿಟಿಡಿ ರದ್ದುಗೊಳಿಸಿದೆ.

ಈ ನಿಟ್ಟಿನಲ್ಲಿ ಅ.30ರಂದು ತಿರುಮಲದಲ್ಲಿ ಶಿಫಾರಸು ಪತ್ರಗಳನ್ನು ಸ್ವೀಕರಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈ ವಿಷಯವನ್ನು ಭಕ್ತರು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಟಿಟಿಡಿ ಮನವಿ ಮಾಡಿದೆ.

15 ವರ್ಷಗಳ ಕಾನೂನು ಹೋರಾಟ, ದಂಪತಿಗೆ 26,172 ಕೋಟಿ ಪರಿಹಾರಕ್ಕೆ ಗೂಗಲ್‌ಗೆ ಆದೇಶ

ಅಮೆರಿಕಾ: 15 ವರ್ಷಗಳ ಕಾನೂನು ಹೋರಾಟದ ನಂತರ, ಗೂಗಲ್ ಒಂದು ಯುಕೆ ದಂಪತಿಗೆ 26,172 ಕೋಟಿ ಪರಿಹಾರವನ್ನು ನೀಡಬೇಕೆಂದು ತೀರ್ಪು ನೀಡಲಾಗಿದೆ. ಯುಕೆ ದಂಪತಿ ಶಿವಾನ್ ಮತ್ತು ಆಡಮ್ ರಾಫ್ ಅವರು ತಮ್ಮ ಉದ್ಯೋಗಗಳನ್ನು ತೊರೆದು 2006ರಲ್ಲಿ 'ಫೌಂಡೆಮ್' (Foundem) ಎಂಬ ಬೆಲೆ ಹೋಲಿಕೆ ವೆಬ್‌ಸೈಟ್ ಅನ್ನು ಪ್ರಾರಂಭಿಸಿದರು. ಆದರೆ ದಂಪತಿ ನಿರೀಕ್ಷಿಸಿದ್ದಕ್ಕಿಂತ ಕಡಿಮೆ ಶ್ರೇಣಿಯನ್ನು ಗೂಗಲ್ ಅವರ ಸೈಟ್‌ಗೆ ನೀಡಿತು. ಇದರಿಂದಾಗಿ ಫೌಂಡೆಮ್‌ನ ಗ್ರಾಹಕರು ಗಣನೀಯವಾಗಿ ಕಡಿಮೆಯಾದರು. ನಂತರ, ದಂಪತಿ 2010ರಲ್ಲಿ ಯುರೋಪಿಯನ್ ಆಯೋಗವನ್ನು ಸಂಪರ್ಕಿಸಿದರು. ಹಲವು ವರ್ಷಗಳ ತನಿಖೆ ನಡೆಯಿತು. ಈ ತನಿಖೆಯಲ್ಲಿ, ಗೂಗಲ್ ತನ್ನ ಸ್ವಂತ ಶಾಪಿಂಗ್ ಸೇವೆಯನ್ನು ಮಾತ್ರ ಪ್ರಚಾರ ಮಾಡುತ್ತಿತ್ತು ಮತ್ತು ಫೌಂಡೆಮ್‌ನಂತಹ ಪ್ರತಿಸ್ಪರ್ಧಿಗಳನ್ನು ನಿರ್ಲಕ್ಷಿಸುತ್ತಿತ್ತು ಎಂದು ಕಂಡುಬಂದಿದೆ. 2017ರಲ್ಲಿ ಆಯೋಗವು ಗೂಗಲ್ ತನ್ನ ಮಾರುಕಟ್ಟೆ ಪ್ರಾಬಲ್ಯವನ್ನು ದುರುಪಯೋಗಪಡಿಸಿಕೊಂಡಿದೆ ಎಂದು ಹೇಳಿ 2.4 ಬಿಲಿಯನ್ ಪೌಂಡ್‌ಗಳ ದಂಡವನ್ನು ವಿಧಿಸಿತು. ಇದನ್ನು ಪ್ರಶ್ನಿಸಿ ಗೂಗಲ್ ಮೇಲ್ಮನವಿ ಸಲ್ಲಿಸಿತು.

ಆಗಸದಲ್ಲೇ ಮತ್ತೊಂದು ಪ್ಯಾರಾಗ್ಲೈಡರ್‌ಗೆ ಡಿಕ್ಕಿ; ಬೆಲ್ಜಿಯಂ ಪ್ಯಾರಾಗ್ಲೈಡರ್ ಸಾವು



ಹಿಮಾಚಲ ಪ್ರದೇಶ: ಹಿಮಾಚಲ ಪ್ರದೇಶದ ಬಿರ್-ಬಿಲ್ಲಿಂಗ್‌ನಲ್ಲಿ ಗಾಳಿಯಲ್ಲಿ ಮತ್ತೊಂದು ಪ್ಯಾರಾಗ್ಲೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೆಲ್ಜಿಯಂನ ಪ್ಯಾರಾಗ್ಲೈಡರ್ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಎರಡೂ ಪ್ಯಾರಾಗ್ಲೈಡರ್‌ಗಳು ಪ್ರತ್ಯೇಕವಾಗಿ ಗಾಳಿಯಲ್ಲಿ ಹಾರುತ್ತಿದ್ದಾಗ ಈ ಘಟನೆ ಸಂಭವಿಸಿದೆ.

ಗಾಯಗೊಂಡಿರುವ ಮತ್ತೊಬ್ಬ ಪ್ಯಾರಾಗ್ಲೈಡರ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆತನ ಪ್ರಾಣಕ್ಕೆ ಅಪಾಯವಿಲ್ಲ. ಪೊಲೀಸರ ಪ್ರಕಾರ, ಡಿಕ್ಕಿ ನಂತರ ಬೀಳುವ ಸಂದರ್ಭದಲ್ಲಿ ಪ್ಯಾರಾಗ್ಲೈಡರ್ ಮರಗಳಿಗೆ ಸಿಕ್ಕಿಹಾಕಿಕೊಂಡಿದೆ. ಫೆಯ ರೆಟ್ಸ್‌ನ ಮೃತದೇಹವನ್ನು ಗುರುತಿಸಲಾಗಿದೆ. ಆದರೆ ಇನ್ನೂ ಅರಣ್ಯದಿಂದ ವಶಪಡಿಸಿಕೊಳ್ಳಲಾಗಿಲ್ಲ. ಗಾಯಗೊಂಡಿರುವ ಪ್ಯಾರಾಗ್ಲೈಡರ್ ಯಾವ ದೇಶದವರು ಎಂಬುದು ಇನ್ನೂ ತಿಳಿದುಬಂದಿಲ್ಲ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಬಿರ್-ಬಿಲ್ಲಿಂಗ್ ಕಣಿವೆಯಲ್ಲಿ ಇಂತಹ ಘಟನೆ ನಡೆಯುತ್ತಿರುವುದು ಇದೇ ಮೊದಲಲ್ಲ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಪೊಲೀಸ್ ಪ್ಯಾರಾಗ್ಲೈಡರ್ ಆಂಡ್ರೆಜ್ ಬಿರ್-ಬಿಲ್ಲಿಂಗ್‌ನಲ್ಲಿ ಪ್ಯಾರಾಗ್ಲೈಡಿಂಗ್ ಮಾಡುವಾಗ ಸಾವನ್ನಪ್ಪಿದ್ದರು ಎಂದು ಕಾಂಗ್ರಾ ಪೊಲೀಸ್ ವರಿಷ್ಠಾಧಿಕಾರಿ ಶಾಲಿನಿ ಅಗ್ನಿಹೋತ್ರಿ ತಿಳಿಸಿದ್ದಾರೆ.

ಪುರಸಭೆ ಕಟ್ಟಡ ನಿರ್ಮಾಣಕ್ಕೆ 7.50 ಕೋಟಿ ಮಂಜೂರು

● ನೂತನ ಮಳಿಗೆಗೆ 2.50 ಕೋಟಿ ಪ್ರಸ್ತಾವನೆ ● ಸಭೆಯಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಮಾಹಿತಿ



ವಿರಾಜಪೇಟೆ ಪುರಸಭೆ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ನಡೆಯಿತು. ಶಾಸಕ ಪೊನ್ನಣ್ಣ ಇದ್ದರು.

ವಿರಾಜಪೇಟೆ, ಅ.30–ಪುರಸಭೆ ನೂತನ ಕಟ್ಟಡ ನಿರ್ಮಾಣಕ್ಕೆ 7.50 ಕೋಟಿ ರೂ. ಅನುದಾನ ಮಂಜೂರಾಗಿದೆ ಶಾಸಕ ಎಂದು ಎ.ಎಸ್.ಪೊನ್ನಣ್ಣ ತಿಳಿಸಿದರು.

ಪುರಸಭೆ ಕಚೇರಿಯ ಸಭಾಂಗಣದಲ್ಲಿ ಬುಧವಾರ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣದ ಖಾಸಗಿ ಬಸ್ ನಿಲ್ದಾಣ ಬಳಿಯ ಮಾರುಕಟ್ಟೆ ನೂತನ ಮಳಿಗೆಗಳ ನಿರ್ಮಾಣಕ್ಕೆ 2.50 ಕೋಟಿ ರೂ. ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅನುದಾನ ಬಿಡುಗಡೆಯಾದ ನಂತರ ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದು. ಮಾರುಕಟ್ಟೆಯ 10 ವಾಣಿಜ್ಯ ಸಂಕೀರ್ಣಗಳನ್ನು ಬಹಿರಂಗ ಹರಾಜು ಮಾಡಲಾಗಿದೆ. ಆದರೆ, ಮೂಲಸೌಕರ್ಯಗಳ ಕೊರತೆ ಕಾರಣ ವರ್ತಕರು ಬಳಸುತ್ತಿಲ್ಲ. ಆದ್ದರಿಂದ ಮರುಹರಾಜು ಮಾಡಿ, ಹಿಂದಿನ ವರ್ತಕರಿಗೆ ಠೇವಣಿ ಹಣವನ್ನು ವಾಪಸ್ ನೀಡುವಂತೆ ತಿಳಿಸಿದರು.

ಸದಸ್ಯ ಎಸ್.ಹೆಚ್.ಮತೀನ್ ಮಾತನಾಡಿ, ಖಾಸಗಿ ಬಸ್ ನಿಲ್ದಾಣದ ಶೌಚಾಲಯ ತೀರಾ ದುಸ್ಥಿತಿಯಲ್ಲಿದೆ. ಗುತ್ತಿಗೆದಾರ ಶೌಚಾಲಯ ನೀರನ್ನು ನೇರವಾಗಿ ಚರಂಡಿಗೆ ಬಿಡುತ್ತಿದ್ದು, ಇದರಿಂದ ಸೂಕ್ತ ನಿರ್ವಹಣೆ ಇಲ್ಲದಂತಾಗಿದೆ. ಈ ಶೌಚಾಲಯದ ಗುತ್ತಿಗೆ ರದ್ದತಿಗೆ 5 ವರ್ಷ ಹಿಂದೆಯೇ ನ್ಯಾಯಾಲಯ ಸೂಚಿಸಿದ್ದರು ಕ್ರಮ ಕೈಗೊಂಡಿಲ್ಲ ಎಂದು ದೂರಿದರು. ನಂತರ ಮಾತನಾಡಿದ ಶಾಸಕರು, ಪುರಸಭೆ ಅಧಿಕಾರಿಗಳು ತಕ್ಷಣ ಮರು ಟೆಂಡರ್ ಕರೆದು ಸ್ವಚ್ಛತೆ ಕಾಪಾಡುವಂತೆ ಸೂಚಿಸಿದರು.

ಸದಸ್ಯ ಡಿ.ಪಿ.ರಾಜೇಶ್ ಮಾತನಾಡಿ, ಪಟ್ಟಣದ ರಸ್ತೆಗಳಲ್ಲಿ ಸೋಡಿಯಂ ಬೀದಿ ದೀಪಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಬೆಳಕು ಬರುತ್ತಿಲ್ಲ. ಎಲ್ಇಡಿ ದೀಪಗಳು ಹೆಚ್ಚು ಕಾಲ ಬಾಳಿಕೆ ಬರುತ್ತಿಲ್ಲ. ಗುತ್ತಿಗೆದಾರ ಶ್ರೀನಿವಾಸ್ ಅವರನ್ನು ವಿಚಾರಿಸಿದರೆ, ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೇ ವೇಳೆ ಸೆಸ್ಕ್ ಸಹಾಯಕ ಕಾರ್ಯಪಾಲಕ ಅಭಿಯಂತರ ಸುರೇಶ್ ಅವರಿಂದ ಮಾಹಿತಿ ಪಡೆದ ಶಾಸಕರು, ಹಿಂದಿನ ಸಭೆಯಲ್ಲಿ ಪುರಸಭೆ ಆಡಳಿತಾಧಿಕಾರಿ ಆದ ಉಪವಿಭಾಗಾಧಿಕಾರಿ ಬೀದಿ ದೀಪವನ್ನು ಸೂಕ್ತ ರೀತಿ ನಿರ್ವಹಿಸುವಂತೆ ಸೂಚಿಸಿದ್ದರು. ಆದರೂ ಸರಿಪಡಿಸಿಲ್ಲ. ಬೀದಿ ದೀಪಗಳ ನಿರ್ವಹಣೆಗೆ ತಕ್ಷಣ ಮರು ಟೆಂಡರ್ ಕರೆಯುವಂತೆ ಸೆಸ್ಕ್ ಅಧಿಕಾರಿಗಳಿಗೆ ಸೂಚಿಸಿದರು.

ಸದಸ್ಯ ಸಿ.ಕೆ.ಪೃಥ್ವಿನಾಥ್ ಮಾತನಾಡಿ, ಪುರಸಭೆ ಕಸ ವಿಲೇವಾರಿ ಘಟಕದ ಕಾಮಗಾರಿ ಹೆಸರಲ್ಲಿ ಸಾಕಷ್ಟು ಅವ್ಯಾವಹಾರ ನಡೆದಿದೆ. ಪುರಸಭೆಗೆ ಸೇರಿದ ಜೆಸಿಬಿಯನ್ನು ರಿಪೇರಿ ಮಾಡದೆ, ಮೂಲೆಗೆ ಹಾಕಲಾಗಿದೆ. ಇದರಿಂದ ಖಾಸಗಿ ಜೆಸಿಬಿಗಳಿಗೆ ಲಕ್ಷಾಂತರ ರೂ. ಬಾಡಿಗೆ ನೀಡಲಾಗುತ್ತಿದೆ. ಆದ್ದರಿಂದ ನೂತನ ಜೆಸಿಬಿ ಖರೀದಿಸಿದರೆ, ಪುರಸಭೆ ಇತರೆ ಅಭಿವೃದ್ಧಿ ಕೆಲಸಗಳಿಗೆ ಹಣ ಉಳಿಯುತ್ತದೆ ಎಂದರು.

6 ತಿಂಗಳ ಲೆಕ್ಕದಲ್ಲಿ ಜೆಸಿಬಿಗೆ ಕಾಲುವೆ ಹೂಳೆತ್ತುವ ಕೆಲಸಕ್ಕೆ ಆಡಳಿತಾಧಿಕಾರಿ ಅವಧಿಯಲ್ಲಿ ಲಕ್ಷಾಂತರ ರೂ. ವ್ಯಯ ಮಾಡಲಾಗಿದೆ ಎಂದರು. ನಂತರ ಮಾತನಾಡಿದ ಅಧ್ಯಕ್ಷೆ ದೇಚಮ್ಮ, ಜೆಸಿಬಿ ವೆಚ್ಚದ ಲೆಕ್ಕಪತ್ರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ತಿಳಿಸಿದರು.

ಸಭೆ ಆರಂಭದಲ್ಲಿ ಶಿವಕೇರಿ ವಾರ್ಡ್ ಸದಸ್ಯೆ ಪೂರ್ಣಿಮಾ ಮಾತನಾಡಿ, ತಮ್ಮ ವಾರ್ಡ್‌ನಲ್ಲಿ ವಸತಿಗೃಹಕ್ಕೆ ಪರವಾನಿಗೆ ಪಡೆದು ವೃದ್ಧಾಶ್ರಮದ ಹೆಸರಿನಲ್ಲಿ ಅನೈತಿಕ ಚಟುವಟಿಕೆ ನಡೆಸಲಾಗುತ್ತಿದೆ ಎಂಬ ಆರೋಪಿಸಿದರು. ಇದ್ದಕ್ಕೆ ಉತ್ತರಿಸಿದ ಮುಖ್ಯಾಧಿಕಾರಿ ಚಂದ್ರಕುಮಾರ್, ಪರವಾನಿಗೆ ನಿಯಮ ಪಾಲಿಸಿಲ್ಲ. ಈ ನಿಟ್ಟಿನಲ್ಲಿ ಪೊಲೀಸರು ವೃದ್ಧಾಶ್ರಮವನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿರುವುದಾಗಿ ತಿಳಿಸಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಫಸಿಹಾ ತಬಸುಂ, ಸದಸ್ಯರಾದ ರಂಜಿ ಪೂಣಚ್ಚ, ಅಗಸ್ಟಿನ್ ಬೆನ್ನಿ, ಆಶಾ ಸುಬ್ಬಯ್ಯ, ಅನೀತಾ, ಜಿ.ಜಿ.ಮೋಹನ್, ಪರಿಸರ ಅಭಿಯಂತರ ನೀತುಸಿಂಗ್, ಇಂಜಿನಿಯರ್ ರಾಮಚಂದ್ರ, ಶಬರೀಶ್ ಶೆಟ್ಟಿ, ಮಹ್ಮದ್ ರಾಫಿ, ರಜನಿ ಕಾಂತ್ ಹಾಜರಿದ್ದರು.

ಕೊಡಗು ಮೂಲದ ಪದ್ಮಾಶೇಖರ್‌ಗೆ ರಾಜ್ಯೋತ್ಸವ ಪ್ರಶಸ್ತಿ



ಪ್ರೊ.ಪದ್ಮಾಶೇಖರ್

ಮಡಿಕೇರಿ, ಅ.30–ರಾಜ್ಯ ಸರ್ಕಾರ ನೀಡುವ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಗೆ ಸಾಹಿತಿ, ಶಿಕ್ಷಣ ತಜ್ಞರು, ಸಂಶೋಧಕರು ಹಾಗೂ ವಿಶ್ರಾಂತ ಕುಲಪತಿ ಕೊಡಗು ಮೂಲದ ಪ್ರೊ.ಪದ್ಮಾಶೇಖರ್ ಭಾಜನರಾಗಿದ್ದಾರೆ.

ಮೂಲತಃ ಕುಶಾಲನಗರ ತಾಲೂಕಿನ ತೊರೆನೂರು ಗ್ರಾಮದವರಾದ ಪ್ರೊ.ಪದ್ಮಾಶೇಖರ್, ಬೆಂಗಳೂರಿನ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿಗಳಾಗಿದ್ದಾರೆ. ಸಾಹಿತ್ಯ, ಸಂಶೋಧನೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿರುವ ಪದ್ಮಾಶೇಖರ್, ಮೈಸೂರು ವಿವಿಯಲ್ಲಿ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದ ಪ್ರಾಧ್ಯಾಪಕರಾಗಿ ಹಾಗೂ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಮೈಸೂರು ವಿವಿ ಮಹಿಳಾ ಅಧ್ಯಯನ ನಿರ್ದೇಶಕರು, ಮೈಸೂರು ವಿವಿ ಕ್ರೈಸ್ತಶಾಸ್ತ್ರ ವಿಭಾಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಶೈಕ್ಷಣಿಕ ಕಾರ್ಯಚಟುವಟಿಕೆಗಳೊಂದಿಗೆ ಜೀವನ ಚರಿತ್ರೆ ವಿಮರ್ಶೆ, ಸಂಶೋಧನಾ ಕ್ಷೇತ್ರಗಳಲ್ಲಿ ಆಳವಾಗಿ ತೊಡಗಿಸಿಕೊಂಡಿದ್ದಾರೆ. ಜೈನಶಾಸ್ತ್ರ, ಕನ್ನಡ ಮತ್ತು ಪ್ರಾಕೃತ ಸಂಬಂಧಗಳು, ಕನ್ನಡ ಛಂದಸ್ಸುಗಳ ಬಗ್ಗೆ ಅಪಾರ ಅಧ್ಯಯನ ನಡೆಸಿ ಸಂಶೋಧನಾ ಗ್ರಂಥಗಳನ್ನು ಹೊರ ತಂದಿದ್ದಾರೆ. ಇವುಗಳೊಂದಿಗೆ ಹಕ್ಕಿಯ ಹರಯ, ಉರಿಯ ಚಪ್ಪರ ಎನ್ನುವ ಕವನ ಸಂಕಲನ ಹೊರ ತಂದಿರುವುದು ವಿಶೇಷವಾಗಿದೆ.

ಪದ್ಮಶೇಖರ್ ಸಂಶೋಧನೆ, ಸಾಹಿತ್ಯ ಕೃಷಿಗಾಗಿ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದು, ಪ್ರಮುಖವಾಗಿ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ, ಶ್ರೀ ಚೌಡಯ್ಯ ಸಾಹಿತ್ಯ ಪ್ರಶಸ್ತಿ ಒಳಗೊಂಡಂತೆ 18 ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಪ್ರಸ್ತುತ ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ 'ಪ್ರೀತಿ' ನಿಲಯದಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದು, ಇವರ ಅಪ್ರತಿಮ ಸೇವೆ ಪರಿಗಣಿಸಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸುತ್ತಿದೆ.

ಸರ್ಕಾರಕ್ಕೆ ಕೃತಜ್ಞತೆ: ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗೆ ಪ್ರಶಸ್ತಿಗಳು ಲಭಿಸಿದೆ. ಆದರೆ, ನನ್ನ ಒಲುವಿನ ಶಿಕ್ಷಣ ಕ್ಷೇತ್ರಕ್ಕೆ ಇದೀಗ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದು ಹೆಮ್ಮೆ ಮತ್ತು ಸಂತೋಷ ಮೂಡಿಸಿದೆ ಎಂದು ಪ್ರೊ.ಪದ್ಮಾಶೇಖರ್ ತಿಳಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ 40 ವರ್ಷ ಸೇವೆ ಸಲ್ಲಿಸಿದ್ದು, ಮೈಸೂರು ಸಂಸ್ಕೃತ ವಿವಿ ಕಟ್ಟಡ, ಜೈನ ಶಾಸ್ತ್ರ ವಿಭಾಗಕ್ಕೆ ಕಟ್ಟಡಗಳನ್ನು ನನ್ನ ಅವಧಿಯಲ್ಲಿ ನಿರ್ಮಿಸಲಾಗಿದೆ. ಈ ಎಲ್ಲಾ ವಿಚಾರಗಳನ್ನು ಕೂಡ ರಾಜ್ಯ ಸರ್ಕಾರ ಗಮನಿಸಿದೆ. ತೊರೆನೂರು ಕುಗ್ರಾಮದಿಂದ ಸಂಪ್ರದಾಯದ ಕುಟುಂಬ ಮೂಲಕ ಪ್ರೊ.ಹಂತಕ್ಕೆ ಬೆಳೆಸಿದ ಎಲ್ಲರನ್ನೂ ಇಂದು ಸ್ಮರಿಸುತ್ತೇನೆ. ವಿಶೇಷವಾಗಿ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಸರ್ಕಾರಕ್ಕೂ ಕೃತಜ್ಞತೆ ಸಲ್ಲಿಸುತ್ತೇನೆ. ನಾನು ಕೊಡಗಿನ ವಿರಾಜಪೇಟೆಯಲ್ಲಿ ಜನಿಸಿದ್ದು, ಬಾಲ್ಯವನ್ನು ಅಲ್ಲೇ ಕಳೆದಿದ್ದೇನೆ. 11ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯನ್ನೂ ವಹಿಸಿದ್ದೆ ಎಂದು ತಮ್ಮ ನೆನಪುಗಳನ್ನು ತಿಳಿಸಿದರು.

ಮಡಿಕೇರಿಯಲ್ಲಿ ಭ್ರಷ್ಟಾಚಾರ ವಿರುದ್ಧ ಜಾಗೃತಿ



ಮಡಿಕೇರಿ: ಕರ್ನಾಟಕ ಲೋಕಾಯುಕ್ತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮೂರ್ನಾಡು ಗ್ರಾಪಂ ಸಹಯೋಗದೊಂದಿಗೆ ಮೂರ್ನಾಡು ಸಮುದಾಯ ಭವನದಲ್ಲಿ ರಾಷ್ಟ್ರದ ಏಳಿಗೆಗೆ ಸಮಗ್ರತೆಯ ಸಂಸ್ಕೃತಿ ಶೀರ್ಷಿಕೆಯಡಿ ಭ್ರಷ್ಟಾಚಾರದ ವಿರುದ್ಧ ಜಾಗೃತಿ ಕಾರ್ಯಕ್ರಮ ನಡೆಯಿತು.

ಇದೇ ವೇಳೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಶಾಸ್ತ್ರಿ ನಗರ ಮತ್ತು ಕಬಡಗಿರಿ ಅಂಗನವಾಡಿ ಕೇಂದ್ರಗಳಿಗೆ ನ್ಯಾಯಾಧೀಶರು ಮತ್ತು ಲೋಕಾಯುಕ್ತರು ಭೇಟಿ ನೀಡಿ ಪರಿಶೀಲಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಶುಭ, ಲೋಕಾಯುಕ್ತ ಉಪ ಅಧೀಕ್ಷಕ ಅಧಿಕಾರಿ ಕೆ.ಸಿ.ಪ್ರಕಾಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರಾದ ನಟರಾಜು, ಮೇಪಾಡಾಂಡ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸವಿತಾ ಕೀರ್ತನ್, ಮೂರ್ನಾಡು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ.ವಿಜಯ ಕುಮಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಭೆ ಬಹಿಷ್ಕರಿಸಿದ ಗ್ರಾಪಂ ಸದಸ್ಯರು

ಸುಂಟಿಕೊಪ್ಪ: ಸುಂಟಿಕೊಪ್ಪ ಗ್ರಾಪಂ ಪಿಡಿಓ ನಡೆ ಖಂಡಿಸಿ, ಕೆಲ ಸದಸ್ಯರು ಸಾಮಾನ್ಯ ಸಭೆ ಬಹಿಷ್ಕರಿಸಿ ಹೊರ ನಡೆದರು. ಅಧ್ಯಕ್ಷ ಪಿ.ಆರ್.ಸುನಿಲ್‌ಕುಮಾರ್ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಸದಸ್ಯ ಜಿನಾಸುದ್ದೀನ್ ಮಾತನಾಡಿ, ಅಯ್ಯಪ್ಪಸ್ವಾಮಿ ದೇವಸ್ಥಾನ ಬಳಿ ನೂತನವಾಗಿ ಖಾಸಗಿ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದೆ. ಆದರೆ, ಪಂಚಾಯಿತಿಯಿಂದ ನೀಡುವ ಅನುಮತಿ (ಎನ್‌ಓಸಿ) ಪತ್ರವನ್ನು ಪಡೆದುಕೊಂಡಿದ್ದಾರಾ ಎಂದು ಪ್ರಶ್ನಿಸಿ, ಕಡತ ನೀಡುವಂತೆ ಕೋರಿದರು. ಆದರೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಡತ ನೀಡಲು ನಿರಾಕರಿಸಿದ ಹಿನ್ನೆಲೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿ, ಹೊರ ನಡೆದರು.

ಬಳಿಕ ಉಪಾಧ್ಯಕ್ಷೆ ಶಿವಮ್ಮ, ಸದಸ್ಯರಾದ ಶಬ್ಬೀರ್, ಸೋಮನಾಥ್, ಅಲಿಕುಟ್ಟಿ, ರಫೀಕ್ ಖಾನ್, ನಾಗರತ್ನ, ಮಂಗಳಮ್ಮ, ಅಸೀನ ಹಾಗೂ ರೇಷ್ಮ ಪಂಚಾಯಿತಿ ಮುಂಭಾಗ ಧರಣಿ ನಡೆಸಿ ಪಿಡಿಓ ವಿರುದ್ಧ ಘೋಷಣೆ ಕೂಗಿದರು.



ಸುಂಟಿಕೊಪ್ಪ ಗ್ರಾಪಂ ಪಿಡಿಓ ನಡೆ ಖಂಡಿಸಿ, ಸದಸ್ಯರು ಸಾಮಾನ್ಯ ಸಭೆ ಬಹಿಷ್ಕರಿಸಿ ಪ್ರತಿಭಟನೆ ನಡೆದರು.

ಜಿಮ್ಮಿ ಅಣ್ಣಯ್ಯಗೆ ಸುವರ್ಣ ಮಹೋತ್ಸವ ಪ್ರಶಸ್ತಿ




ಕಾಟಿಮಡ ಜಿಮ್ಮಿ ಅಣ್ಣಯ್ಯ

ಮಡಿಕೇರಿ: ಕರ್ನಾಟಕ ಸಂಭ್ರಮ–50 ಅಭಿಯಾನದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವ್ಯಕ್ತಿಗಳಿಗೆ ರಾಜ್ಯ ಸರ್ಕಾರ ನೀಡುವ ಸುವರ್ಣ ಮಹೋತ್ಸವ ಪ್ರಶಸ್ತಿಗೆ ರಾಷ್ಟ್ರೀಯ ಹಿರಿಯ ಕ್ರೀಡಾಪಟು ಕೊಡಗಿನ ಕಾಟಿಮಡ ಜಿಮ್ಮಿ ಅಣ್ಣಯ್ಯ ಭಾಜನರಾಗಿದ್ದಾರೆ.

ಕಾಟಿಮಾಡ ಜಿಮ್ಮಿ ಅಣ್ಣಯ್ಯ, ಪೊನ್ನಂಪೇಟೆಯ ಹಿರಿಯ ಸಮಾಜ ಸೇವಕರು, ಕಿಗ್ಗಟ್‌ನಾಡ್ ಹಿರಿಯ ನಾಗರಿಕ ವೇದಿಕೆಯ ಸಂಸ್ಥಾಪಕರಾಗಿದ್ದಾರೆ. ರಾಷ್ಟ್ರೀಯ ಕ್ರೀಡಾಪಟುಗಳಾಗಿದ್ದ ಕಾಟಿಮಡ ಜಿಮ್ಮಿ ಅಣ್ಣಯ್ಯ ಅವರಿಗೆ ಸುವರ್ಣ ಮಹೋತ್ಸವ ಪ್ರಶಸ್ತಿ ಲಭಿಸಿದೆ.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 50 ಪುರುಷ ಸಾಧಕರನ್ನು ಸರ್ಕಾರ ಪ್ರಶಸ್ತಿಗೆ ಪರಿಗಣಿಸಿದ್ದು, ಈ ಪೈಕಿ ಕ್ರೀಡಾ ಕ್ಷೇತ್ರದಲ್ಲಿ ಛಾಪು ಮೂಡಿಸಿದ್ದ ಕಾಟಿಮಡ ಜಿಮ್ಮಿ ಅಣ್ಣಯ್ಯ ಪ್ರಶಸ್ತಿಗೆ ಭಾಜನರಾಗಿರುವುದು ಕೊಡಗಿಗೆ ಕೀರ್ತಿ ತಂದಿದೆ.

ರಾಮಣ್ಣ ಪೂಜಾರಿ ನಿಧನ



ನಾಪೋಕ್ಲು, ಅ.30– ಸಮೀಪದ ಕೂರುಳಿ ಸುಭಾಷ್ ನಗರದ ರಾಮಣ್ಣ ಪೂಜಾರಿ (81) ಮಂಗಳವಾರ ನಿಧನರಾದರು.

ಮೃತರು ಪತ್ನಿ ಗಿರಿಜಾ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಪೋಕ್ಲು ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಅಭಿವೃದ್ಧಿಗೆ ಶೈಕ್ಷಣಿಕ ಮೇಳ ಸಹಕಾರಿ



ಮರಿಯಾಲದ ಮುರುಘರಾಜೇಂದ್ರ ಸಿಬಿಎಸ್‌ಇ ಶಾಲೆಯಲ್ಲಿ ನಡೆದ ಶೈಕ್ಷಣಿಕ ಮೇಳಕ್ಕೆ ಶ್ರೀ ಇಮ್ಮಡಿ ಮುರುಘರಾಜೇಂದ್ರಸ್ವಾಮೀಜಿ ಚಾಲನೆ ನೀಡಿದರು.

ಚಾಮರಾಜನಗರ, ಅ.30–ಮಕ್ಕಳ ಕಲಿಕೆ ಜೊತೆಗೆ ಶಿಕ್ಷಣಕ್ಕೆ ಪೂರಕ ಮಾದರಿಗಳ ರಚನೆಯಿಂದ ಬುದ್ಧಿಶಕ್ತಿ ವೃದ್ಧಿ ಜೊತೆಗೆ ಸರ್ವತೋಮುಖ ಅಭಿವೃದ್ಧಿಗೆ ಶೈಕ್ಷಣಿಕ ಮೇಳ ಸಹಕಾರಿಯಾಗಿದೆ ಎಂದು ಶ್ರೀ ಮುರುಘರಾಜೇಂದ್ರ ವಿದ್ಯಾಸಂಸ್ಥೆ ಅಧ್ಯಕ್ಷ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ತಿಳಿಸಿದರು.

ಸಮೀಪದ ಮರಿಯಾಲದಲ್ಲಿ ಮುರುಘರಾಜೇಂದ್ರಸ್ವಾಮಿ ಸಿಬಿಎಸ್‌ಇ ಶಾಲೆಯಲ್ಲಿ ನಡೆದ ಶೈಕ್ಷಣಿಕ ಮೇಳ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತ ನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಹುಟ್ಟುತ್ತಾಲೇ ಐಕ್ಯೂ ಪವರ್ ಹೆಚ್ಚಾಗಿದೆ. ಹೀಗಾಗಿ ನರ್ಸರಿ ಹಂತದಲ್ಲೇ ಮಕ್ಕಳು ಚುರುಕಾಗಿರುತ್ತವೆ. ಪೋಷಕರು ಮಕ್ಕಳ ಶಿಕ್ಷಣಕ್ಕೆ ಇನ್ನು ಹೆಚ್ಚಿನ ಒತ್ತು ನೀಡಿದರೆ ಪ್ರತಿಭಾವಂತರಾಗುತ್ತಾರೆ. ಮುಂದೆ ಸಮಾಜದ ಆಸ್ತಿಯಾಗುತ್ತಾರೆ ಎಂದರು.

ಮಕ್ಕಳೇ ತಯಾರು ಮಾಡಿರುವ ವಿವಿಧ ಮಾದರಿಗಳನ್ನು ವೀಕ್ಷಣೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಗಳು, ಬೆಳೆಯುವ ಪೈರು ಮೊಳಕೆಯಲ್ಲೇ ನೋಡಾ ಎಂಬ ನಾಣ್ನುಡಿಯಂತೆ ಮಕ್ಕಳ ಚಿಕ್ಕ ವಯಸ್ಸಿನಲ್ಲೇ ಕಲಿಕೆ ಜ್ಞಾನ ಉತ್ತಮವಾಗಿರುತ್ತದೆ. ಈ ನಿಟ್ಟಿನಲ್ಲಿ ಮಕ್ಕಳು ತಯಾರಿಸಿರುವ ಎಲ್ಲಾ ಮಾದರಿಗಳು ಉತ್ತಮವಾಗಿವೆ. ಶಿಕ್ಷಕರು ಸಹ ಇಂಥ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಬೇಕು. ಸಂಸ್ಥೆ ಹಾಗೂ ಶಾಲೆಗೆ ಒಳ್ಳೆಯ ಹೆಸರು ತರಬೇಕು. ಇನ್ನು ಹೆಚ್ಚಿನ ರೀತಿಯಲ್ಲಿ ನಿಮ್ಮೆಲ್ಲರ ಕಲಿಕಾ ಪ್ರಗತಿ ವೃದ್ಧಿಯಾಗಲಿ ಎಂದು ಆಶಿಸಿದರು.

ವಿದ್ಯಾರ್ಥಿಗಳು ಆಂಗ್ಲ ಭಾಷೆ, ಕನ್ನಡ, ಗಣಿತ, ಸಮಾಜ ವಿಜ್ಞಾನ, ವಿಜ್ಞಾನ, ಹಿಂದಿ, ಕಂಪ್ಯೂಟರ್, ಕ್ರೀಡೆ, ಆರ್ಟ್ ಮತ್ತು ಕ್ರಾಫ್ಟ್ ಸೇರಿದಂತೆ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟ ಮಾದರಿಗಳನ್ನು ತಯಾರು ಮಾಡಿದ್ದು, ಎಲ್ಲವನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಶೈಕ್ಷಣಿಕ ಮೇಳ ವೀಕ್ಷಣೆ ಮಾಡಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಹೆಚ್.ಎಂ.ಗಿರೀಶ್, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಎಲೆಮರೆ ಕಾಯಿ ಸೊಪ್ಪಿನ ಪುಟ್ಟೀರಮ್ಮಗೆ ರಾಜ್ಯೋತ್ಸವ ಪ್ರಶಸ್ತಿ

ಪುಟ್ಟೀರಮ್ಮ ಜ್ಞಾನದ ಬುಟ್ಟಿಯಲ್ಲಿ ನೂರಾರು ಸೊಪ್ಪುಗಳ ಮಾಹಿತಿ

ಚಾಮರಾಜನಗರ, ಅ.30–ಮಿಶ್ರ ಬೆಳೆ ಪದ್ಧತಿ, ಸೊಪ್ಪುಗಳ ಬಗ್ಗೆ ಅಗಾಧ ಜ್ಞಾನ ಹೊಂದಿರುವ ತಾಲೂಕಿನ ಪಣ್ಯದಹುಂಡಿ ಗ್ರಾಮದ ರೈತ ಮಹಿಳೆ ಪುಟ್ಟೀರಮ್ಮ ರಾಜ್ಯಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪುಟ್ಟೀರಮ್ಮ 60ಕ್ಕೂ ಹೆಚ್ಚು ಆರೋಗ್ಯದಾಯಕ ಬೆರಕೆ ಸೊಪ್ಪು ಹಾಗೂ ಅವುಗಳ ಔಷಧ ಗುಣಗಳ ಮಾಹಿತಿ ನೀಡುತ್ತಾರೆ. ಜಾನಪದ ಗೀತೆಗಳಂತೆ ಸೊಪ್ಪುಗಳ ಹಾಡು ಹಾಡುತ್ತಾರೆ. ಹರಳು ಹುರಿದಂತೆ, ಸಾರು ಸೊಪ್ಪುಗಳ ಹೆಸರನ್ನು ಹೇಳುತ್ತಾರೆ. ರಸ್ತೆಬದಿ, ಜಮೀನಿನಲ್ಲಿ ಬೆಳೆಯುವ ಇವುಗಳನ್ನು ಗುರುತಿಸಿ ಬೇರೆಯವರಿಗೂ ಸೊಪ್ಪಿನ ಮಾಹಿತಿ ತಿಳಿಸುತ್ತಿದ್ದಾರೆ.

ನಮ್ಮ ಸುತ್ತಮುತ್ತ ಬೆಳೆಯುವ ಗಣಿಕೆ, ಪಸರೆ, ಗುಳ್ಸುಂಡೆ, ಮಳ್ಳಿ, ಹಾಲೆ, ಜವನ, ಅಣ್ಣೆ, ಗುರುಜೆ, ಕಲ್ಲು ಗುರುಜೆ, ಹಿಟ್ಟಿನ ಕುಡಿ, ಕರಿಕಡ್ಡಿ, ಅಡಕ ಪುಟ್ಟ, ಕೊಟ್ಟನ ಗುರುಜೆ, ಸಾರಿನ ಸೀಗೆಕುಡಿ, ತಡಗುಣಿ ಚಿಗುರು, ನಲ್ಲಿಕುಡಿ ಚಿಗುರು, ಹೊನಗಾಲ, ಹೊನಗೊನೆ, ಕಾರೆ, ಕನ್ನೆ, ಕಿರುನಗಲ, ನುಗ್ಗೆ, ಅಗಸೆ, ಕಿಲಕೀರೆ, ದಂಟು, ಬೋದಗೀರ, ಸಪ್ಪಸೀಗೆ, ಮುಳ್ಳುಗೀರ, ಕೀರೆ, ಮೆಂತೆ, ಕುಂಬಳ, ಪಾಲಕ, ಬಿಳಿ ಬಗ್ಗರವಾಟ, ಕೆಂಪನ ಬಗ್ಗರವಾಟ, ಒಂದೆಲಗ, ಕಾಡುನುಗ್ಗೆ, ಕಾಡಂದಗ, ದ್ಯವನದ, ಪುಂಡಿ, ಬಸಳೆ, ಕಳ್ಳೆ ಸೊಪ್ಪು ಹೀಗೆ ಹಲವಾರು ಸೊಪ್ಪುಗಳ ಹೆಸರು ಪುಟ್ಟೀರಮ್ಮ ಜ್ಞಾನದ ಬುಟ್ಟಿಯಲ್ಲಿವೆ.

ಈ ನೆಲದ ಕೃಷಿ ಜ್ಞಾನವನ್ನು ಜಾನಪದ ಹಾಡು, ಗಾದೆ ಮಾತುಗಳಲ್ಲಿ ಅಳವಡಿಸಿ, ಯಾವ ಅಕ್ಷರ ಜ್ಞಾನದ ಹಂಗೂ ಇಲ್ಲದೆ ಸೊಪ್ಪಿನ ಜ್ಞಾನ ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸುತ್ತಾ ಬಂದಿರುವ ಪುಟ್ಟೀರಮ್ಮನ ಬಗ್ಗೆ ಇಕ್ರಾ ಸಂಸ್ಥೆ ಪುಟ್ಟೀರಮ್ಮನ ಪುರಾಣ ಎಂಬ ಪುಸ್ತಕವನ್ನು ಹೊರತಂದಿದೆ. 95 ವರ್ಷದ ಪುಟ್ಟೀರಮ್ಮ ಪತಿ ನಿಂಗೇಗೌಡ, ಪುತ್ರ ಶಿವಲಿಂಗೇಗೌಡ ಹಾಗೂ ಸೊಸೆ ಜೊತೆ ಪಣ್ಯದ ಹುಂಡಿಯಲ್ಲಿ ವಾಸವಿದ್ದಾರೆ. ಇವರ ಈ ಸಾಧನೆ ಪರಿಗಣಿಸಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಇಕ್ರಾ ಸಂಘಟನೆಯಿಂದ ಸರ್ದಾರ್ ವೆಂಕಟರಾಮಯ್ಯ ದತ್ತಿ ಪುರಸ್ಕಾರವನ್ನು 2018ರಲ್ಲಿ ನೀಡಲಾಗಿದೆ.

ಚಾಮರಾಜನಗರ ಜಿಲ್ಲೆಗೆ ಹೆಮ್ಮೆಯ ಸಂಗತಿ

ಜಾನಪ ಗೀತೆಗಳಂತೆಯೇ ನಾನಾ ಸೊಪ್ಪುಗಳ ಬಗ್ಗೆ ತಾವೇ ಪದ ರಚಿಸಿಕೊಂಡು ಸುಶ್ರಾವ್ಯವಾಗಿ ಪುಟ್ಟೀರಮ್ಮ ಹಾಡುತ್ತಾರೆ. ಒಂದು ವಿಚಾರದ ಬಗ್ಗೆ ಸಾಕಷ್ಟು ಜ್ಞಾನ ಇದ್ದಾಗ ಮಾತ್ರ ಈ ರೀತಿ ರಚನೆ ಸಾಧ್ಯ. ಸೊಪ್ಪುಗಳ ಗುಣವನ್ನು ಚೆನ್ನಾಗಿ ಬಲ್ಲ ಪುಟ್ಟೀರಮ್ಮಗೆ ಕೆಲ ಕಾಯಿಲೆಗಳಿಗೆ ಯಾವ ಸೊಪ್ಪಿನ ರಸ, ಕಷಾಯದಲ್ಲಿ ಔಷಧೀಯ ಗುಣವಿದೆ ಎಂಬ ಮಾಹಿತಿಯೂ ಇದೆ. ಈ ಇಳಿವಯಸ್ಸಿನಲ್ಲೂ ಅಷ್ಟೇ ಚೆನ್ನಾಗಿ ಸೊಪ್ಪುಗಳನ್ನು ನೋಡಿ ಗುರುತಿಸಿ ಅವುಗಳ ಹೆಸರನ್ನು ಥಟ್ಟನೆ ಹೇಳಬಲ್ಲರು. ಇದೆಲ್ಲವನ್ನೂ ಗುರುತಿಸಿದ ಸರ್ಕಾರ, ಪುಟ್ಟೀರಮ್ಮಗೆ ರಾಜ್ಯದ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಜಿಲ್ಲೆಗೆ ಹೆಮ್ಮೆಯ ಸಂಗತಿ.



– ಪುಟ್ಟೀರಮ್ಮ

ಕೋಡಿಮೋಳೆ ಗ್ರಾಮದಲ್ಲಿ ಪುನೀತ್ ಪುಣ್ಯಸ್ಮರಣೆ



ಕೋಡಿಮೋಳೆಯಲ್ಲಿ ಪುನೀತ್ ರಾಜಕುಮಾರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಚಾಮರಾಜನಗರ, ಅ.30–ತಾಲೂಕಿನ ಕೋಡಿಮೋಳೆ ಗ್ರಾಮದಲ್ಲಿ ಭಗತ್ ಸಿಂಗ್ ಯುವ ಸೇನೆ ಹಾಗೂ ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗದ ವತಿಯಿಂದ ಪುನೀತ್ 3ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಅಪ್ಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಕೋಡಿಮೋಳೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಕೋಡಿಮೋಳೆ ಗೋವಿಂದಶೆಟ್ಟಿ ಮಾತನಾಡಿ, ಪುನೀತ್ ರಾಜ್‌ಕುಮಾರ್ ಕನ್ನಡ ಚಿತ್ರರಂಗ ಕಂಡ ಅಪ್ರತಿಮ ಕಲಾವಿದರು. ಅಲ್ಪಾವಧಿಯಲ್ಲಿ ಕೋಟ್ಯಂತರ ಹೃದಯಗಳನ್ನು ಗೆದ್ದಿದ್ದರು.

ಜನಪ್ರಿಯತೆಯ ತುತ್ತ ತುದಿಯಲ್ಲಿದ್ದಾಗಲೇ ನಮ್ಮನಗಲಿದ್ದಾರೆ. ಅವರ ನಿಧನ ಕುರುನಾಡಿಗೆ ತುಂಬಲಾರದ ನಷ್ಟ. ಯುವ ಸಮೂಹ ಪುನೀತ್ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಭಗತ್ ಸಿಂಗ್ ಯುವ ಸೇನೆ ಅಧ್ಯಕ್ಷ ಕಾಂತರಾಜ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯ ಮಹೇಶ್, ಯು.ಮಹದೇವಶೆಟ್ಟಿ, ವಿಷಕಂಠ, ನಂಜುಂಡಶೆಟ್ಟಿ, ಚಿನ್ನಸ್ವಾಮಿ, ಜಯಶಂಕರ್, ಕೆ.ಹೆಚ್.ಎಂ.ಮಹೇಶ್, ನಾಗಶೆಟ್ಟಿ, ಶಿವು, ಪ್ರಕಾಶ್, ಮಲ್ಲೇಶ್, ನಾಗೇಶ್, ನಾಗರಾಜು, ಮಣಿಕಂಠ, ಪದ್ಮ ಸೌಂಡ್ಸ್ ಮಹೇಶ್ ಹಾಜರಿದ್ದರು.

ಅಮಾನುಲ್ಲಾ ಷರೀಫ್ ನಿಧನ



ಯಳಂದೂರು: ಪಟ್ಟಣದ ಹಣ್ಣಿನ ವ್ಯಾಪಾರಿ ಅಮಾನುಲ್ಲಾ ಷರೀಫ್(75) ಅನಾರೋಗ್ಯದಿಂದ ಬುಧವಾರ ಪಟ್ಟಣದ ಬಳೇಪೇಟೆಯ ತಮ್ಮ ಸ್ವಗೃಹದಲ್ಲಿ ನಿಧನರಾದರು.

ಮೃತರು ಪತ್ನಿ, ನಾಲ್ವರು ಪುತ್ರಿಯರು ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಪಟ್ಟಣದ ಕೊಳ್ಳೇಗಾಲ ರಸ್ತೆಯಲ್ಲಿರುವ ಖಬರಸ್ತಾನದಲ್ಲಿ ಅಂತ್ಯಕ್ರಿಯೆ ನೆರವೇರಿತು.

ವಿಶೇಷಚೇತನ ಮಕ್ಕಳ ಕಾಳಜಿಗಿಂತ ಪ್ರೀತಿ ಮುಖ್ಯ



ಕೊಳ್ಳೇಗಾಲದಲ್ಲಿ ನಡೆದ ವಿಶೇಷಚೇತನ ಮಕ್ಕಳ ಆರೋಗ್ಯ ತಪಾಸಣಾ ಶಿಬಿರಕ್ಕೆ ಶಾಸಕ ಕೃಷ್ಣಮೂರ್ತಿ ಚಾಲನೆ ನೀಡಿದರು.

ಕೊಳ್ಳೇಗಾಲ: ವಿಶೇಷಚೇತನ ಮಕ್ಕಳ ಬಗ್ಗೆ ಕಾಳಜಿಗಿಂತ ಪ್ರೀತಿ ಮುಖ್ಯ, ಅಂಗವಿಕಲತೆ ಶಾಪವಲ್ಲ ಅದೊಂದು ಆಕಸ್ಮಿಕ ಹುಟ್ಟು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಪಟ್ಟಣದ ಗುರುಭವನದಲ್ಲಿ ಶಿಕ್ಷಣ ಇಲಾಖೆ ಹಾಗೂ ಅಲಿಂಕೋ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ವಿಶೇಷಚೇತನ ಮಕ್ಕಳ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶಿಕ್ಷಣ ಮಕ್ಕಳ ಸಂವಿಧಾನ ಬದ್ಧ ಹಕ್ಕು. ವಿಶೇಷ ಅಗತ್ಯವುಳ್ಳ ಮಕ್ಕಳು ಸಹ ಇತರೆ ಮಕ್ಕಳಂತೆ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂಬುದು ಸಂವಿಧಾನದ ಆಶಯ ಎಂದರು.

ಸರ್ವರೂ ಸಮಾನರಂತೆ ಬಾಳಬೇಕು ಎಂಬುದು ಪ್ರಮುಖ ಉದ್ದೇಶ, ಮಾನವ ಹಕ್ಕುಗಳ ಆಶಯಕ್ಕೆ ಪೂರಕವಾಗಿ ವಿಶೇಷ ಚೇತನ ಮಕ್ಕಳು ಸಹ ಒಂದೇ. ಸಹಜವಾಗಿ ಕಲಿಕೆಯಲ್ಲಿ ತೊಂದರೆಯುಳ್ಳವರನ್ನು ವಿಶೇಷ ಚೇತನರು ಎಂದು ಗುರುತಿಸಲಾಗುತ್ತದೆ. ವಿಶೇಷಚೇತನ ಮಕ್ಕಳಿಗೆ ಪಾಲಕರ ಅತ್ಯಗತ್ಯ ಮುಖ್ಯವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ನಗರಸಭೆ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷ ಎ.ಪಿ.ಶಂಕರ್, ತಾಪಂ ಇಓ ಗುರುಶಾಂತಪ್ಪ ಬೆಳ್ಳುಂಡಗಿ, ಬಿಇಓ ಮಂಜುಳಾ, ಬಿಆರ್‌ಸಿ ಮಹದೇವಕುಮಾರ್, ತಾಲೂಕು ವೈದ್ಯಾಧಿಕಾರಿ ಡಾ.ಗೋಪಾಲ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀಧರ್, ಪೂರ್ಣಚಂದ್ರ ವಿಕಲಚೇತನ ಸಂಘದ ಅಧ್ಯಕ್ಷ ಸಿದ್ದರಾಜು, ಡಾ.ಸುನೀತಾ, ಡಾ.ರಾಜು ಇನ್ನಿತರಿದ್ದರು.

ಹೆದ್ದಾರಿ ಪಕ್ಕದ ಬೋರ್ಡ್‌ಗೆ ಬೈಕ್ ಡಿಕ್ಕಿ: ಸವಾರ ಸಾವು

ಬೇಗೂರು, ಅ.30–ಹೆದ್ದಾರಿ ಪಕ್ಕದ ಬೋರ್ಡ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ತೊಂಡವಾಡಿ ಗೇಟ್ ಬಳಿ ನಡೆದಿದೆ.

ನಂಜನಗೂಡಿನ ಮಹದೇವ ನಗರದ ಸ್ವಾಮಿ (40) ಮೃತಪಟ್ಟಿದ್ದು, ಹಿಂಬದಿ ಸವಾರ ಮಹೇಶ್ ಗಾಯಗೊಂಡಿದ್ದಾರೆ. ಈತ ಬೈಕ್‌ನಲ್ಲಿ ನಂಜನಗೂಡಿನಿಂದ ಬೇಗೂರು ಗ್ರಾಮಕ್ಕೆ ಬರುತ್ತಿದ್ದಾಗ ತೊಂಡವಾಡಿ ಗೇಟ್ ಬಳಿ ಹೆದ್ದಾರಿ ಪಕ್ಕದ ಬೋರ್ಡ್‌ಗೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದು, ಹಿಂಬದಿ ಸವಾರ ಮಹೇಶ್ ಗಾಯಗೊಂಡು ಬೇಗೂರು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆಯಿಂದ ಹಿಂಡಿಮಾರಮ್ಮ ದೀಪಾವಳಿ ಜಾತ್ರೆ

ಯಳಂದೂರು, ಅ.30–ತಾಲೂಕಿನ ಪ್ರಸಿದ್ಧ ಅಗರ–ಮಾಂಬಳ್ಳಿ ಗ್ರಾಮದ ಶ್ರೀ ಹಿಂಡಿಮಾರಮ್ಮನ ದೀಪಾವಳಿ ಜಾತ್ರೆ ನ.1ರಿಂದ 4ರವರೆಗೆ ನಡೆಯಲಿದ್ದು, ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಜಾತ್ರಾ ಸಂಬಂಧ ಬುಧವಾರ ದೇಗುಲದ ಆವರಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅಗರ ನಾಡುದೇಶದ ಗೌಡ ಬಿ.ಪುಟ್ಟಸುಬ್ಬಣ್ಣ, ನ.1ರಂದು ದೇಗುಲದಲ್ಲಿ ವಿಶೇಷ ಪೂಜೆ, ಮೆರವಣಿಗೆ ನಡೆಯಲಿದೆ. 2ರಂದು ಕೇಲು ಉತ್ಸವ, 3 ರಂದು ಜಾತ್ರೆ ಹಾಗೂ ಕೊಂಡೋತ್ಸವ ನಡೆಯಲಿದ್ದು, ಉತ್ಸವ ಮೂರ್ತಿಯ ವೈಭವದ ಮೆರವಣಿಗೆ ನಡೆಯಲಿದೆ. 4ರಂದು ದೂಳು ಮೆರವಣಿಗೆ ನಡೆಯಲಿದ್ದು, ನಾಲ್ಕು ದಿನಗಳ ಉತ್ಸವಕ್ಕೆ ತೆರೆ ಬೀಳಲಿದೆ ಎಂದು ಮಾಹಿತಿ ನೀಡಿದರು.

ಮುಖಂಡ ಮಾಂಬಳ್ಳಿ ನಂಜುಂಡಸ್ವಾಮಿ ಮಾತನಾಡಿ, ದೀಪಾವಳಿ ಹಬ್ಬದಂದು ಆರಂಭವಾಗುವ ಹಿಂಡಿಮಾರಮ್ಮನ ದೇವರ ಹಬ್ಬ 4 ದಿನ ನಡೆಯುತ್ತದೆ. ಈ ಹಬ್ಬ ಪ್ರಮುಖವಾಗಿ ಅಗರ ಮಾಂಬಳ್ಳಿ, ಕಿನಕಹಳ್ಳಿ, ಕಟ್ನವಾಡಿ, ಬಸವಾಪುರ, ಬನ್ನಿಸಾರಿಗೆ, ಸೂರಪುರ, ಕುಣಗಳ್ಳಿ, ರಾಮಾಪುರ ಗ್ರಾಮಗಳಲ್ಲಿ ಆಚರಿಸಲಾಗುತ್ತದೆ. ಜಾತ್ರೆಗೆ 50 ಸಾವಿರಕ್ಕೂ ಅಧಿಕ ಭಕ್ತರು ಆಗಮಿಸುವ ನಿರೀಕ್ಷೆ ಇದೆ ಎಂದರು.

ಸಭೆಯಲ್ಲಿ ಮಾಂಬಳ್ಳಿ ನಾಡುದೇಶದ ಗೌಡರಾದ ಎಂ.ಸಿ.ರಮೇಶ್, ಮಹದೇವಸ್ವಾಮಿ ಯಜಮಾನರಾದ ಪುಟ್ಟಸ್ವಾಮಿ, ಗೋವಿಂದನಾಯಕ, ಮಾಂಬಳ್ಳಿ ಬಸವರಾಜು, ಕಿನಕಹಳ್ಳಿ ಸಿದ್ದರಾಜು, ಬಸವರಾಜು, ಮಾಂಬಳ್ಳಿ ನಂಜುಂಡಸ್ವಾಮಿ, ಸಂಜೀವ ನಾಯಕ, ಉಪತಹಸೀಲ್ದಾರ್ ಮಾದೇಶ್, ರಾಜಸ್ವ ನಿರೀಕ್ಷಕ ರಮೇಶ್ ಇದ್ದರು.



ಹಿಂಡಿಮಾರಮ್ಮ ದೇವಸ್ಥಾನದಲ್ಲಿ ನಡೆದ ದೀಪಾವಳಿ ಜಾತ್ರೆ ಸಭೆಯಲ್ಲಿ ಬಿ.ಪುಟ್ಟಸುಬ್ಬಣ್ಣ ಮಾತನಾಡಿದರು.

ಮುಡಾ ನಿವೇಶನ ಹಂಚಿಕೆ ಹಗರಣ: ಇಡಿ ತನಿಖೆಯಿಂದ ಸ್ಫೋಟಕ ಮಾಹಿತಿ ಬಯಲು

ಮೂಲ ದಾಖಲೆಗಳೇ ನಾಪತ್ತೆ

ಬೆಂಗಳೂರು, ಅ.30(ಕೆಎಂಶಿ)–ಮುಡಾ ಹಗರಣ ಸಂಬಂಧ ಜಾರಿ ನಿರ್ದೇಶನಾಲಯ (ಇಡಿ) ಕಳೆದ ನಾಲ್ಕೈದು ವಾರಗಳಿಂದ ಹಲವಾರು ವ್ಯಕ್ತಿಗಳ ಮನೆ ಹಾಗೂ ಕಚೇರಿಗಳ ಮೇಲೆ ನಡೆಸಿದ ದಾಳಿಯಿಂದ ಸಾಕಷ್ಟು ವಿಚಾರಗಳು ಹೊರಬೀಳುತ್ತಿದ್ದು, ದಾಖಲೆಗಳು ನಾಪತ್ತೆ ಆಗಿವೆ ಎಂಬ ವಿಚಾರ ಬಹಿರಂಗವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಷ್ಟೆಲ್ಲಾ ಅಕ್ರಮಗಳ ನಡುವೆಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸತ್ಯ ಮೇವ ಜಯತೆ ಅಂತ ಹೇಳಿಕೊಂಡು ತಿರುಗುತ್ತಿದ್ದಾರೆ. ಜಾಹೀರಾತಿನಲ್ಲೂ ಸತ್ಯಮೇವ ಜಯತೇ, ಭಾಷಣದಲ್ಲೂ ಸತ್ಯಮೇವ ಜಯತೇ. ಆದರೆ, ಮುಡಾ ಹಗರಣದಲ್ಲಿ ಎಲ್ಲಾ ಸತ್ಯ ಮೇವ ಜಯತೆ ಹೊರಬೀಳುತ್ತಿದೆ ಎಂದರು.

ರಾಜ್ಯ ಅರಣ್ಯ ಸಚಿವ ಈಶ್ವರ ಖಂಡ್ರೆ ಹೆಚ್‌ಎಂಟಿ ಜಾಗದಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದು, ನ್ಯಾಯಾಲಯಕ್ಕೆ ದೂರು ಸಲ್ಲಿಸಲಾಗಿದೆ. ಸಚಿವರಿಗೆ ಮಾಹಿತಿ ಮತ್ತು ಜ್ಞಾನದ ಕೊರತೆ ಇದೆ.

ಅವರು ಭೇಟಿ ನೀಡಿದ ಜಾಗವನ್ನು 2002ರಲ್ಲಿಯೇ ಕೆನರಾ ಬ್ಯಾಂಕಿಗೆ ನೀಡಲಾಗಿದೆ. ಸಚಿವರು ಅನಗತ್ಯ ಗೊಂದಲ ಉಂಟು ಮಾಡುತ್ತಿದ್ದಾರೆ. ಈ ಕುರಿತು ನಾಳೆ ಅಥವಾ ನಾಡಿದ್ದು ಎಲ್ಲಾ ದಾಖಲೆಗಳ ಸಮೇತ ಮಾಧ್ಯಮಗಳ ಮುಂದೆ ಮಾತನಾಡುತ್ತೇನೆ ಎಂದರು. ಚಿಕ್ಕಮಗಳೂರು, ಕೊಡಗು, ಬೆಂಗಳೂರು ಸೇರಿದಂತೆ ಅನೇಕ ಕಡೆ ದೊಡ್ಡ ಪ್ರಮಾಣದಲ್ಲಿ ಅರಣ್ಯ ಭೂಮಿ ಒತ್ತುವರಿ ಆಗಿದೆ. ಅವುಗಳನ್ನು ತೆರವು ಮಾಡುವ ಬದಲು ಅರಣ್ಯ ಸಚಿವರು ಹೆಚ್‌ಎಂಟಿ ಮೇಲೆ ಮಾತ್ರ ವಿಶೇಷ ಕಾಳಜಿ ತೋರಿಸುತ್ತಿದ್ದಾರೆ.

ಕೋಲಾರ ಜಿಲ್ಲೆ ಶ್ರೀನಿವಾಸಪುರದಲ್ಲಿ ಮಾಜಿ ಸ್ಪೀಕರ್ ಒಬ್ಬರು ಒತ್ತುವರಿ ಮಾಡಿರುವ ಅರಣ್ಯ ಭೂಮಿ ತೆರವು ಮಾಡಿಸುವ ಧೈರ್ಯವನ್ನು ಅರಣ್ಯ ಸಚಿವರು ತೋರಿಸಲಿ. ಒತ್ತುವರಿ ತೆರವು ಮಾಡಿಸುವಂತೆ ನ್ಯಾಯಾಲಯ ಆದೇಶ ಮಾಡಿ, ಅರಣ್ಯ ಇಲಾಖೆ ಹಾಗೂ ಕೋಲಾರ ಜಿಲ್ಲಾಧಿಕಾರಿಗೆ ನೋಟಿಸ್ ನೀಡಿದೆ, ಆದರೂ ಒತ್ತುವರಿ ಜಾಗ ಏಕೆ ತೆರವು ಮಾಡಿಸುತ್ತಿಲ್ಲ. ಇದಕ್ಕೆ ಉತ್ತರ ಹೇಳಿ ಈಶ್ವರ ಖಂಡ್ರೆ ಅವರೇ ಎಂದು ಸಚಿವರು ಪ್ರಶ್ನಿಸಿದರು.

ಶ್ರೀನಿವಾಸಪುರದಲ್ಲಿ 120 ಎಕರೆ ಅರಣ್ಯ ಭೂಮಿ ಒತ್ತುವರಿಯಾಗಿದೆ, 61 ಎಕರೆ ಸರ್ವೆ ಮಾಡಿ ತಕ್ಷಣ ಮುಟ್ಟುಗೋಲು ಹಾಕಿಕೊಳ್ಳಿ ಎಂಬ ನ್ಯಾಯಾಲಯದ ಆದೇಶ ಇದ್ದಾಗ್ಯೂ ಅರಣ್ಯ ಸಚಿವರು ಅಧಿಕಾರಿಗಳಿಗೆ ಏನು ಸೂಚನೆ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಈಶ್ವರ್ ಖಂಡ್ರೆ ಏನು ಮಾಡ್ತಿದ್ದೀರಪ್ಪಾ, ಬಡವರಿಗೆ ಒಂದು ನ್ಯಾಯ, ಕಾಂಗ್ರೆಸ್‌ನವರಿಗೆ ಒಂದು ನ್ಯಾಯವೇ. ಯಾರನ್ನು ರಕ್ಷಣೆ ಮಾಡುತ್ತಿದ್ದೀರಿ ಹೇಳಿ ಸಚಿವರೇ, ಅರಣ್ಯ ಭೂಮಿ ರಕ್ಷಣೆ ಮಾಡುತ್ತಿದ್ದೀರೋ ಅಥವಾ ಒತ್ತುವರಿ ಮಾಡಿಕೊಂಡವರನ್ನು ರಕ್ಷಣೆ ಮಾಡುತ್ತಿದ್ದೀರೋ, ಮುಂದೆ ಈ ಕುರಿತು ಸಮಗ್ರ ಮಾಹಿತಿ ನೀಡುತ್ತೇನೆ ಎಂದರು. ನ್ಯಾಯಾಲಯದಲ್ಲಿ ತಕರಾರು ಅರ್ಜಿ ಇತ್ಯರ್ಥಕ್ಕೆ ಬಾಕಿ ಇದ್ದು, ತೀರ್ಪಿಗಾಗಿ ಕಾಯುತ್ತಿದ್ದೇವೆ, ಕಾನೂನಾತ್ಮಕವಾಗಿ ಹೋರಾಟ ಮಾಡುತ್ತೇವೆ, ಪ್ರಚಾರಕ್ಕಾಗಿ ಅಲ್ಲ ಎಂದರು.

ಒಂದನೇ ಪುಟದಿಂದ

69 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ

ಚಂದ್ರಶೇಖರ್ ನಾಯಕ್ **ಪರಿಸರ:** ಆಲ್ಮಿತ್ರಾ ಪಟೇಲ್. **ಕೃಷಿ:** ಶಿವನಾಪುರ ರಮೇಶ, ಪುಟ್ಟೀರಮ್ಮ. **ಮಾಧ್ಯಮ:** ಎನ್.ಎಸ್.ಶಂಕರ್, ಸನತ್ ಕುಮಾರ್ ಬೆಳಗಲಿ, ಎ.ಜಿ.ಕಾರಟಗಿ, ರಾಮಕೃಷ್ಣ ಬಡಶೇಶಿ. **ಶಿಲ್ಪಕಲೆ ಕ್ಷೇತ್ರ:** ಶಿಲ್ಪಿ ಅರುಣ್ ಯೋಗಿರಾಜ್ (ಅಯೋಧ್ಯಾ ಬಾಲರಾಮನ ಶಿಲ್ಪಿ). **ವಿಜ್ಞಾನ–ತಂತ್ರಜ್ಞಾನ:** ಪ್ರೊ.ಟಿ.ವಿ.ರಾಮಚಂದ್ರ, ಸುಬ್ಬಯ್ಯ ಅರುಣನ್ ಸಹಕಾರ: ವಿರೂಪಾಕ್ಷಪ್ಪ ನೇಕಾರ ಬಯಲಾಟ: ಸಿದ್ಧಪ್ಪ ಕರಿಯಪ್ಪ(ಅಂಧ ಕಲಾವಿದ), ನಾರಾಯಣಪ್ಪ ಶಿಳ್ಳೇಕ್ಯಾತ. **ಯಕ್ಷಗಾನ:** ಕೇಶವ್ ಹೆಗಡೆ, ಸೀತಾರಾಮ ತೋಳ್ಪಾಡಿ ರಂಗಭೂಮಿ: ಸರಸ್ವತಿ ಜುಲೈಕ ಬೇಗಂ, ಓಬಳೇಶ್ ಹೆಚ್.ಬಿ., ಭಾಗ್ಯಶ್ರೀ ರವಿ, ಡಿ. ರಾಮು, ಜನಾರ್ಧನ್ ಹೆಚ್., ಹನುಮಾನದಾಸ ವ. ಪವಾರ. **ಸಾಹಿತ್ಯ:** ಬಿ.ಟಿ. ಲಲಿತಾ ನಾಯಕ್, ಅಲ್ಲಮಪ್ರಭು ಬೆಟ್ಟದೂರು. ಡಾ.ಎಂ.ವೀರಪ್ಪ ಮೊಯಿಲಿ. ಹನುಮಂತರಾವ್ ದೊಡ್ಡಮನಿ, ಡಾ.ಬಾಳಾಸಾಹೇಬ್ ಲೋಕಾಪುರ, ಬೈರಮಂಗಲ ರಾಮೇಗೌಡ. ಡಾ. ಪ್ರಶಾಂತ್ ಮಾಡ್ತಾ. **ಶಿಕ್ಷಣ:** ಡಾ.ವಿ.ಕಮಲಮ್ಮ, ಡಾ. ರಾಜೇಂದ್ರ ಶೆಟ್ಟಿ, ಡಾ.ಪದ್ಮಾ ಶೇಖರ್. **ಕ್ರೀಡೆ:** ಜೂಡ್ ಫೆಲಿಕ್ಸ್ ಸೆಬಾಸ್ಟಿಯನ್, ಗೌತಮ್ ವರ್ಮ, ಆರ್.ಉಮಾದೇವಿ **ನ್ಯಾಯಾಂಗ:** **ಬಾಲನ್ ಚಿತ್ರಕಲೆ:** ಪ್ರಭು ಹರಸೂರು ಕರಕುಶಲ: ಚಂದ್ರಶೇಖರ ಸಿರಿವಂತೆ.

ಜೈಲಿಂದ ಬಿಡುಗಡೆ

ದುರುಪಯೋಗಪಡಿಸಿಕೊಳ್ಳಬಾರದು ಎಂಬ ಷರತ್ತು ವಿಧಿಸಲಾಗಿದೆ. ಹೈಕೋರ್ಟ್‌ನಲ್ಲಿ ಜಾಮೀನು ಮಂಜೂರು ಆಗುತ್ತಿದ್ದಂತೆಯೇ ದರ್ಶನ್‌ಗೆ ಅವರ ಸಹೋದರ ದಿನಕರ್ ಮತ್ತು ಸ್ನೇಹಿತ ಧನ್ವೀರ್ ಶ್ಯೂರಿಟಿ ನೀಡಿದರು. ದರ್ಶನ್ ಪತ್ನಿ ವಿಜಯಲಕ್ಷ್ಮಿ ಮತ್ತು ಸಂಬಂಧಿಕ ಸುಶಾಂತ್ ನಾಯ್ಡು ಬಳ್ಳಾರಿಗೆ ತೆರಳಿ, ಜಾಮೀನು ಆದೇಶವನ್ನು ಜೈಲಿನ ಅಧೀಕ್ಷಕಿ ಲತಾ ಅವರಿಗೆ ನೀಡಿದರು. ಜಾಮೀನು ಪ್ರಕ್ರಿಯೆಗಳು ಮುಗಿಯುವವರೆಗೂ ಹೊರಗೆ ಕಾರಿನಲ್ಲಿ ಕುಳಿತಿದ್ದ ವಿಜಯಲಕ್ಷ್ಮಿ ಸಂಜೆ 6 ಗಂಟೆ ಸುಮಾರಿಗೆ ಜೈಲಿನಿಂದ ಹೊರ ಬಂದ ದರ್ಶನ್ ಅನ್ನು ದೃಷ್ಟಿ ತೆಗೆದು ತಮ್ಮ ಕಾರಿನಲ್ಲೇ ಬೆಂಗಳೂರಿಗೆ ಕರೆದೊಯ್ದರು.

ರಾತ್ರಿ 12 ಗಂಟೆ ಸುಮಾರಿಗೆ ಬೆಂಗಳೂರಿನ ಹೊಸಕೆರೆಹಳ್ಳಿಯಲ್ಲಿರುವ ಪತ್ನಿ ವಿಜಯಲಕ್ಷ್ಮಿಯವರ ಅಪಾರ್ಟ್‌ಮೆಂಟ್‌ನ ಫ್ಲಾಟ್‌ಗೆ ದರ್ಶನ್ ಆಗಮಿಸುವ ವೇಳೆಗಾಗಲೇ ಸಾವಿರಾರು ಸಂಖ್ಯೆಯಲ್ಲಿ ಅವರ ಬೆಂಬಲಿಗರು ಜಮಾಯಿಸಿದ್ದರು. ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸರು ವಿಜಯಲಕ್ಷ್ಮಿ ಬಳಿ ಅಭಿಮಾನಿಗಳು ತೆರಳದಂತೆ ಕ್ರಮವಹಿಸಿದ್ದರಾದರೂ ನೂರಾರು ಅಭಿಮಾನಿಗಳು ಅಪಾರ್ಟ್‌ಮೆಂಟ್ ಬಳಿಯೇ ಜಮಾಯಿಸಿದ್ದರು. ದರ್ಶನ್ ಬರುತ್ತಿದ್ದಂತೆಯೇ ಜಯಕಾರ ಕೂಗಿ ಪಟಾಕಿ ಸಿಡಿಸಿದರು. ಸ್ವಲ್ಪ ಸಮಯದ ನಂತರ ತಂದೆಯನ್ನು ನೋಡಲು ದರ್ಶನ್ ಪುತ್ರ ವಿನೀಶ್ ಆಗಮಿಸಿದ್ದಾಗ ಆತನನ್ನು ಸುತ್ತುವರೆದ ಅಭಿಮಾನಿಗಳು ಜಯಘೋಷಣೆ ಕೂಗಿ ಸಂಭ್ರಮಿಸಿದರು.

ನಮಗೆ ಕಾನೂನು; ಪೊಲೀಸರ ಬಗ್ಗೆ ನಂಬಿಕೆ ಇದೆ

ತಮ್ಮ ಪುತ್ರ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿ ನಟ ದರ್ಶನ್‌ಗೆ ಕಾನೂನು ವ್ಯವಸ್ಥೆಯಲ್ಲಿ ಜಾಮೀನು ನೀಡಲಾಗಿದೆ. ಅದರ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ ಎಂದು ರೇಣುಕಾಸ್ವಾಮಿ ತಂದೆ ಕಾಶಿನಾಥ ಶಿವನಗೌಡರ್ ಪ್ರತಿಕ್ರಿಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನು ವ್ಯವಸ್ಥೆ ಬಗ್ಗೆ ನಾವು ಏನೂ ಮಾಡನಾಡಲಾರೆವು. ಆದರೆ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ನಮಗೆ ಕಾನೂನು ಮತ್ತು ಪೊಲೀಸರ ಮೇಲೆ ನಂಬಿಕೆ ಇದೆ ಎಂದು ಹೇಳಿದರು.

ಕೆಂಪು–ಹಳದಿ ಬಣ್ಣದ ಟ್ಯಾಗ್ ಕಡ್ಡಾಯ

ಬೆಂಗಳೂರು ಜಿಲ್ಲೆಯಲ್ಲಿ ಶೇ.50ರಷ್ಟು ಜನ ಹೊರಗಿನಿಂದ ಬಂದಿದ್ದಾರೆ. ಹೊರಗಿನಿಂದ ಬಂದವರು ಸಹ ಕನ್ನಡ ಕಲಿಯಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಮಾಡಬೇಕು. ರಾಷ್ಟ್ರ ಧ್ವಜದ ರೀತಿ ಕನ್ನಡ ಬಾವುಟಕ್ಕೆ ಗೌರವ ಕೊಡಬೇಕು. ಬಾವುಟ ಹಾರಿಸುವ ಮೂಲಕ ಶ್ರದ್ಧಾ, ಭಕ್ತಿ ಗೌರವ ತೋರಿಸಬೇಕು ಎಂದು ಹೇಳಿದ್ದರು. ಆಚರಣೆ ಮಾಡದ ಸಂಸ್ಥೆ ವಿರುದ್ಧ ಯಾವ ರೀತಿ ಕ್ರಮ ಕೈಗೊಳ್ಳಬೇಕು ಅಂತ ಸರ್ಕಾರ ನಿರ್ಧಾರ ಮಾಡುತ್ತದೆ. ಕನ್ನಡ ಸಂಘಟನೆಗಳು ಖಾಸಗಿ ಸಂಸ್ಥೆಗಳ ಬಳಿ ಹೋಗಿ ಗಲಾಟೆ, ಬೆದರಿಸುವುದು ಬೇಡ ಎಂದು ಎಚ್ಚರಿಕೆ ನೀಡಿದ್ದರು.

ಮೈಸೂರು ಮಿತ್ರ ಗುರುವಾರ 31 ಅಕ್ಟೋಬರ್ 2024

ವರದಕ್ಷಿಣೆ ಕಿರುಕುಳ ತಾಳಲಾರದೆ ಗೃಹಿಣಿ ಆತ್ಮಹತ್ಯೆ

ಗಂಡ, ಅತ್ತೆ ಬಂಧನ, ಹುಣಸೂರು ತಾಲೂಕು ಕೂಡ್ಲೂರಿನಲ್ಲಿ ದುರಂತ





ಹುಣಸೂರು/ಹನಗೋಡು, ಅ.30– ಗಂಡ ಮತ್ತು ಗಂಡನ ಮನೆಯವರ ವರದಕ್ಷಿಣೆ ಕಿರುಕುಳ ತಾಳಲಾರದೆ ಗೃಹಿಣಿಯೊಬ್ಬರು ನೇಣಿಗೆ ಶರಣಾಗಿದ್ದು, ಈ ಸಂಬಂಧ ಗಂಡ ಮತ್ತು ಅತ್ತೆಯನ್ನು ಪೊಲೀಸರು ಬಂಧಿಸಿರುವ ಘಟನೆ ತಾಲೂಕಿನ ಕೂಡ್ಲೂರು ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ನಿವಾಸಿ ಆಂಥೋಣಿ ಕಿರಣ್ ಅವರ ಪತ್ನಿ ನಿರ್ಮಲ ಉರುಫ್ ನಿತ್ಯ ನಿರ್ಮಲ (25) ನೇಣಿಗೆ ಶರಣಾಗಿದ್ದು, ಈ ಸಂಬಂಧ ಗಂಡ ಆಂಥೋಣಿ ಕಿರಣ್ ಮತ್ತು ಈತನ ತಾಯಿ ಆರೋಕ್ಯ ಮೇರಿಯನ್ನು, ಹುಣಸೂರು ಗ್ರಾಮಾಂತರ ಪೊಲೀಸರು ಬಂಧಿಸಿ, ಜೈಲಿಗೆ ಕಳುಹಿಸಿದ್ದಾರೆ.

ತುಮಕೂರು ಜಿಲ್ಲೆ ತಿಪಟೂರು ತಾಲೂಕು ಸಣ್ಣೇನಹಳ್ಳಿಯ ಥೆರೆಸಾ ಮತ್ತು ದಿವಂಗತ ಮರಿಯಪ್ಪ ದಂಪತಿ ಪುತ್ರಿ ನಿರ್ಮಲ ಅವರನ್ನು ಎರಡೂವರೆ ವರ್ಷಗಳ ಹಿಂದೆ ಕೂಡ್ಲೂರು ಗ್ರಾಮದ ಆಂಥೋಣಿ ಕಿರಣ್‌ಗೆ ಕೊಟ್ಟು ವಿವಾಹ ಮಾಡಲಾಗಿದ್ದು, ದಂಪತಿಗೆ ಒಂದು ವರ್ಷದ ಹೆಣ್ಣು ಮಗುವಿದೆ.

ಮದುವೆ ಸಂದರ್ಭದಲ್ಲಿ ಸಾಕಷ್ಟು ವರದಕ್ಷಿಣೆ ಕೊಟ್ಟು ವಿವಾಹ ಮಾಡಲಾಗಿತ್ತು. ಆರಂಭದಲ್ಲಿ ಅನ್ಯೋನ್ಯವಾಗಿದ್ದ ದಾಂಪತ್ಯದಲ್ಲಿ ವರದಕ್ಷಿಣೆ ಕಿರುಕುಳ ಆರಂಭವಾಯಿತು. ಪತಿ ಆಂಥೋಣಿ ಕಿರಣ್, ಅತ್ತೆ ಆರೋಕ್ಯ ಮೇರಿ, ನಾದಿನಿಯರಾದ ಉಲ್ಮಾ ಮತ್ತು ಪವಿತ್ರ ಅವರುಗಳು ತವರಿನಿಂದ ಹೆಚ್ಚಿನ ವರದಕ್ಷಿಣೆ ತರುವಂತೆ ತನಗೆ ದೈಹಿಕ ಮತ್ತು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರು ಎಂದು ತಮ್ಮ ಪುತ್ರಿ ತಿಳಿಸಿರುವುದಾಗಿ ಮೃತ ನಿರ್ಮಲ ಅವರ ತಾಯಿ ಥೆರೆಸಾ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ವಿಷಯ ತಿಳಿದು ನಿನ್ನೆ ರಾತ್ರಿಯೇ ಕೂಡ್ಲೂರು ಗ್ರಾಮಕ್ಕೆ ಬಂದ ನಿರ್ಮಲಾ ಅವರ ತಾಯಿ ಥೆರೆಸಾ ಮತ್ತು ಕುಟುಂಬಸ್ಥರು ತಮ್ಮ ಮಗಳನ್ನು ಕಳೆದುಕೊಂಡ ದುಃಖವನ್ನು ತಾಳಲಾರದೆ ಕಂಬನಿಗರೆದರು. ಜೊತೆಗೆ ಗ್ರಾಮಾಂತರ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದರು.

ಇನ್ಸ್‌ಪೆಕ್ಟರ್ ಕಶ್ಯಪ್, ಸಬ್‌ಇನ್ಸ್‌ಪೆಕ್ಟರ್ ರಾಧಮ್ಮ ಮತ್ತು ತಹಸೀಲ್ದಾರ್ ಸ್ಥಳಕ್ಕೆ ಭೇಟಿ ನೀಡಿ, ಪಂಚನಾಮೆ ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಬಂಧಿತ ಅಂಥೋಣಿ ಕಿರಣ್ ಮತ್ತು ಆರೋಕ್ಯ ಮೇರಿ ಅವರುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮೈಸೂರಿನ ಕೆಆರ್.ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ಮೃತದೇಹವನ್ನು ವಾರಸುದಾರರ ವಶಕ್ಕೆ ಒಪ್ಪಿಸಲಾಯಿತು. ಮೃತಳ ಕುಟುಂಬದವರು ಪಾರ್ಥಿವ ಶರೀರವನ್ನು ತಮ್ಮೂರಿಗೆ ಕೊಂಡೊಯ್ದು ಅಂತ್ಯಕ್ರಿಯೆ ನೆರವೇರಿಸಿದರು.

ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೀವಟಿಗೆ ಉತ್ಸವಕ್ಕೆ ಸಿದ್ಧತೆ



ಸಾವಿರಾರು ಭಕ್ತರಿಂದ ವಿಶೇಷ ಪೂಜೆ, ಶೃಂಗಾರಗೊಳ್ಳುತ್ತಿರುವ ಗ್ರಾಮಗಳು



ಬೆಟ್ಟದಪುರ, ಅ.30– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಐತಿಹಾಸಿಕ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೀಪಾವಳಿ ದೀವಟಿಗೆ ಉತ್ಸವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಸಕಲ ಸಿದ್ಧತೆಗಳು ಭರದಿಂದ ಸಾಗಿದೆ.

ತಲತಲಾಂತರದಿಂದಲೂ ಪ್ರತಿ ವರ್ಷ ಇಲ್ಲಿನ ಸಂಪ್ರದಾಯದಂತೆ ನಡೆದುಕೊಂಡು ಬರುತ್ತಿರುವ ದೀವಟಿಗೆ ಉತ್ಸವ ಸಾವಿರಾರು ಭಕ್ತಾದಿಗಳಿಗೆ ಮನೆತನದ ಹಬ್ಬವಾಗಿದೆ. ಶುಕ್ರವಾರ ಬೆಳಗಿನ ಜಾವ 5 ಗಂಟೆಯಿಂದ ಸಾವಿರಾರು ಭಕ್ತರು ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಬೆಟ್ಟವನ್ನು ಹತ್ತುವುದು ಇಲ್ಲಿ ವಿಶೇಷ. ಈಗಾಗಲೇ ಕಂದಾಯ ಇಲಾಖೆ ಹಾಗೂ ವಿದ್ಯುತ್ ಇಲಾಖೆ ಭಕ್ತಾದಿಗಳಿಗೆ ಅನುಕೂಲಕ್ಕಾಗಿ ಹಲವು ಬಗೆಯ ಸ್ವಚ್ಛತಾ ಕಾರ್ಯಕ್ರಮ, ಬೆಟ್ಟಕ್ಕೆ ವಿದ್ಯುತ್ ದೀಪ ಅಳವಡಿಸುವ ಕೆಲಸ ಹಮ್ಮಿಕೊಂಡಿದೆ. ಭಕ್ತಾದಿಗಳು ಬೆಟ್ಟ ಹತ್ತುವಾಗ ಯಾವುದೇ ಪ್ಲಾಸ್ಟಿಕ್ ವಸ್ತುಗಳನ್ನು ಕೊಂಡೊಯ್ಯದೆ ಪರಿಸರವನ್ನು ಸ್ವಚ್ಛತೆಯಿಂದ ಇರುವಂತೆ ಮನವಿ ಮಾಡಲಾಗಿದೆ.

ನ.1ರ ಶುಕ್ರವಾರ ರಾತ್ರಿ ಗ್ರಾಮದ ಹೃದಯ ಭಾಗದ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದಲ್ಲಿ ಇರುವ ಬೆಳ್ಳಿ ಬಸಪ್ಪ, ಗಣಪತಿ ಮತ್ತು ಭ್ರಮರಾಂಭ ಸಮೇತ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಉತ್ಸವ ಮೂರ್ತಿಗಳನ್ನು ಬೆಟ್ಟದ ಮೇಲಿನ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಕ್ಕೆ ತೆಗೆದುಕೊಂಡ ಹೋಗಲಾಗುತ್ತದೆ. ಬಳಿಕ ನ.2ರ ಶನಿವಾರ ಬೆಳಗ್ಗೆ ಬೆಟ್ಟದ ದೇವಸ್ಥಾನದಲ್ಲಿ ಉತ್ಸವ ಮೂರ್ತಿಗಳಿಗೆ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಸೇರಿದಂತೆ ವಿಶೇಷ ಪೂಜೆ ಕೈಂಕರ್ಯಗಳು ನಡೆಯಲಿವೆ. ನಂತರ ಉತ್ಸವ ಮೂರ್ತಿಗಳ ಪಂಚಿನ ಮೆರವಣಿಗೆ ಆರಂಭವಾಗಲಿದೆ. ಅಂದು ರಾತ್ರಿ ಸುಮಾರು 12 ಗಂಟೆವರೆಗೆ ಉತ್ಸವ ನಡೆಯಲಿದೆ.

ಭಕ್ತರು ತಮ್ಮ ಮನೆಯಲ್ಲಿಯೇ ಸಿದ್ಧಪಡಿಸಿ ತಂದ ಪಂಜಿನೊಂದಿಗೆ (ದೀವಟಿಗೆ) ಬೆಟ್ಟದಪುರ, ಬೆಟ್ಟದತುಂಗ, ಹರದೂರು, ಡಿ.ಜಿ ಕೊಪ್ಪಲು, ಬಾರಸೇ, ಕುಡುಕೂರು, ಕೂರಗಲ್ಲು ಸೇರಿದಂತೆ ಬೆಟ್ಟದ ತಪ್ಪಲಿನ ಗ್ರಾಮಗಳಲ್ಲಿ ರಾತ್ರಿಯಿಡೀ ಮೆರವಣಿಗೆ ಮಾಡಿ ಬಳಿಕ ಮೂಲ ಸ್ಥಾನವಾದ ಬೆಟ್ಟದಪುರದ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಕ್ಕೆ ತರುತ್ತಾರೆ. ಈ ವೇಳೆ ಬೆಟ್ಟದ ಸುತ್ತಮುತ್ತಲಿನ ಗ್ರಾಮದಲ್ಲಿ ಪ್ರತಿ ಮನೆಗಳ ಮುಂದೆ ಹಸಿರು ಚಪ್ಪರ ಹಾಕಿರುತ್ತಾರೆ. ಬಳಿಕ ಪೂಜೆ ಸಲ್ಲಿಸುವುದು ವಾಡಿಕೆಯಾಗಿದೆ. ಮೆರವಣಿಗೆ ವೇಳೆ ಬೆಟ್ಟದ ತುಂಗ ಹಾಗೂ ಕುಡುಕೂರು ಗ್ರಾಮಗಳಲ್ಲಿ ಜಾತ್ರೆ ರೀತಿಯಲ್ಲಿ ಹಬ್ಬವು ವಿಜೃಂಭಣೆಯಿಂದ ನಡೆಯುತ್ತದೆ. ಹಿಂದಿನ ಕಾಲದಿಂದಲೂ ದೇವರ ಮೆರವಣಿಗೆ ಉತ್ಸವವು ಗ್ರಾಮದ ಉಪ್ಪಾರ ಸಮುದಾಯದವರು ನಡೆಸಿಕೊಂಡು ಬರುತ್ತಿದ್ದು, ಈ ಬಾರಿಯೂ ಇವರ ನೇತೃತ್ವದಲ್ಲಿ ನಡೆಯಲಿದೆ. ಉತ್ಸವಕ್ಕೆ ಆಗಮಿಸುವ ಭಕ್ತರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಿಗೆ ಪೂಜೆ ಸಲ್ಲಿಸಿ ಪ್ರಾರ್ಥಿಸುತ್ತಾರೆ.

ಲಾರಿ ಡಿಕ್ಕಿ: ಬೈಕ್ ಸವಾರನಿಗೆ ಗಂಭೀರ ಸ್ವರೂಪದ ಗಾಯ

ಬನ್ನೂರು, ಅ.30– ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರನೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ರಂಗಾಚಾರಿ ಹುಂಡಿ ಬಳಿ ಸಂಭವಿಸಿದೆ.

ಗಾಯಾಳುವನ್ನು ಸಮೀಪದ ಅತ್ತಹಳ್ಳಿ ಗ್ರಾಮದವನು ಎಂದು ಹೇಳಲಾಗುತ್ತಿದ್ದು, ಹೆಸರು ಮತ್ತು ವಿವರಗಳು ಲಭ್ಯವಾಗಿಲ್ಲ. ಗಾಯಾಳುವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಲಾರಿಯು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿದ್ದಾನೆ. ಲಾರಿ ಚಾಲಕ ಲಾರಿಯನ್ನು ಬಿಟ್ಟು ಪರಾರಿಯಾಗಿದ್ದು, ಬನ್ನೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ತಿ.ನರಸೀಪುರ ವೀರಶೈವ ಮಹಾಸಭಾ ಉಪಾಧ್ಯಕ್ಷರಾಗಿ ಕಿರಣ್ ಆಯ್ಕೆ



ತಿ.ನರಸೀಪುರ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಬುಧವಾರ ನಡೆದ ಮಹಾಸಭಾ ಸಭೆಯಲ್ಲಿ ನೂತನ ಉಪಾಧ್ಯಕ್ಷರಾಗಿ ಆಯ್ಕೆಗೊಂಡ ಎಸ್.ಕೆ.ಕಿರಣ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಅ.30– ಪಟ್ಟಣದ ವಿವೇಕಾನಂದ ನಗರದಲ್ಲಿರುವ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಬುಧವಾರ ನಡೆದ ಸಭೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕದ ನೂತನ ಉಪಾಧ್ಯಕ್ಷರನ್ನಾಗಿ ಎಸ್.ಕೆ. ಕಿರಣ್ ಅವರನ್ನು ಆಯ್ಕೆ ಮಾಡಲಾಯಿತು.

ವೀರಶೈವ ಮಹಾಸಭಾ ಸಂಘಟನೆಗೆ ಬಲವನ್ನು ತುಂಬಲು ಪುರಸಭೆ ಹಾಲಿ ಸದಸ್ಯರಾಗಿರುವ ಎಸ್.ಕೆ. ಕಿರಣ್ ಅವರನ್ನು ವಿವಿಧ ಮಠ, ಮಾನ್ಯಗಳ ಹರ–ಗುರು ಚರಮೂರ್ತಿಗಳ ಸಲಹೆ ಸೂಚನೆಯಂತೆ ಹಾಗೂ ಮಹಾಸಭಾ ಪದಾಧಿಕಾರಿಗಳ ಒಪ್ಪಿಗೆಯನ್ನು ಪಡೆದು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ, ಸನ್ಮಾನಿಸಲಾಯಿತು.

ನೂತನ ಉಪಾಧ್ಯಕ್ಷರಾದ ಬಳಿಕ ಕಿರಣ್ ಮಾತನಾಡಿ, ಮಹಾಸಭಾ ಕಾರ್ಯ ಚಟುವಟಿಕೆಗಳಲ್ಲಿ ಕ್ರಿಯಾಶೀಲನಾಗಿ, ಸಮುದಾಯದ ಹಿತವನ್ನು ಕಾಪಾಡಲು ಎಲ್ಲರೊಟ್ಟಿಗೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುತ್ತೇನೆ. ವೀರಶೈವ ಲಿಂಗಾಯತ ಸಮುದಾಯದ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ರೂಪಿಸಲು ಸದಾಕಾಲ ಚಿಂತನೆ ಮಾಡುತ್ತೇನೆ ಎಂದು ತಿಳಿಸಿದರು.

ವೀರಶೈವ ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್ ಮಾತನಾಡಿ, ಸಮುದಾಯದ ಸಂಘಟನೆಯ ಜವಾಬ್ದಾರಿಯನ್ನು ಯುವಕರಿಗೆ ನೀಡಬೇಕು. ಸಮುದಾಯದ ಮುಂದಾಳತ್ವವನ್ನು ವಹಿಸಿಕೊಳ್ಳಲು ಯುವಕರು ಮುಂದ ಬರಲು ಕಿರಣ್ ಅವರು ಸ್ಫೂರ್ತಿಯಾಗಲಿ ಎಂಬ ಉದ್ದೇಶದಿಂದ ಪುರಸಭೆ ಸದಸ್ಯರಾದ ಅವರಿಗೆ ಮಹಾಸಭಾ ಉಪಾಧ್ಯಕ್ಷ ಜವಾಬ್ದಾರಿಯನ್ನು ನೀಡಲಾಗಿದೆ ಎಂದು ತಿಳಿಸಿದರು.

ಮಹಾಸಭಾದ ಉಪಾಧ್ಯಕ್ಷರಾದ ಬಿ.ಎಂ.ಶಿವಮಲ್ಲಪ್ಪ, ಅಂಬಿಕಾ ಲೋಕೇಶ್, ಪ್ರಧಾನ ಕಾರ್ಯದರ್ಶಿ ಕುರುಬೂರು ಶಿವು, ನಿರ್ದೇಶಕರಾದ ಕೆ.ಎಂ.ಮಲ್ಲು, ಶಂಭುದೇವನಪುರ ಸುಗಂಧರಾಜು, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ಬೆನಕನಹಳ್ಳಿ ವಿಜಯಕುಮಾರ್, ಮುಖಂಡರಾದ ಹಿರಿಯೂರು ನವೀನ್, ಶಾಮಿಯಾನ ನಾಗೇಶ್, ಅಡುಗೆಪ್ರಭು, ಸಂತೋಷ್, ಕೈಯಂಬಳ್ಳಿ ಅಶೋಕ್, ಜೆ ಎಸ್ ಎಸ್ ಸಂತೋಷ್, ಅಡಿಟರ್ ಮಂಜು, ಪಿಂಕು, ಮಾಯಪ್ಪ ಹಾಗೂ ಇತರರು ಇದ್ದರು.

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ಸನ್ಮಾನ



ಗಾವಡಗೆರೆ ಶ್ರೀ ಶಿವ ಛತ್ರಪತಿ ಮರಾಠ ಶ್ರೇಯೋಭಿವೃದ್ಧಿ ಸಮಿತಿ ವತಿಯಿಂದ ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರನ್ನು ಸನ್ಮಾನಿಸಲಾಯಿತು.

ಹಿರೀಕ್ಯಾತನಹಳ್ಳಿ, ಅ.30– ಹುಣಸೂರು ತಾಲೂಕಿನ ಗಾವಡಗೆರೆ ಶ್ರೀ ಶಿವ ಛತ್ರಪತಿ ಮರಾಠ ಶ್ರೇಯೋಭಿವೃದ್ಧಿ ಸಮಿತಿ ವತಿಯಿಂದ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರನ್ನು ಸನ್ಮಾನಿಸಲಾಯಿತು.

ಗಾವಡೆಗೆರೆ ಗ್ರಾಮದಲ್ಲಿ ಶ್ರೀ ಶಿವ ಛತ್ರಪತಿ ಮರಾಠ ಶ್ರೇಯೋಭಿವೃದ್ಧಿ ಸಮಿತಿ ವತಿಯಿಂದ ನಿರ್ಮಾಣವಾಗುತ್ತಿರುವ ಸಮುದಾಯ ಭವನಕ್ಕೆ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಸುಮಾರು 3 ಲಕ್ಷ ಸಹಾಯಧನ ಮಾಡಿದ ಅವರನ್ನು ಇತ್ತೀಚೆಗೆ ಸಮಿತಿ ಸದಸ್ಯರು ಧರ್ಮಸ್ಥಳಕ್ಕೆ ಭೇಟಿ ನೀಡಿ ಅವರ ನಿವಾಸದಲ್ಲಿ ಅವರನ್ನು ಸನ್ಮಾನಿಸಿದರು. ಶ್ರೀ ಶಿವ ಛತ್ರಪತಿ ಮರಾಠ ಶ್ರೇಯೋಭಿವೃದ್ಧಿ ಸಮಿತಿ ಅಧ್ಯಕ್ಷ ಹೊನ್ನಪ್ಪ ರಾವ್ ಕಾಳಿಂಗೆ, ಉಪಾಧ್ಯಕ್ಷ ನಾಗರಾಜರಾವ್ ಮತಾಲೆ, ಕಾರ್ಯಾಧ್ಯಕ್ಷ ವೀರೇಶ್ ರಾವ್, ಕಾರ್ಯದರ್ಶಿ ಶ್ರೀನಾಥ್ ಸಮಿತಿ ಸದಸ್ಯರಾದ ಸತ್ಯಪ್ಪ, ನಾರಾಯಣ ರಾವ್, ಪ್ರವೀಣ್, ನಂಜುಂಡ ರಾವ್, ಮದನ್ ಬೋಡೆ, ನಾರಾಯಣ್ ರಾವ್ ಕದಂ, ಲಕ್ಷ್ಮಣರಾವ್ ಇದ್ದರು.

ನ.2, ಕಂತೇ ಮಹದೇಶ್ವರ ಬೆಟ್ಟದ ಜಾತ್ರಾ ಮಹೋತ್ಸವ

ಮಲ್ಕುಂಡಿ, ಅ.30– ನಂಜನಗೂಡು ತಾಲೂಕಿನ ತರಗನಹಳ್ಳಿ ಗ್ರಾಮದ ಸಮೀಪದ ಶ್ರೀಕಂತೆ ಮಹದೇಶ್ವರ ಬೆಟ್ಟದಲ್ಲಿ ನ.2 ರಂದು ದೀಪಾವಳಿ ಹಬ್ಬದ ಪ್ರಯುಕ್ತ ಜಾತ್ರಾ ಮಹೋತ್ಸವ ಮತ್ತು ಕೊಂಡೋತ್ಸವ ಜರುಗಲಿದೆ.

ಸುತ್ತೂರು ಕ್ಷೇತ್ರ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ದೇವನೂರು ಗುರುಮಲ್ಲೇಶ್ವರ ಮಠದ ಮಹಾಂತಸ್ವಾಮಿ, ಶಾಂತಮಲ್ಲಿಕಾರ್ಜುನ ವಿರಕ್ತ ಮಠದ ಇಮ್ಮಡಿ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಭಾಗವಹಿಸಲಿದ್ದು, ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಶ್ರೀ ಕಂತೆ ಮಹದೇಶ್ವರ ಶೀಲ ಮಠದ ಮಹಾಂತ ದೇಶಿಕೇಂದ್ರ ಸ್ವಾಮಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಕುರ್ಚಿ, ಮೇಜು, ಪುಸ್ತಕಗಳ ವಿತರಣೆ



ಪಿರಿಯಾಪಟ್ಟಣ ರೋಟರಿ ಮಿಡ್‌ಟೌನ್ ವತಿಯಿಂದ ಕಿರನಲ್ಲಿ ಪ್ರಾಥಮಿಕ ಶಾಲೆಯ ನಲಿಕಲಿ ವಿಭಾಗದ ವಿದ್ಯಾರ್ಥಿಗಳಿಗೆ ಕುರ್ಚಿ ಮತ್ತು ಮೇಜುಗಳನ್ನು ವಿತರಿಸುವ ಹಾಗೂ ಐದರಿಂದ ಏಳನೇ ತರಗತಿ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಮ್ಯಾತ್ ಮ್ಯಾಟಿಕ್ ಮತ್ತು ಸುಲಭವಾಗಿ ಆಂಗ್ಲ ಭಾಷೆಯ ಕಲಿಕೆಗೆ ಪೂರಕವಾದ ಪುಸ್ತಕಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ರೋಟರಿ ಅಧ್ಯಕ್ಷ ರಾಜೇಗೌಡ ಎಂ.ಎಂ, ಕಾರ್ಯದರ್ಶಿ ಐ.ಕೆ.ಪಿ ಹೆಗ್ಡೆ, ಸದಸ್ಯರಾದ ನಟರಾಜ್, ವಿನಯ ಶೇಖರ್, ಮಂಜುನಾಥ್, ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕ್ರೀಡಾಕ್ಷೇತ್ರದಲ್ಲಿ ಅತ್ಯುತ್ತಮ ಮಾರ್ಗದರ್ಶಕ ವಾಸುದೇವ್



ಸರಗೂರು ಕೊತ್ತೇಗಾಲ ಸರ್ಕಾರಿ ಪ್ರೌಢಶಾಲಾ ದೈಹಿಕ ಶಿಕ್ಷಕರಾಗಿ ಉತ್ತಮ ಸೇವೆಸಲ್ಲಿಸಿ ನಿವೃತ್ತಿ ಪಡೆದ ವಾಸುದೇವ್ ಹಾಗೂ ಅವರ ಶ್ರೀಮತಿ ಮಂಜುಳಾ ಅವರಿಗೆ ಕೊತ್ತೇಗಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವತಿಯಿಂದ ಬೀಳ್ಕೊಡುಗೆ ಸಮಾರಂಭ ನಡೆಸಲಾಯಿತು.

ಸರಗೂರು, ಅ.30– ಕ್ರೀಡಾ ಕ್ಷೇತ್ರದಲ್ಲಿ ವಾಸುದೇವ್ ಅವರು ಮಕ್ಕಳಿಗೆ ಅತ್ಯುತ್ತಮ ಮಾರ್ಗದರ್ಶಕರಾಗಿದ್ದರು ಎಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊತ್ತೇಗಾಲ ಮುಖ್ಯಶಿಕ್ಷಕ ಕೆ.ಎಂ.ನಾಗೇಂದ್ರಪ್ಪ ಅಭಿಪ್ರಾಯಪಟ್ಟರು.

ತಾಲೂಕಿನ ಕೊತ್ತೇಗಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ಉತ್ತಮ ಸೇವೆಸಲ್ಲಿಸಿ ನಿವೃತ್ತಿ ಪಡೆದ ವಾಸುದೇವ್ ಅವರು ಹೆಸರಿಗೆ ತಕ್ಕಂತೆ ಇವರು ಶಾಂತ ಸ್ವಭಾವ, ಕ್ರಿಯಾಶೀಲತೆ ಉಳ್ಳವರು, ಮಕ್ಕಳಿಗೆ ಬೋಧನಾ ಕ್ಷೇತ್ರದಲ್ಲಿ, ಅವರು ಅತ್ಯುತ್ತಮ ಮಾರ್ಗದರ್ಶಕರಾಗಿದ್ದರು. ಪ್ರತಿಭಾವಂತ ದೈಹಿಕ ಶಿಕ್ಷಕರಾದ ವಾಸುದೇವ್ ಶಾಲಾ ಮಕ್ಕಳನ್ನು ಜಿಲ್ಲಾ ಮಟ್ಟದ ಕ್ರೀಡಾ ಕೂಟ, ತಾಲೂಕು ಕ್ರೀಡಾಕೂಟ, ವಲಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ನಮ್ಮ ಶಾಲೆಯ ಪ್ರಶಸ್ತಿ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದರು.

ಇದೇ ಸಂದರ್ಭದಲ್ಲಿ ಕೊತ್ತೇಗಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ವಾಸುದೇವ್ ಹಾಗೂ ಅವರ ಶ್ರೀಮತಿ ಮಂಜುಳಾ ಅವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ಸರಗೂರು ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸತೀಶ್‌ಕುಮಾರ್ ಬಿ.ಎನ್, ಕಾರ್ಯದರ್ಶಿ ರಾಮೇಗೌಡ, ಉಪಾಧ್ಯಕ್ಷ ಟಿ.ಎಂ. ಸುರೇಶ್ ಕುಮಾರ್, ಖಜಾಂಚಿ ಹೆಚ್.ಬಿ. ಜ್ಯೋತಿ, ಜಿಲ್ಲಾ ಬಡ್ತಿ ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ಸೋಮಸುಂದರ್, ಉಪಾಧ್ಯಕ್ಷ ಸಿದ್ದರಾಜು, ಕೆಂಪರಾಮೇಗೌಡ, ಗುರುಸ್ವಾಮಿ, ಮಹೇಂದ್ರ, ರವಿ, ಶಾಂತವ್ವ ಹಂಪಣ್ಣವರ್, ಬಿ.ಆರ್.ಪಿ. ಜಾನ್ ಕೆನಡಿ, ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಲೋಕೇಶ್ ಡಿ, ಮತ್ತು ಮಂಜುನಾಥ್ ಹೆಚ್.ಡಿ, ಆಗತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಮುಖ್ಯ ಶಿಕ್ಷಕ ಸಿದ್ದರಾಜು, ದೈಹಿಕ ಶಿಕ್ಷಕ ಬಂಗಾರಯ್ಯ, ಇಓ ಚಿಕ್ಕನಾಯಕರು, ಪುರುಷೋತ್ತಮ್, ಬಂಡಳ್ಳಿ ರಾಜು, ನಾಗೇಂದ್ರ, ಮಹದೇವಸ್ವಾಮಿ, ಗ್ರಾಮ ಪಂಚಾಯಿತಿ ಅಧ್ಯಕ್ಷರು ಸರ್ವಸದಸ್ಯರು, ಎಸ್‌ಡಿಎಂಸಿ ಅಧ್ಯಕ್ಷರು ಸದಸ್ಯರು, ಕೊತ್ತೇಗಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕ ವೃಂದ, ಮಕ್ಕಳು ಗ್ರಾಮಸ್ಥರು ಉಪಸ್ಥಿತರಿದ್ದರು.

ಐದು ದಿನಗಳ ಕಾಲ ಲಲಿತ ಕಲಾ ಶಿಬಿರ

ಹುಣಸೂರು, ಅ.30– ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಮೈಸೂರಿನ ಬಾ ಸೃಷ್ಟಿ ತಂಡದ ವತಿಯಿಂದ ತಾಲೂಕಿನ ಮುಳ್ಳೂರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಅ.31 ರಿಂದ ನ.3 ರವರೆಗೆ ಬೆಳಗ್ಗೆ 10.30 ರಿಂದ ಸಂಜೆ 4 ಗಂಟೆಯವರೆಗೆ ಐದು ದಿನಗಳ ಕಾಲ ಲಲಿತ ಕಲಾ ಶಿಬಿರವನ್ನು ಏರ್ಪಡಿಸಲಾಗಿದೆ ಎಂದು ಬಾ ಸೃಷ್ಟಿ ತಂಡದ ಚೇತನ್ ಜಗಪತ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಬಿರದಲ್ಲಿ ಕಾಗದದ ಕತ್ತರಿ ಕಲೆ, ಕಾಗದದಲ್ಲಿ ಹಲವಾರು ಕಲಾಕೃತಿಗಳನ್ನು ತಯಾರಿಸುವುದು ಮುಖವಾಡಗಳು, ಕಿರೀಟಗಳು, ಭಿತ್ತಿಚಿತ್ರ ಹಾಗೂ ಚಿತ್ರಕಲೆಗಳನ್ನು ಹೇಳಿಕೊಡಲಾಗುವುದು. ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ರಾಷ್ಟ್ರಪತಿ ಪದಕ ವಿಜೇತ, ಉತ್ತಮ ಶಿಕ್ಷಣ ರಾಜ್ಯ ಪ್ರಶಸ್ತಿ ವಿಜೇತ, ಹಾಗೂ ಒರಿಗಾಮಿ ಕಲಾವಿದರಾದ ಹೆಚ್.ವಿ.ಮುರಳೀಧರ್ ಭಾಗವಹಿಸಿ ಮಕ್ಕಳಿಗೆ ಚಿತ್ರಕಲೆಯನ್ನು ಹೇಳಿಕೊಡಲಿದ್ದಾರೆ. ಅಲ್ಲದೆ ಮೈಸೂರಿನ ಬಿ.ಎಫ್.ಎಎಸ್.ಎಫ್ ಹುಸೇನಿ ಹಾಗೂ ಕಲಬುರ್ಗಿಯ ಮಂಜುನಾಥ್ ಸಿಂಧೆ ಅವರುಗಳು ಶಿಬಿರದ ಸಂಪಲ್ಮೂಲ ವ್ಯಕ್ತಿಗಳಾಗಿ ಆಗಮಿಸಲಿದ್ದಾರೆ.

ನಿಧನ



ಈಶ್ವರೇಗೌಡ

ಪಿರಿಯಾಪಟ್ಟಣ, ಅ.30– ತಾಲೂಕಿನ ಬೆಟ್ಟದಪುರ ಸಮೀಪದ ಭುವನಹಳ್ಳಿ ಗ್ರಾಮದ ಯಜಮಾನ್ ಈಶ್ವರೇಗೌಡ (72) ಇಂದು ನಿಧನ ಹೊಂದಿದ್ದಾರೆ. ದಿವಂಗತರು ಪತ್ನಿ ಜಯಮ್ಮ, ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸಂಜೆ ಅವರ ಜಮೀನಿನಲ್ಲಿ ನೆರವೇರಿಸಲಾಯಿತು. ಇವರ ನಿಧನಕ್ಕೆ ಭುವನಹಳ್ಳಿ ಗ್ರಾಮಸ್ಥರು, ಹಲವಾರು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸರೋಜಮ್ಮ



ಹಿರೀಕ್ಯಾತನಹಳ್ಳಿ, ಅ.30– ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಸರೋಜಮ್ಮ (79) ಬುಧವಾರ ಸಂಜೆ ನಿಧನರಾದರು.

ವೀರಶೈವ ಸಮಾಜದ ಮುಖಂಡರಾಗಿದ್ದ ಲೇಟ್ ಪುಟ್ಟಣ್ಣಯ್ಯ ಅವರ ಪತ್ನಿ, ಸರೋಜಮ್ಮ ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ 12 ಗಂಟೆಗೆ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಬಸವರಾಜು (ಸ್ವಾಮಿ)

ಪಿರಿಯಾಪಟ್ಟಣ, ಅ.30– ತಲಕಾಡಿನ ವೀರಶೈವ ಮುಖಂಡ ಹಾಲಿ ಮೈಸೂರಿನ ಜೆ.ಪಿ.ನಗರದ ನಿವಾಸಿ ಪಿ.ಎಸ್. ಬಸವರಾಜು (ಸ್ವಾಮಿ) ಬುಧವಾರ ಮಧ್ಯಾಹ್ನ ನಿಧನ ಹೊಂದಿದ್ದಾರೆ.

ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದು, ಬಸವರಾಜುರವರ ಮೃತದೇಹ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಇರಿಸಲಾಗಿದ್ದು, ಅಮೆರಿಕದಲ್ಲಿರುವ ಮೃತರ ಪುತ್ರಿ ಆಗಮಿಸಿದ ನಂತರ ನ.2 ರಂದು ಮಧ್ಯಾಹ್ನ ತಲಕಾಡಿನಲ್ಲಿರುವ ಅವರ ತೋಟದಲ್ಲಿ ಅಂತ್ಯಕ್ರಿಯೆ ನಡೆಸಲಾಗುತ್ತದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿದೆ.

ಚಿಕ್ಕತಾಯಮ್ಮ



ಹುಣಸೂರು, ಅ.30– ತಾಲೂಕು ರೈತ ಸಂಘದ ಉಪಾಧ್ಯಕ್ಷರು ಮತ್ತು ಕಾಳೇಗೌಡನಕೊಪ್ಪಲಿನ ನಿವಾಸಿ ಬಸವರಾಜೇಗೌಡರ ತಾಯಿ ಚಿಕ್ಕತಾಯಮ್ಮ ಮಂಗಳವಾರ ನಿಧನರಾದರು.

ದಿವಂಗತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಕಾಳೇಗೌಡನಕೊಪ್ಪಲಿನಲ್ಲಿರುವ ಸ್ವಂತ ಜಮೀನಿನಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿತು. ತಾಲೂಕು ರೈತ ಸಂಘದ ಅಧ್ಯಕ್ಷ ಹೊಸೂರು ಕುಮಾರ್, ಬಿ.ಕೆ. ಚಿಕ್ಕಣ್ಣ, ಜಯಣ್ಣ, ವಿಷಕಂಠಪ್ಪ, ಧನಂಜಯ, ಸೋಮಶೇಖರ್, ಗಣೇಶ್‌ಗೌಡ, ಚಂದ್ರೇಗೌಡರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಆನೆಕಾಲು ರೋಗ ಪತ್ತೆಗೆ ರಾತ್ರಿ ರಕ್ತಲೇಪನ ತೆಗೆಯುವ ಕಾರ್ಯ

ಹೆಚ್.ಡಿ.ಕೋಟೆ ತಾಲೂಕು ಮಾದಾಪುರದಲ್ಲಿ 5 ತಂಡಗಳ ರಚನೆ



ಹೆಚ್.ಡಿ.ಕೋಟೆ ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆನೆಕಾಲು ರೋಗ ಪತ್ತೆ ಹಚ್ಚುವ ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ/ಹಂಪಾಪುರ, ಅ.30– ಫೈಲೇರಿಯ ಎಂದರೆ ಆನೆಕಾಲು ರೋಗ. ಇದು ಒಂದು ಸೂಕ್ಷ್ಮಾಣು ಜೀವಿಯಿಂದ ಉಂಟಾಗುವ ಕಾಯಿಲೆ ಎಂದು ತಿಳಿಸಿದ ತಾಲೂಕು ಆರೋಗ್ಯ ಅಧಿಕಾರಿ ಡಾ. ರವಿಕುಮಾರ್ ಈ ರೋಗ ಪತ್ತೆಗೆ ರಾತ್ರಿ ರಕ್ತಲೇಪನ ತೆಗೆಯುವ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದರು.

ತಾಲೂಕಿನ ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ಮಾದಾಪುರ ಗ್ರಾಮದಲ್ಲಿ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳ ಕಚೇರಿ, ಮೈಸೂರು ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಹೆಚ್.ಡಿ. ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಾದಾಪುರ ವತಿಯಿಂದ ಆನೆಕಾಲು ರೋಗ ಪತ್ತೆ ಹಚ್ಚುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ತಾಲೂಕಿನಲ್ಲಿ ನಾಲ್ಕು ಗ್ರಾಮಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಗುರುತಿಸಿದ್ದು, ಅದರಂತೆ ಇಂದು ಮಾದಾಪುರ ಗ್ರಾಮದಲ್ಲಿ ಫೈಲೇರಿಯ ರಾತ್ರಿ ರಕ್ತ ಲೇಪನ ತೆಗೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಇದು ಸೋಂಕು ತಗುಲಿದ ಕ್ಯುಲೆಕ್ಸ್ ಹೆಣ್ಣು ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಸಾಮಾನ್ಯವಾಗಿ ಈ ಕ್ಯುಲೆಕ್ಸ್ ಸೊಳ್ಳೆಗಳು ರಾತ್ರಿ ಹೊತ್ತಿನಲ್ಲಿ ಕಚ್ಚುತ್ತವೆ, ಈ ರೋಗದ ಮುನ್ನೆಚ್ಚರಿಕೆಯಾಗಿ ಇಲಾಖೆ ವತಿಯಿಂದ ರಾತ್ರಿ ರಕ್ತಲೇಪನ ಸಂಗ್ರಹಿಸಿ, ಅದನ್ನು ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿ ಪ್ರಾರಂಭಿಕ ಹಂತದಲ್ಲಿ ಪತ್ತೆ ಹಚ್ಚಿ ಚಿಕಿತ್ಸೆ ನೀಡಲಾಗುತ್ತದೆ. ಈ ರೋಗ ನಿಯಂತ್ರಣದಲ್ಲಿ ಸಾರ್ವಜನಿಕರ ಪಾತ್ರ ಅತಿ ಮುಖ್ಯ, ಮಾದಾಪುರ ಗ್ರಾಮದಲ್ಲಿ 5 ತಂಡಗಳನ್ನು ರಚಿಸಿ ಮನೆ ಮನೆಗೆ ಹೋಗಿ ರಾತ್ರಿ ರಕ್ತಲೇಪನ ತೆಗೆಯಲಾಗುತ್ತದೆ ಎಂದು ತಿಳಿಸಿದರು,

ಆನೆಕಾಲು ರೋಗದ ಲಕ್ಷಣಗಳು: ಸಾಮಾನ್ಯವಾಗಿ ಸೋಂಕು ತಗುಲಿದ ಸೊಳ್ಳೆ ಕಚ್ಚಿದ ಒಂದು ವಾರದಲ್ಲಿ ಜ್ವರ, ಮೈ ಕೈ ನೋವು, ದುಗ್ಧ ಗ್ರಂಥಿಗಳಲ್ಲಿ ನೋವು ಕಾಣಿಸುತ್ತದೆ. ನಂತರ ಯಾವುದೇ ಲಕ್ಷಣಗಳು ಇರುವುದಿಲ್ಲ. ಆದರೆ 8–10 ವರ್ಷ ಕಳೆದ ಮೇಲೆ ಮನುಷ್ಯರ ಕಾಲು ಆನೆಯ ಕಾಲಿನಂತೆ ದಪ್ಪವಾಗುವುದು. ಇದನ್ನು ವಾಸಿ ಮಾಡಲು ಆಗುವುದಿಲ್ಲ. ಚರ್ಮದಲ್ಲಿ ಬಿರುಕುಗಳು ಆಗುವುದು ಮತ್ತು ಗಾಯ ಬೇಗ ವಾಸಿಯಾಗದೇ ಇರುವುದು. ಗಂಡಸರಿಗೆ ಬೀಜ ಚೀಲ ನೀರು ತುಂಬಿ ದಪ್ಪವಾಗುವುದು. ನಂತರದ ದಿನಗಳಲ್ಲಿ ನಡೆಯಲು ಕಷ್ಟವಾಗುತ್ತದೆ ಮತ್ತು ಇತರೆ ಕಾಯಿಲೆಗಳಿಗೆ ಕಾರಣವಾಗುವುದು ಎಂದರು.

ಆನೆಕಾಲುರೋಗದ ನಿಯಂತ್ರಣದ ಮುಖ್ಯವಿಧಾನ: ಈ ಸೊಳ್ಳೆಗಳು ಗಲೀಜು ನೀರಿನಲ್ಲಿ (ಚರಂಡಿ, ಕೊಳಚೆ ನೀರು, ಶೇಖರಣಾ ಸ್ಥಳ, ಕಕ್ಕಸ್ಸು, ಗುಂಡಿ ಇತರೆ) ಬೆಳೆಯುವುದರಿಂದ, ಮನುಷ್ಯ ವಾಸಿಸುವ ಕನಿಷ್ಠ ಮೂರು ಕಿ.ಮೀ. ವ್ಯಾಪ್ತಿಯಲ್ಲಿ ಗಲೀಜು ನೀರು ಇಲ್ಲದಂತೆ ನೋಡಿಕೊಳ್ಳಬೇಕು.

ಡಾ. ಸುವರ್ಣ, ಡಾ. ಬಿಂದು ವರ್ದಿನಿ, ಪ್ರತಿಭಾ ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ, ಮಾದಾಪುರ ಆಸ್ಪತ್ರೆಯ ಡಾ.ಚಂದ್ರಕಲಾ, ಹೆಚ್.ಎಸ್. ಕಾಂತರಾಜು, ಗ್ರಾಮ ಪಂಚಾಯತಿ ಸದಸ್ಯ ನಾಗೇಶ್, ತಾಲೂಕು ಮೇಲ್ವಿಚಾರಕ ನಾಗೇಂದ್ರ ಹಾಜರಾಗಿದ್ದರು. ತಾಲೂಕಿನ ಮೇಲ್ವಿಚಾರಕ ನಾಗೇಂದ್ರ ರವಿರಾಜ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಪ್ರಶಾಂತ್ ಕಿ.ಆ.ನಿ.ಅಧಿಕಾರಿಗಳಾದ ಪಾಲಾಕ್ಷ, ಪ್ರದೀಪ, ಪ್ರಾ.ಆ.ಸು.ಅಧಿಕಾರಿಗಳಾದ ಶೀಲಾ, ಮಾದಮ್ಮ, ಔಷಧ ವಿತರಕ ವೀಣಾ ಬಳೆಗಾರ, ಸಿ.ಹೆಚ್.ಓ ದೊರೆ, ಜಯಂತಿ, ಶಶಿರೇಖಾ ಸ್ವಯಂ ಸೇವಕರಾದ ಸುದೀಪ್, ಚೇತನ್, ಮೆಹಬೂಬ್, ವೀರೇಶ, ಅಮಿತ್, ಅಶ್ವಿನಿ, ಬೀರೇಶ್, ಪ್ರ.ಶಾ.ತಂ. ಅಧಿಕಾರಿಯಾದ ವೀಣಾರವರು ಸೇರಿ ಗ್ರಾಮದಲ್ಲಿ ರಾತ್ರಿ ರಕ್ತಲೇಪನ ಕಾರ್ಯವನ್ನು ಮಾಡಿದರು. ಹಾಗೂ ಗ್ರೂಪ್ ನೌಕರರಾದ ಹೊನ್ನಮ್ಮ, ದೇವಮ್ಮ ಮತ್ತು ಗ್ರಾಮಸ್ಥರು ಹಾಜರಾಗಿದ್ದರು.

ಮೈಸೂರು ಮಿತ್ರ

ನಿರ್ವಹಣೆ ಇಲ್ಲದೆ ಶಿಥಿಲಾವಸ್ಥೆ ತಲುಪಿರುವ

ಗಾಂಧಿನಗರ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಕಟ್ಟಡಗಳು

ಕರ್ನಾಟಕ ದಲಿತ ಪ್ಯಾಂಥರ್ಸ್ ಆರೋಪ





- ಅಂಚೆ ಕಚೇರಿ, ಸಾರ್ವಜನಿಕ ಗ್ರಂಥಾಲಯವೂ ಸ್ಥಳಾಂತರ
- ಜನಾಂಗದ ಬಡವರಿಗೆ ಶವ ಸಂಸ್ಕಾರ, ವಿದ್ಯಾಭ್ಯಾಸಕ್ಕೆ ಸಹಾಯಧನವೂ ಇಲ್ಲ
- ವಾರ್ಷಿಕ ಸಾಮಾನ್ಯ ಸಭೆ ಕರೆಯುತ್ತಿಲ್ಲ, ಸ್ಥಳೀಯರಿಗೆ ಸದಸ್ಯತ್ವವೂ ಇಲ್ಲ.



ಮೈಸೂರು, ಅ.30– ಮೈಸೂರಿನ ಗಾಂಧಿನಗರದ ಆದಿ ಕರ್ನಾಟಕ ಜನರ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರದಿಂದ ನೀಡಲಾದ ನಿವೇಶನಗಳು ಹಾಗೂ ಅಲ್ಲಿ ನಿರ್ಮಿಸಿದ್ದ ಕಟ್ಟಡಗಳು ಗಾಂಧಿನಗರ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ನಿರ್ಲಕ್ಷ್ಯತೆಯಿಂದಾಗಿ ಶಿಥಿಲಾವಸ್ಥೆ ತಲುಪಿದೆ ಎಂದು ಕರ್ನಾಟಕ ದಲಿತ ಪ್ಯಾಂಥರ್ಸ್ ಆರೋಪಿಸಿದೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಕರ್ನಾಟಕ ದಲಿತ ಪ್ಯಾಂಥರ್ಸ್ ಅಧ್ಯಕ್ಷ ಯೋಗಾನರಸಿಂಹಸ್ವಾಮಿ ಅವರು, ಗಾಂಧಿನಗರದ ಆದಿ ಕರ್ನಾಟಕ ಜನರ ಶೈಕ್ಷಣಿಕ ಹಾಗೂ ಆರ್ಥಿಕ ಏಳಿಗೆಗಾಗಿ ಅಲ್ಲಿನ ಯಜಮಾನರು, ಗಡಿಮನೆ ಉಸ್ತಾದುಗಳು ಮತ್ತು ಖಲೀಫರನ್ನೊಳಗೊಂಡ ಸಮಿತಿಯನ್ನು 1964–65ರಲ್ಲಿ ಸ್ಥಾಪಿಸಲಾಗಿದ್ದು, ಈ ಸಂಘಕ್ಕೆ ಅಂದಿನ ಸಿಐಟಿಬಿ (ಹಾಲಿ ಮುಡಾ)ಯಿಂದ ವಿವಿಧ ಅಳತೆಯ 10 ನಿವೇಶನಗಳನ್ನು ನೀಡಲಾಗಿತ್ತು ಎಂದು ತಿಳಿಸಿದ್ದಾರೆ.

ಮೈಸೂರು ನಗರ ಪಾಲಿಕೆಯ ಶೇ.22.7ರ ಅನುದಾನದಲ್ಲಿ ಸಮುದಾಯ ಭವನ, ಗ್ರಂಥಾಲಯ, ಅಂಚೆ ಕಚೇರಿ, ಸುಸಜ್ಜಿತ ಸಭಾಂಗಣ ಹಾಗೂ ಅಂಗಡಿ ಮಳಿಗೆಗಳನ್ನು ನಿರ್ಮಿಸಲಾಗಿತ್ತು. ಆದರೆ ಅದನ್ನು ನಿರ್ವಹಣೆ ಮಾಡಬೇಕಾದ ಮೈಸೂರು ಗಾಂಧಿನಗರದ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ನಿರ್ಲಕ್ಷ್ಯತೆಯಿಂದಾಗಿ ಎಲ್ಲಾ ಕಟ್ಟಡಗಳೂ ಶಿಥಿಲಾವಸ್ಥೆ ತಲುಪಿವೆ. ಅಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಂಚೆ ಕಚೇರಿ ಹಾಗೂ ಸರ್ಕಾರಿ ಗ್ರಂಥಾಲಯ ಈಗ ಇಲ್ಲವಾಗಿದೆ. ಹಲವಾರು ಅಂಗಡಿ ಮಳಿಗೆಗಳು ಶಿಥಿಲಾವಸ್ಥೆ ತಲುಪಿ ಮುಚ್ಚಲ್ಪಟ್ಟಿದೆ. ಸಭಾಂಗಣವೂ ಕೂಡ ನಿರ್ವಹಣೆ ಇಲ್ಲದೆ ಉಪಯೋಗಿಸಲು ಸಾಧ್ಯವಾಗದಂತಹ ಸ್ಥಿತಿ ತಲುಪಿದ್ದು, ಗಿಡ–ಗಂಟಿಗಳು ಬೆಳೆದು ನಿಂತಿವೆ ಎಂದು ಆರೋಪಿಸಿದ್ದಾರೆ.



ಜನಾಂಗದ ಏಳಿಗೆಗಾಗಿ ಸ್ಥಾಪಿಸಲ್ಪಟ್ಟ ಆದಿ ಕರ್ನಾಟಕ ಅಭಿವೃದ್ಧಿ ಸಂಘದಿಂದ ಜನಾಂಗದ ಕಡು ಬಡವರ ಶವ ಸಂಸ್ಕಾರಕ್ಕೆ ಹಾಗೂ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಧನ ಸಹಾಯ ನೀಡುತ್ತಿಲ್ಲ. ಗಾಂಧಿನಗರದಲ್ಲಿ ಸುಮಾರು 20 ಸಾವಿರ ಜನಸಂಖ್ಯೆ ಇದ್ದರೂ ಅಲ್ಲಿನ ನಿವಾಸಿಗಳಿಗೆ ಸದಸ್ಯತ್ವ ನೀಡುತ್ತಿಲ್ಲ. ಸಂಘದ ನಿರ್ದೇಶಕರಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವೇ ಇಲ್ಲದಂತಾಗಿದೆ. ಸಂಘದ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯದೇ ಇರುವುದರಿಂದ ಅಲ್ಲಿನ ಆಗು–ಹೋಗುಗಳ ಬಗ್ಗೆ ಜನಾಂಗದವರಿಗೆ ಏನೂ ತಿಳಿಯದಂತಾಗಿದೆ. ಅಲ್ಲದೇ ಜನಾಂಗದ ರುದ್ರಭೂಮಿಯನ್ನು ನಿರ್ವಹಣೆ ಮಾಡದೇ ಇರುವುದರಿಂದ ಶೋಚನೀಯ ಸ್ಥಿತಿ ತಲುಪಿದೆ ಎಂದು ಆಪಾದಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಬ್ಲಡಿ ಬೆಗ್ಗರ್ (ಇಂ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಎಲ್ಲಿಗೆ ಪಯಣ ಯಾವುದೋ ದಾರಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಬಘೀರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇಟೇಯನ್ (ತ)	4 ಪ್ರದರ್ಶನಗಳು
ಪ್ರಭಾ	
ಅಂಜದಗಂಡು (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಕ್ಕಿ ಭಾಸ್ಕರ್ (ತೆ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಲಕ್ಕಿ ಭಾಸ್ಕರ್ (ಮ): ರಾ.9.55ಕ್ಕೆ.
ಸ್ಕ್ರೀನ್ 2	ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.10.55ಕ್ಕೆ, ಬ್ಲಡಿ ಬೆಗ್ಗರ್ (ತ): ಮ.1.20ಕ್ಕೆ, ಬ್ರದರ್ (ತ): ಸಂ.4.20ಕ್ಕೆ, ಬಘೀರ (ಕ): ರಾ.7.05ಕ್ಕೆ, ಕ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ಅಮರನ್ (ತ): ಬೆ.10.05ಕ್ಕೆ, ಮ.1.15ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಅನ್ನ (ಕ): ಸಂ.4.30ಕ್ಕೆ.
ಸ್ಕ್ರೀನ್ 4	ಬಘೀರ (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಹರ್ಷ

ನಾನೆಂದು ಪ್ರಶಸ್ತಿ ಹಿಂದೆ ಹೋದವನಲ್ಲ...!

ಮೈಸೂರು, ಅ.30(ಎಂಕೆ)– ಪ್ರತಿಷ್ಠಿತ ಮೈಸೂರು ರಂಗಾಯಣದ ಮಾಜಿ ನಿರ್ದೇಶಕ, ರಂಗಕರ್ಮಿ ಹೆಚ್.ಜನಾರ್ಧನ(ಜನ್ನಿ) ಅವರಿಗೆ ಪ್ರಸಕ್ತ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ.



ಮೈಸೂರಿನ ಬೋಗಾದಿಯಲ್ಲಿ ನೆಲೆಸಿರುವ 64 ವರ್ಷದ ಜನ್ನಿ, ರಾಷ್ಟ್ರೀಯ ನಾಟಕ ಶಾಲೆ(ಎನ್‌ಎಸ್‌ಡಿ) ರಂಗಭೂಮಿ ಅಭಿನಯ ತರಬೇತಿಯೊಂದಿಗೆ ಭಾರತೀಯ ರಂಗಭೂಮಿಯಲ್ಲಿ ಕ್ರಿಯಾಶೀಲರಾಗಿದ್ದರು. ದಲಿತ ಚಳುವಳಿ ಹಾಗೂ ಸಮುದಾಯ ರಂಗಚಳುವಳಿಯ ಮೂಲಕ ರಂಗಪ್ರವೇಶ ಮಾಡಿ, ದಿವಂಗತ ಕೀರಂ ನಾಗರಾಜು ಅವರ ಸಾರಥ್ಯದಲ್ಲಿ ಇವರ ಕಾವ್ಯರಂಗ ಪ್ರಯೋಗಗಳಾದ ಸಿಂಗಿರಾಜ ಸಂಪಾದನೆ, ಸಮಗಾರ ಭೀಮವ್ವ, ಅಲ್ಲೆಕುಂತವರೇ, ಕೊಲೆಯ ಹಿಂದಿನ ರಾತ್ರಿ, ಕತ್ತೆ ಮತ್ತು ಧರ್ಮ, ಕಲ್ಕಿ ಮತ್ತು ನಾಗಿ, ಪ್ರಯೋಗಗಳನ್ನು ಪರಿಣಾಮಕಾರಿಯಾಗಿ ಮಾಡಿದ್ದಾರೆ. ಸಮಾಜಮುಖಿ ನಿಲುವಿನೊಂದಿಗೆ ಜನಮನದ ಜೀವನಾಡಿಯಾಗಿ ನಾಡಿನಾದ್ಯಂತ ತಮ್ಮ ಜಾನಪದ ಹಾಡುಗಳಿಂದಲೂ ಜನಮನ್ನಣೆ ಗಳಿಸಿದ್ದಾರೆ.

ಹಲವಾರು ಬೀದಿ ನಾಟಕಗಳು ಸೇರಿದಂತೆ ಗಿರೀಶ್ ಕಾರ್ನಾಡರ 'ಹಯವದನ', 'ಬ್ರೆಕ್ಟ್‌ನ ತಾಯಿ', ತೇಜಸ್ವಿಯವರ 'ಕುಬಿ ಮತ್ತು ಇಯಾಲ', ಯು.ಆರ್.ಅನಂತಮೂರ್ತಿ ಅವರ 'ಸಂಸ್ಕಾರ', 'ಕತ್ತಲೆದಾರಿ ದೂರ' 'ಚೋರ ಚರಣದಾಸ', 'ಶಿಶುನಾಳ ಶರೀಫ', 'ಕುರಿ' ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ದೇವನೂರು ಮಹಾದೇವರ 'ಕುಸುಮಬಾಲೆ', 'ಒಡಲಾಳ', ಡಾ.ಚಂದ್ರಶೇಖರ ಕಂಬಾರರ 'ತುಕ್ರನ ಕನಸು', 'ಮಹಾಮಾಯಿ', ಲಂಕೇಶರ ಮುಟ್ಟಿಸಿಕೊಂಡವನು' ಸೇರಿದಂತೆ ಹಲವಾರು ನಾಟಕಗಳ ನಿರ್ದೇಶಿಸಿದ್ದಾರೆ.

ರಂಗಭೂಮಿ ಮತ್ತು ರಂಗಕರ್ಮಿಗಳಿಗೆ ಸಂದ ಗೌರವ: ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸಂದಿರುವ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಈ ಪ್ರಶಸ್ತಿ ಕನ್ನಡ ರಂಗಭೂಮಿ ಹಾಗೂ ರಂಗಕರ್ಮಿಗಳಿಗೆ ಕೊಟ್ಟಿರುವ ಗೌರವವಾಗಿದೆ. ನಾನೆಂದೂ ಪ್ರಶಸ್ತಿ ಹಿಂದೆ ಹೋದವನಲ್ಲ. ಆದರೂ ಸೇವೆ ಪರಿಗಣಿಸಿ, ಪ್ರಶಸ್ತಿ ನೀಡಿರುವುದನ್ನು ಸ್ವಾಗತಿಸುತ್ತೇನೆ. ಈ ಮೂಲಕ ರಂಗಭೂಮಿ ಕ್ಷೇತ್ರ ಬೆಳೆಯಲಿ, ಮುಂದಿನ ಪೀಳಿಗೆಗೆ ದಾರಿಯಾಗಲಿ ಎಂದು ಬಯಸುತ್ತೇನೆ ಎಂದರು.

ಬಹಳ ಪ್ರಮುಖವಾದ ಪ್ರಶಸ್ತಿಗಳು ಆಯಾ ಕ್ಷೇತ್ರದಲ್ಲಿ ದುಡಿದಂತಹವರಿಗೆ ಅವರ ಪರಿಣತಿಯ ಹಿನ್ನಲೆ, ನಡೆದು ಬಂದಂತಹ ದಾರಿ, ಇಟ್ಟಂತಹ ಬೆಂಕಿಯ ಹೆಜ್ಜೆಗಳನ್ನು ನೋಡಿ ಸೃಜನಶೀಲವಾಗಿ ಕೆಲಸ ಮಾಡಿದ್ದಾರೆಯೇ ಎಂಬುದನ್ನು ಪರಿಶೀಲಿಸಿ ನೀಡಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿ, ಸಾಧಕರಿಗೆ ಗೌರವ ತಂದಿದೆ. ರಂಗಭೂಮಿ ಬದುಕು ಯಾವಾಗಲೂ ಸಾಹಿತ್ಯ, ಸಂಸ್ಕೃತಿ ಮತ್ತು ಸಂಶೋಧನೆ ಹಾದಿಯಾಗಿದೆ. ಯುವ ಪೀಳಿಗೆ ಪ್ರಯೋಗಗಳೆಂಬ ಸೃಜನಾತ್ಮಕ ಹಾದಿಯಲ್ಲಿ ಸಾಗಬೇಕು ಎಂಬುದೇ ನನ್ನ ಆಶಯ ಎಂದರು.

ಹಿರಿಯ ಕ್ಲಾರಿಯೋನೆಟ್ ವಾದಕ ರಾಮು ಅವರದ್ದು ಅಪೂರ್ವ ಸಾಧನೆ

ಮೈಸೂರು, ಅ.30(ಎಂಕೆ)– ಸಂಗೀತ ಕ್ಷೇತ್ರದಲ್ಲಿ 45 ವರ್ಷಗಳ ಕಾಲ ಸೇವೆ ಸಲ್ಲಿಸಿದ ಮೈಸೂರಿನ ಹಿರಿಯ ಕ್ಲಾರಿಯೋನೆಟ್ ವಾದಕ ಡಿ.ರಾಮು ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.



ಲೇಟ್ ದಾಸಪ್ಪ ಹಾಗೂ ಲೇಟ್ ಶ್ರೀಮತಿ ಲಕ್ಷ್ಮಮ್ಮ ದಂಪತಿ ಪುತ್ರರಾದ 87 ವರ್ಷದ ಡಿ.ರಾಮು ಮೈಸೂರಿನ ಹಿರಿಯ ಕ್ಲಾರಿಯೋನೆಟ್ ವಾದಕರಾಗಿದ್ದಾರೆ. ಮೈಸೂರು ಆಕಾಶವಾಣಿ ಹಿರಿಯ ವಿದ್ವಾಂಸರಾದ ಎ.ಎ.ನಾರಾಯಣಪ್ಪ, ಖ್ಯಾತ ಆಂಗ್ಲ ಸಂಗೀತ ವಿದ್ವಾಂಸರಾದ ಜಿ.ಎಂ.ಪೆರೇರ ಅವರ ಬಳಿ ಸಂಗೀತ ಅಭ್ಯಾಸ ನಡೆಸಿರುವ ಅವರು, ಕರ್ನಾಟಕ ಶಾಸ್ತ್ರೀಯ ಹಾಗೂ ಟ್ರಿನಿಟಿ ಲಂಡನ್ ಸಂಗೀತದಲ್ಲಿ 45 ವರ್ಷ ಅನುಭವ ಪಡೆದಿದ್ದಾರೆ.

ಚಾಮುಂಡೇಶ್ವರಿ, ಕೊಟ್ಟೂರಪ್ಪ, ಹಿರಣಯ್ಯ ಮಿತ್ರ, ಶೇಷಾಚಾರ್ ನಾಟಕ ಕಂಪನಿಗಳು ಹಾಗೂ ಮೈಸೂರು ಅನಂತಸ್ವಾಮಿ ಸಂಗಡ ಅನೇಕ ವರ್ಷಗಳ ಸೇವೆ ಸಲ್ಲಿಸಿದ್ದು, ಪ್ರಖ್ಯಾತ ಕಲಾವಿದ ಕಾಳಿಂಗ ರಾವ್, ಬೆಂಗಳೂರಿನ ಪರಮ ಶಿವನ್ ನಾಟಕ ಕ್ಷೇತ್ರ ಕೆಲಸ ಮಾಡಿರುವ ಡಿ.ರಾಮು ಅವರು, ಸಾವಿರಕ್ಕೂ ಹೆಚ್ಚು ರಂಗಗೀತೆಗಳಿಗೆ ಕ್ಲಾರಿಯೋನೆಟ್ ವಾದ್ಯ ಸಹಕಾರ ನೀಡಿದ್ದಾರೆ. ಸಂಗೀತ ಕ್ಷೇತ್ರದಲ್ಲಿ ನೀಡಿರುವ ಸೇವೆಯನ್ನು ಪರಿಗಣಿಸಿ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದು ಸಂತಸ ತಂದಿದೆ ಎಂದು 'ಮೈಸೂರು ಮಿತ್ರ'ನಲ್ಲಿ ಹರ್ಷ ವ್ಯಕ್ತಪಡಿಸಿದ ಅವರು, 1954 ರಿಂದಲೂ ಕ್ಲಾರಿಯೋನೆಟ್ ವಾದನ ನುಡಿಸುತ್ತಿದ್ದೇನೆ. ಮೈಸೂರಿನ ಪ್ರೀಮಿಯರ್ ಸ್ಟುಡಿಯೋನಲ್ಲಿ 'ಅಪೂರ್ವ ಚಿಂತಾಮಣಿ' ಚಿತ್ರಕ್ಕೆ ಸಂಗೀತ ನಿರ್ದೇಶಕರಾದ ಪಿ.ಶಾಮಣ್ಣ, ಶ್ರೀನಿವಾಸ್ ಅಯ್ಯಂಗಾರ್ ಅವರೊಂದಿಗೆ ಕ್ಲಾರಿಯೋನೆಟ್ ನುಡಿಸಿದ್ದೆ ಎಂದು ಮೆಲುಕು ಹಾಕಿದರು.

ಶಂಕರ್ ಸಿಂಗ್ ನಿರ್ದೇಶನದ ಅಲ್ಲಮ್ಮ ಪ್ರಭು ಚಿತ್ರದಲ್ಲಿ ಹಿನ್ನೆಲೆ ಸಂಗೀತಗಾರನಾಗಿದ್ದೆ. ಅಲ್ಲಿಂದ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಜೊತೆ ಬೇರೆ ಬೇರೆ ರಾಜ್ಯಗಳಲ್ಲಿ, ವಿದೇಶಗಳಲ್ಲಿ ಸಂಗೀತ ಸೇವೆ ನೀಡಿದ್ದೇನೆ. ಎಂ.ಪಿ.ಶಂಕರ್, ತೂಗದೀಪ ಶ್ರೀನಿವಾಸ್, ನರಸಿಂಹರಾಜು, ಸರೋಜದೇವಿ ನಟಿಸಿರುವ ಎಚ್ಚಮ್ಮ ನಾಯಕ ನಾಟಕಗಳಲ್ಲಿ ಹಿನ್ನೆಲೆ ಸಂಗೀತ ನೀಡಿದ್ದೇನೆ. ಇಷ್ಟು ವರ್ಷಗಳ ಸಂಗೀತ ಸೇವೆ ಹಲವಾರು ಪ್ರಶಸ್ತಿಗಳು ಬಂದಿದ್ದು, ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದು ಸಂತಸ ತಂದಿದೆ ಎಂದರು.

ಶಿಲ್ಪಿ ಅರುಣ್ ಯೋಗಿರಾಜ್ ಹರ್ಷ

ಮೈಸೂರು, ಅ.30(ಪಿಎಂ)– ಅಯೋಧ್ಯೆ ಶ್ರೀರಾಮ ಮಂದಿರದ ಬಾಲರಾಮ ವಿಗ್ರಹ ಕೆತ್ತನೆಯ ಮೂಲಕ ಇಡೀ ದೇಶದಲ್ಲಿ ಖ್ಯಾತನಾಮರಾಗಿರುವ ಶಿಲ್ಪಿ ಅರುಣ್‌ಯೋಗಿರಾಜ್ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿದ್ದಾರೆ.



1983ರಲ್ಲಿ ಮೈಸೂರಿನಲ್ಲಿ ಜನಿಸಿದ ಅರುಣ್ ಯೋಗಿರಾಜ್ ಅವರಿಗೆ ಶಿಲ್ಪಕಲೆಯಲ್ಲಿ ಸ್ಫೂರ್ತಿ ಮತ್ತು ಆರಂಭಿಕ ಶಿಕ್ಷಣವು ಅವರ ಮನೆಯಿಂದಲೇ ಆರಂಭವಾಯಿತು. ಶಿಲ್ಪಕಲೆಯಲ್ಲಿ ಇವರ ಕುಟುಂಬವು ಐದು ತಲೆಮಾರುಗಳ ಪರಂಪರೆ ಹೊಂದಿದೆ. ಅರುಣ್ ಯೋಗಿರಾಜ್ ಅವರ ತಂದೆ ಯೋಗಿರಾಜ್ ಸಹ ನುರಿತ ಶಿಲ್ಪಿಯಾಗಿದ್ದರು.

ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿ ದೂರವಾಣಿಯಲ್ಲಿ ಮಾತನಾಡಿದ ಅವರು, ಸದ್ಯ ನಾನೀಗ ನೆದರ್‌ಲ್ಯಾಂಡ್‌ನಲ್ಲಿದ್ದೇನೆ. ನನಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ಅತ್ಯಂತ ಸಂತಸ ಉಂಟು ಮಾಡಿದೆ. ಎಲ್ಲರ ಆಶೀರ್ವಾದದಿಂದ ಅಯೋಧ್ಯೆಯ ಬಾಲರಾಮ ಸೇರಿದಂತೆ ದೇಶದ ಹಲವೆಡೆ ಶಿಲ್ಪ ಕೆತ್ತನೆಯ ಕೆಲಸ ಮಾಡಿದ್ದೇನೆ. ಇದನ್ನು ಪರಿಗಣಿಸಿ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಗೆ ನನ್ನ ಪರಿಗಣಿಸಿರುವುದು ಖುಷಿ ತಂದಿದೆ. ನಾನು ಪ್ರಶಸ್ತಿಗಾಗಿ ಅರ್ಜಿ ಹಾಕಿರಲಿಲ್ಲ. ಆದರೂ ಗುರುತಿಸಿ ಪ್ರಶಸ್ತಿ ನೀಡಿದ್ದಾರೆ. ಇದಕ್ಕಾಗಿ ಧನ್ಯವಾದ ಅರ್ಪಿಸುತ್ತೇನೆ. ನ.3ರಂದು ನೆದರ್‌ಲ್ಯಾಂಡಿನಲ್ಲಿ ನನ್ನ ನಿಗದಿತ ಕಾರ್ಯಕ್ರಮವಿದ್ದು, ಇದಕ್ಕೂ ಮುನ್ನ ದೇಶಕ್ಕೆ ಮರಳಿ ನ.1ರ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದೇನೆ ಎಂದು ತಿಳಿಸಿದರು.

ಸಂಗೀತ-ನೃತ್ಯ ಸಾಧನೆಗೆ ಸಂದ ಗೌರವ

ಮೈಸೂರು, ಅ.30(ಎಂಕೆ)– ಮೈಸೂರು ನೃತ್ಯ–ಸಂಗೀತ ಪರಂಪರೆಯನ್ನು ಮುನ್ನಡೆಸಬೇಕೆನ್ನುವ ಉದ್ದೇಶದಿಂದ ಕಾರ್ಯೋನ್ಮುಖರಾಗಿ ಸಾಗಿದ್ದಕ್ಕೆ ಸಂದ ಗೌರವ ಇದಾಗಿದೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮೈಸೂರಿನ ಹಿರಿಯ ಭರತನಾಟ್ಯ ಕಲಾವಿದೆ ಶ್ರೀಮತಿ ವಿದುಷಿ ಲಲಿತಾ ರಾವ್(ಲಲಿತಾ ಕೋರೆ ಎಂ.ರಾವ್) ಹರ್ಷ ವ್ಯಕ್ತಪಡಿಸಿದರು.




ನಾಟ್ಯರಾಣಿ ಶಾಂತಲಾ, ಪದ್ಮಭೂಷಣ, ಸಂಗೀತ ಕಲಾರತ್ನ ಡಾ.ಕೆ. ವೆಂಕಟಲಕ್ಷ್ಮಮ್ಮ ಅವರ ಶಿಷ್ಯೆಯಾಗಿ 1957ರಲ್ಲಿ ಪಾಠಕ್ಕೆ ಸೇರಿಕೊಂಡೆ ಎನ್ನುತ್ತಾ 'ಮೈಸೂರು ಮಿತ್ರ'ನೊಂದಿಗೆ ಮಾತು ಆರಂಭಿಸಿದ ಅವರು, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ತುಂಬಾ ಖುಷಿ ತಂದಿದೆ. ಭರತನಾಟ್ಯದಲ್ಲಿ ಮೈಸೂರು ಶೈಲಿ ನೃತ್ಯ ಪ್ರಾಕಾರ ಉಳಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದರ ಪ್ರತಿಫಲ ಇದಾಗಿದೆ ಎಂದರು. 1971ರಲ್ಲಿ ಬೋಗಾದಿ 2ನೇ ಹಂತದಲ್ಲಿ ಶಾಂತಲಾ ನೃತ್ಯಕಲಾನಿಕೇತನ ಭರತನಾಟ್ಯ ನೃತ್ಯ ತರಬೇತಿ ಸಂಸ್ಥೆ ಆರಂಭಿಸಿ, ಸಾವಿರಾರು ಶಿಷ್ಯರಿಗೆ ನೃತ್ಯಾಭ್ಯಾಸ ಹೇಳಿಕೊಟ್ಟಿದ್ದೇನೆ. ಅವರೆಲ್ಲರೂ ದೇಶ–ವಿದೇಶಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. 1963ರಲ್ಲಿ ನಾನು ಮಂಗಳೂರಿನಲ್ಲಿ ಮೊದಲು ಭರತನಾಟ್ಯ ನೃತ್ಯ ಪ್ರದರ್ಶನ ನೀಡಿದೆ. ಅಲ್ಲಿಂದ ಸತತ 53 ವರ್ಷಗಳಿಂದ ನೃತ್ಯ ಕಲಾ ಶಿಕ್ಷಣದ ಜೊತೆ ಜೊತೆಗೆ ದೇಶದ ಬಹುತೇಕ ರಾಜ್ಯಗಳಲ್ಲಿ ಪ್ರದರ್ಶನ ನೀಡುತ್ತಾ ಬಂದಿದ್ದೇನೆ ಎಂದು ತಿಳಿಸಿದರು.

2016ರಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ನೀಡಿದ್ದೇನೆ. ಮೈಸೂರು ದಸರಾ ಮಹೋತ್ಸವ ಸಾಂಸ್ಕೃತಿಕ ವೇದಿಕೆಗಳಲ್ಲಿ ಸಾಕಷ್ಟು ಬಾರಿ ಪ್ರದರ್ಶನ ನೀಡಿದ್ದೇನೆ. ಅವುಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನೃತ್ಯ ಅಕಾಡೆಮಿಯ ಕಾರ್ಯಕ್ರಮಗಳೇ ಹೆಚ್ಚು ಎಂದು ಮೆಲುಕು ಹಾಕಿದರು.

ನನ್ನ ಕರ್ತವ್ಯ ಮೈಸೂರು ಭರತನಾಟ್ಯ ನೃತ್ಯ ಪರಂಪರೆಯನ್ನು ಬೆಳೆಸುವುದಷ್ಟೇ ಆಗಿತ್ತು. ಆ ಮಾರ್ಗವಾಗಿ ನಿಷ್ಠೆಯಿಂದ ನನ್ನ ಕರ್ತವ್ಯವನ್ನು ಮಾಡಬೇಕು ಎಂಬ ಧ್ಯೆಯ ಇಲ್ಲಿಯವರೆಗೆ ಸಾಗಿ ಬಂದಿದ್ದೇನೆ. ಸದ್ಯಕ್ಕೆ ಬೆಂಗಳೂರಿನಲ್ಲಿ ವಾಸವಿದ್ದು, ಇಲ್ಲಿಯೂ ನೃತ್ಯ ಶಾಲೆ ಆರಂಭಿಸಿದ್ದೇನೆ ಎಂದು 78 ವರ್ಷ ಹಿರಿಯ ಕಲಾವಿದೆ ತಮ್ಮ ಅನುಭವ, ಸಾಧನೆಯನ್ನು ಹಂಚಿಕೊಂಡರು.

ಸರ್ಕಾರಿ ಮುದ್ರಣಾಲಯದ ನಿವೃತ್ತ ನೌಕರನಿಗೆ ಅಭಿನಂದನೆ



ಮೈಸೂರು ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯದ ನೌಕರ ಹಾಗೂ ನೌಕರರ ಸಂಘದ ಕಾರ್ಯದರ್ಶಿ ಎನ್. ರಾಜುರವರು ನಿವೃತ್ತಿಯಾಗಿದ್ದು, ಅವರನ್ನು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಸಂತೋಷ್, ದೇವರಾಜ್ ಮತ್ತಿತರರು ಉಪಸ್ಥಿತರಿದ್ದರು.

ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದ ನಾಲ್ವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಅ.30(ಬಿಎಲ್‌ಯು)– ಮೈಸೂರಲ್ಲಿ ಸಾರ್ವಜನಿಕ ರಸ್ತೆಯಲ್ಲಿ ಪಟಾಕಿ ಬಾಂಬ್ ಸಿಡಿಸುವಂತೆ ಪ್ರವಾಸಿಗರು, ವಿದೇಶಿಗರು ಹಾಗೂ ಸಾರ್ವಜನಿಕರಲ್ಲಿ ಭಯ ಉಂಟು ಮಾಡುತ್ತಿದ್ದ ನಾಲ್ವರು ಕಿಡಿಗೇಡಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರ ಕಚೇರಿ ತಿಳಿಸಿದೆ.

ಮೈಸೂರಿನ ಆಲ್ಬರ್ಟ್ ವಿಕ್ಟರ್ ರಸ್ತೆ, ನಗರ ಬಸ್ ನಿಲ್ದಾಣದಲ್ಲಿ ವ್ಯಕ್ತಿಯೊಬ್ಬ ತೆಂಗಿನ ಗರಿಯನ್ನು ಹಾವಿನ ಹಾಗೆ ರೂಪಿಸಿ, ರಸ್ತೆಯಲ್ಲಿ ಅದನ್ನು ಬಿಟ್ಟು ದಾರಿಹೋಕರಲ್ಲಿ ಭಯ ಉಂಟು ಮಾಡಿ, ಸಾರ್ವಜನಿಕರ ಓಡಾಟಕ್ಕೆ ಅಡ್ಡಿ ಉಂಟು ಮಾಡುತ್ತಿದ್ದ. ಮತ್ತೊಬ್ಬ ಅದೇ ರಸ್ತೆಯಲ್ಲಿ 'ಪಟಾಕಿ ಬಾಂಬ್' ಅನ್ನು ಫುಟ್‌ಪಾತ್‌ನಲ್ಲಿ ಇಟ್ಟು ಅದನ್ನು ಹಚ್ಚುವ ಹಾಗೆ ವರ್ತಿಸಿ, ಭಯ ಉಂಟು ಮಾಡುತ್ತಿದ್ದ. ಹೀಗೆ ಭಯ ಉಂಟು ಮಾಡುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚಿಗೆ ಹರಿದಾಡುತ್ತಿತ್ತು.

ಈ ವಿಡಿಯೋ ವೀಕ್ಷಣೆ ಮಾಡುತ್ತಿದ್ದ ಸಾರ್ವಜನಿಕರು ಕಿಡಿಗೇಡಿಗಳ ಕೃತ್ಯಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ನಾಲ್ವರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು, ಕಾನೂನು ಕ್ರಮ ಜರುಗಿಸಲಾಗಿದೆ ಎಂದು ಪೊಲೀಸ್ ಆಯುಕ್ತರ ಕಚೇರಿ ತಿಳಿಸಿದೆ.

ಮಾರ್ಬಳ್ಳಿಯಲ್ಲಿ ಬಿಎಂಸಿ ಕೇಂದ್ರ ಉದ್ಘಾಟನೆ



ಮಾರ್ಬಳ್ಳಿ ಹಾಲು ಉತ್ಪಾದಕರ ಸಂಘದ ಬಿಎಂಸಿ ಕೇಂದ್ರ ಮತ್ತು ಕಟ್ಟಡದ ಉದ್ಘಾಟನೆಯನ್ನು ಶಾಸಕ ಜಿ.ಟಿ.ದೇವೇಗೌಡರು ಇತ್ತೀಚೆಗೆ ನೆರವೇರಿಸಿದರು. ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಆರ್.ಚೆಲುವರಾಜು, ಮಾಜಿ ಅಧ್ಯಕ್ಷ ಉಮಾಶಂಕರ್, ಮುಖಂಡರಾದ ಲೀಲಾ ನಾಗರಾಜು, ಗುರುಸ್ವಾಮಿ, ಮಾರ್ಬಳ್ಳಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಶ್ರೀಮಂತಪ್ಪ, ಉಪಾಧ್ಯಕ್ಷ ಎಂ.ಎನ್.ಕುಮಾರ್, ನಿರ್ದೇಶಕರಾದ ಸಿ.ದೇವಣ್ಣ, ಚನ್ನರಾಜನಾಯಕ, ವೆಂಕಟಪ್ಪ, ಸೋಮಣ್ಣ, ಮಂಟೇಸ್ವಾಮಿ, ನಾಗೇಂದ್ರ, ಶಿವರಾಜು, ಕಮಲಮ್ಮ, ಜವರಾಜು ಮತ್ತಿತರರು ಹಾಜರಿದ್ದರು.

ಮುಡಾ ಅನುಮೋದಿತ ಖಾಸಗಿ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ

ಹಸ್ತಾಂತರಿಸಲು, ಇ–ಖಾತೆಯಲ್ಲಿ ನೋಂದಾಯಿಸಲು 3 ತಿಂಗಳ ಕಾಲಮಿತಿ ನೀಡಿ

ನಗರಾಭಿವೃದ್ಧಿ ಇಲಾಖೆ ಸರ್ಕಾರದ ಕಾರ್ಯದರ್ಶಿಗಳಿಗೆ ಎಂಎಲ್‌ಸಿ ಕೆ.ವಿವೇಕಾನಂದ ಪತ್ರ

ಮೈಸೂರು,ಅ.30(ಪಿಎಂ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅನುಮೋದಿತ ಖಾಸಗಿ ಬಡಾವಣೆಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಮತ್ತು ಇ–ಖಾತೆ ಮೂಲಕ ನೋಂದಾಯಿಸಿಕೊಳ್ಳಲು ಕನಿಷ್ಠ ಮೂರು ತಿಂಗಳ ಕಾಲಮಿತಿ ನೀಡುವಂತೆ ನಗರಾಭಿವೃದ್ಧಿ ಇಲಾಖೆ ಸರ್ಕಾರದ ಕಾರ್ಯದರ್ಶಿಗಳನ್ನು ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಪತ್ರ ಮುಖೇನ ಕೋರಿದ್ದಾರೆ.



ಮುಡಾದಿಂದ ಅನುಮೋದನೆಗೊಂಡಿರುವ ಖಾಸಗಿ ಬಡಾವಣೆಗಳನ್ನು ಸಂಬಂಧಿಸಿದ ನಗರಪಾಲಿಕೆ, ನಗರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದೆ. ಅಲ್ಲದೆ, ಇ–ಖಾತೆ ಮೂಲಕ ನೋಂದಾಯಿಸಿಕೊಳ್ಳಲು ಸಬ್‌ರಿಜಿಸ್ಟ್ರಾರ್‌ಗಳಿಗೆ ಸರ್ಕಾರದಿಂದ ಆದೇಶ ಸಹ ಆಗಿದೆ. ಆದರೆ ಈ ಸಂಬಂಧ ಸ್ಥಳೀಯ ಸಂಸ್ಥೆಗಳಿಗೆ ಯಾವುದೇ ಸೂಕ್ತ ಮಾರ್ಗಸೂಚಿ ಹೊರಡಿಸಲಾಗಿಲ್ಲ. ಜೊತೆಗೆ ಮೈಸೂರು ನಗರದಲ್ಲಿ ಹೆಚ್ಚಾಗಿ ಮುಡಾ ವ್ಯಾಪ್ತಿಗೆ ಒಳಪಡುವ ನಿವೇಶನಗಳಿದ್ದು (ಸುಮಾರು 900ಕ್ಕೂ ಹೆಚ್ಚು), ಸ್ಥಳೀಯ ಸಂಸ್ಥೆಗಳಿಗೆ ದಾಖಲಾತಿಗಳನ್ನು ಹಸ್ತಾಂತರ ಮಾಡಲು ಇದುವರೆಗೂ ಮುಡಾದಿಂದ ಯಾವುದೇ ಕ್ರಮವಾಗಿಲ್ಲ. ಸಾರ್ವಜನಿಕರು ಯಾವುದೇ ಸಾಲ ಸೌಲಭ್ಯ ಪಡೆಯಲು ಇ–ಖಾತೆ ಅಗತ್ಯವಿದೆ. ಇ–ಖಾತೆ ಇಲ್ಲದ ಮತ್ತು ಸಬ್‌ರಿಜಿಸ್ಟ್ರಾರ್‌ಗಳಲ್ಲಿ ನೋಂದಾಯಿಸಿಕೊಳ್ಳದ ಕಾರಣ ರೈತರು, ಜನಸಾಮಾನ್ಯರಿಗೆ ತೀವ್ರ ತೊಂದರೆ ಉಂಟಾಗಿದೆ. ಜೊತೆಗೆ ಸಬ್‌ರಿಜಿಸ್ಟ್ರಾರ್‌ಗಳಲ್ಲಿ ಆದಾಯ ಶೇ.20ಕ್ಕೆ ಇಳಿಕೆಯಾಗಿದೆ. ಅಲ್ಲದೆ, ಶೇ.80ರಷ್ಟು ಆದಾಯ ಸರ್ಕಾರಕ್ಕೂ ನಷ್ಟವಾಗುತ್ತಿದೆ. ಆದ್ದರಿಂದ ಸರ್ಕಾರವು ಖಾಸಗಿ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಮತ್ತು ಇ–ಖಾತೆ ಮೂಲಕ ನೋಂದಣಿ ಮಾಡಿಸಲು ಕನಿಷ್ಠ 3 ತಿಂಗಳ ಕಾಲವಕಾಶ ನೀಡಬೇಕೆಂದು ಪತ್ರದಲ್ಲಿ ಕೋರಿದ್ದಾರೆ.


ವಕ್ಫ್ ಆಸ್ತಿ ವಿಚಾರದಲ್ಲಿ ಬಿಜೆಪಿ ರಾಜಕೀಯ!

ಬೆಂಗಳೂರು, ಅ.30(ಕೆಎಂಶಿ)–ವಕ್ಫ್ ಆಸ್ತಿ ವಿಚಾರದಲ್ಲಿ ಯಾವುದೇ ವಿವಾದ ಇಲ್ಲದಿದ್ದರೂ ಚುನಾವಣೆ ಉದ್ದೇಶದಿಂದ ಬಿಜೆಪಿ ನಾಯಕರು ರಾಜಕೀಯ ಮಾಡಲು ಹೊರಟಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಟೀಕಿಸಿದ್ದಾರೆ.



ಐರಾವತ ಕ್ಲಬ್ ಕ್ಲಾಸ್ 2.0 ನೂತನ ಬಸ್‌ಗಳ ಸಂಚಾರಕ್ಕೆ ಹಸಿರು ನಿಶಾನೆ ತೋರಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ರೈತರನ್ನು ಅವರ ಜಮೀನುಗಳಿಂದ ಒಕ್ಕಲೆಬ್ಬಿಸುವುದಿಲ್ಲ, ರೈತರಿಗೆ ನೀಡಿರುವ ನೋಟಿಸ್‌ಗಳನ್ನು ವಾಪಸ್ಸು ಪಡೆಯಲಾಗುವುದು ಎಂದು ಪುನರ್ ಉಚ್ಚರಿಸಿದರು. ರೈತರ ಜಮೀನು ವಕ್ಫ್ ಆಸ್ತಿ ಎಂದು ನೋಟಿಸ್ ನೀಡಿರುವುದನ್ನು ಖಂಡಿಸಿ ಸಂಸದ ತೇಜಸ್ವಿ ಸೂರ್ಯ ಸೇರಿದಂತೆ ಬಿಜೆಪಿ ನಾಯಕರು ಪ್ರತಿಭಟನೆಗೆ ಸಜ್ಜಾಗುತ್ತಿದ್ದಾರೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಜಯರಾಮು ರವರು

ಇವರು ದಿನಾಂಕ 21-10-2024ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಉತ್ತರಕ್ರಿಯಾದಿ ಭೂಶಾಂತಿಯನ್ನು ದಿನಾಂಕ 31-10-2024ನೇ ಗುರುವಾರ ಬೆಳಿಗ್ಗೆ 9 ಗಂಟೆಯಿಂದ 11 ಗಂಟೆಯವರೆಗೆ ಕುಂಬಾರಕೊಪ್ಪಲಿನ ರುದ್ರಭೂಮಿಯಲ್ಲಿ ಏರ್ಪಡಿಸಿದ್ದು, ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಸಿದ್ದಮ್ಮ ಜಯರಾಮು : ಮಗಳು ಮಂಜುಳ ಸತೀಶ್ : ಅಳಿಯ ಸತೀಶ್ : ಮೊಮ್ಮಗಳು: ತನ್ಮಯಿ, ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು ಮತ್ತು ಗ್ರಾಮಸ್ಥರು.



ಹಸಿರು ನಮ್ಮ ಉಸಿರು



ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ., (ರಿ)

ಪ್ರಧಾನಕಛೇರಿ: #1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–4 ಫೋ: 2330014, 2334140
ಶಾಖಾ ಕಛೇರಿ: # ಸಿ ಎ 16, 2ನೇ ಹಂತ ವಿಜಯನಗರ, ಮೈಸೂರು–17 ಫೋ: 2411556

"ಸಂಘದ ಸದಸ್ಯ ಬಾಂಧವರಿಗೆ ಕನ್ನಡ ರಾಜ್ಯೋತ್ಸವದ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು"

ದಿನಾಂಕ: 01/11/2024ನೇ ಶುಕ್ರವಾರ ಶಾಖಾ ಕಛೇರಿಯಲ್ಲಿ ಬೆಳಿಗ್ಗೆ:8.30 ಘಂಟೆಗೆ ಹಾಗೂ ಪ್ರಧಾನ ಕಛೇರಿಯಲ್ಲಿ ಬೆಳಿಗ್ಗೆ: 9.30 ಘಂಟೆಗೆ ಕನ್ನಡ ರಾಜ್ಯೋತ್ಸವದ ಧ್ವಜಾರೋಹಣ ಹಾಗೂ "ಧನಲಕ್ಷ್ಮೀ ಪೂಜೆ"ಯನ್ನು ಏರ್ಪಡಿಸಲಾಗಿದ್ದು ಸದಸ್ಯರು ಭಾಗವಹಿಸಬೇಕಾಗಿ ವಿನಂತಿ.

ಸಂಘದಲ್ಲಿ ಹೊಸ ಠೇವಣಾತಿ ಯೋಜನೆಯನ್ನು ದಿನಾಂಕ: 10/10/2024ರಿಂದ ಜಾರಿಗೆ ಬರುವಂತೆ ಪ್ರಾರಂಭಿಸಲಾಗಿದ್ದು, ಸದಸ್ಯ ಬಾಂಧವರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

ಕನಿಷ್ಠ ಮೊತ್ತ : ರೂ. ಒಂದು ಲಕ್ಷ (ಲಕ್ಷಗಳ ಗುಣಾಂಕದಲ್ಲಿ ಮಾತ್ರ)
ಅವಧಿ : ಮೂರು ವರ್ಷಗಳಿಗೆ

- 60 ವರ್ಷಕ್ಕಿಂತ ಒಳಪಟ್ಟ ವಯೋಮಾನ ಸದಸ್ಯರಿಗೆ ಬಡ್ಡಿದರ: ಶೇಕಡ 8 (8%)
- 60 ವರ್ಷದಿಂದ 69 ವರ್ಷಗಳ ವಯೋಮಾನ ಸದಸ್ಯರಿಗೆ : ಶೇಕಡ 8.5(8.5%)
- 70 ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟ ವಯೋಮಾನ ಸದಸ್ಯರಿಗೆ : ಶೇ9 (9%)
- ಸೈನಿಕರಿಗೆ/ ಮಾಜಿ ಸೈನಿಕರಿಗೆ ಮತ್ತು ವಿಕಲಚೇತನರಿಗೆ ಶೇಕಡ 8.5 (8.5%)

ಹೆಚ್ಚಿನ ವಿವರಗಳಿಗೆ ಸಂಘದ ವ್ಯವಹಾರದ ವೇಳೆಯಲ್ಲಿ ಮಾಹಿತಿ ಪಡೆಯತಕ್ಕದ್ದು

2023–24ನೇ ಸಾಲಿನ ಲಾಭಾಂಶವನ್ನು ವಿತರಿಸಲಾಗುತ್ತಿದ್ದು, ಸದಸ್ಯರು ಸಂಘದ ಷೇರು ಪಾಸ್ ಪುಸ್ತಕವನ್ನು ತಂದು ಸಂಘದ ವ್ಯವಹಾರದ ವೇಳೆಯಲ್ಲಿ ಪಡೆಯಬಹುದು. 2020–21ನೇ ಸಾಲಿನಿಂದ ಲಾಭಾಂಶ ಪಡೆಯದೇ ಇರುವ ಸದಸ್ಯರು ದಿನಾಂಕ:31/12/2024ರ ಒಳಗೆ ಪಡೆಯಲು ಅವಕಾಶವಿರುತ್ತದೆ. ಪಡೆಯದೇ ಇದ್ದ 2020–21ನೇ ಸಾಲಿನ ಸದಸ್ಯರ ಲಾಭಾಂಶವನ್ನು ಸಂಘದ ಉಪನಿಯಮ 91ರಂತೆ ಕ್ರಮವಿಡಲಾಗುವುದು.

ಶುಭಕೋರುವವರು:

ಶ್ರೀ ಎಂ ಡಿ ಗೋಪಿನಾಥ್	ಶ್ರೀಮತಿ ಎಂ ಎನ್ ಸೌಮ್ಯ	ಶ್ರೀ ಕೆ ನಾಗರಾಜು
ಅಧ್ಯಕ್ಷರು,	ಉಪಾಧ್ಯಕ್ಷರು,	ಖಜಾಂಚಿ,

ನಿರ್ದೇಶಕರು: ಸಹಕಾರ ರತ್ನ ಶ್ರೀ ಸಿ ವಿ ಪಾರ್ಥಸಾರಥಿ, ಶ್ರೀ ಹೆಚ್. ಎಸ್ ಪ್ರಶಾಂತ್ ತಾತಾಚಾರ್, ಶ್ರೀ ಎಂ. ಆರ್ ಬಾಲಕೃಷ್ಣ, ಶ್ರೀ ಚೇತನ್ ಹೆಚ್ ಪಿ, ಶ್ರೀ ಎನ್ ಫಣಿರಾಜ್, ಶ್ರೀಮತಿ ಮಹಿಮಾ ಪಿ, ಶ್ರೀ ವಿಕ್ರಂ ಕೆ, ಶ್ರೀಮತಿ ನಾಗಶ್ರೀ ಎನ್, ಶ್ರೀ ಕೆ ಎಸ್ ಅರುಣ್, ಶ್ರೀ ಶಿವರುದ್ರಪ್ಪ, ಶ್ರೀಮತಿ ಎಸ್ ರಾಜಮ್ಮ, ಶ್ರೀಮತಿ ಶಾಶ್ವತಿ ನಾಯಕ ಎಂ ಪಿ ಹಾಗೂ ಪ್ರಭಾರ ಕಾರ್ಯದರ್ಶಿ ಶ್ರೀಮತಿ ಎನ್ ವೀಣಾ ಮತ್ತು ಸಿಬ್ಬಂದಿ ವರ್ಗದವರು.

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
ಸಹಿ/–ಪ್ರಭಾರ ಕಾರ್ಯದರ್ಶಿ

ಕರ್ನಾಟಕ ಕಾವಲುಪಡೆ ರಾಜ್ಯಾಧ್ಯಕ್ಷರಾದ
ಶ್ರೀ ಎಂ. ಮೋಹನ್ ಕುಮಾರ್‌ಗೌಡ
ರವರಿಗೆ ಹುಟ್ಟು ಹಬ್ಬದ ಶುಭಾಶಯಗಳು



ಶುಭಕೋರುವವರು : ರವೀಂದ್ರ ಟಿ, ರಾಜ್ಯ ಕಾರ್ಯದರ್ಶಿ